ಸಾಹಿತ್ಯ ದಾಸೋಹ ೨೧೪

ಜೂನ್ ೨೦೨೩


೨೪/೦೬/೨೦೨೩ರಂದು ನಡೆದ
ದಾಸೋಹದ ಬರಹಗಳ ಸಂಕಲನ











ಸಮನ್ವಯ ಸಮಿತಿ ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ವೇದಿಕೆ

ಸಮನ್ವಯ ಸಮಿತಿ ಕನ್ನಡವೇ ಸತ್ಯ

ನೋಡಿಯೋ ಸಾಹಿತ್ಯ ದಾಸೋಹ ವೇದಿಕೆ



ಸಾಹಿತ್ಯ ದಾಸೋಹ ೨೧೪

ಗೂಗಲ್ ಮೀಟ್‌ನಲ್ಲಿ

ದಿನಾಂಕ : ೨೪/೦೬/೨೦೨೩
ಶನಿವಾರ ಮಧ್ಯಾಹ್ನ ೩.೩೦ಕ್ಕೆ

ಅಧ್ಯಕ್ಷತೆ:
ಶ್ರೀಮತಿ ಎಂ ಎಚ್ ಸುವರ್ಣಲಕ್ಷ್ಮಿ

ಕತೆ,ಕವನ,ಪ್ರಬಂಧ,ಲೇಖನ,ಕೀರ್ತನೆ ಇತ್ಯಾದಿಗಳ ಸ್ವಂತ ರಚನೆಗಳಿಗೆ ಮಾತ್ರ ಸ್ವಾಗತ.

ಪ್ರಸ್ತುತಪಡಿಸುವವರು ಮೊದಲೇ ನೋಡಿಯೋ ಸಾಹಿತ್ಯ ದಾಸೋಹ ವೇದಿಕೆಯಲ್ಲಿ ನೋಂದಾಯಿಸಿಕೊಳ್ಳಬೇಕು ಮತ್ತು ಲೇಖನಗಳನ್ನು ಅಧ್ಯಕ್ಷರ ದೂರವಾಣಿ ಸಂಖ್ಯೆ 9341748571ಗೆ ೨೨/೦೬/೨೦೨೩ ಗುರುವಾರದೊಳಗೆ ಕಳಿಸಿಕೊಡಬೇಕು. ಇಲ್ಲದಿದ್ದರೆ ಪ್ರಸ್ತುತಿಗೆ ಅವಕಾಶವಿಲ್ಲ.

ಪ್ರಸ್ತುತಿಗೆ ಗರಿಷ್ಠ ಕಾಲಮಿತಿ ಆರು ನಿಮಿಷಗಳು.

ಪ್ರೇಕ್ಷಕರಾಗಿ ಭಾಗವಹಿಸಲೂ ಸ್ವಾಗತವಿದೆ.

ದಾಸೋಹದಲ್ಲಿ ಪ್ರಸ್ತುತಿಯಾದ ಲೇಖನಗಳನ್ನು ಒಂದು ವಾರದೊಳಗೆ ಶ್ರೀ ಶೃಂಗೇಶ್ವರ ಶರ್ಮ ದೂರವಾಣಿ ಸಂ:9448291329 ಅವರಿಗೆ ಕಳುಹಿಸಿಕೊಡಬೇಕು

ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ದಾಸೋಹವನ್ನು ಯಶಸ್ವಿ ಗೊಳಿಸಿ.

ಸಂಚಾಲಕ ಸಮಿತಿ

ನ್ವಯ ಸಮಿತಿ ಕನ್ನಡವೇ ಸತ್ಯ ವೇದಿಕೆ

ಸಾಹಿತ್ಯ ದಾಸೋಹ ೨೧೪

ಪ್ರಸ್ತುತಿ ಪಡಿಸಿದವರ ಪಟ್ಟಿ

ಅಧ್ಯಕ್ಷೀಯ ನುಡಿಗಳು-**ಶ್ರೀಮತಿ ಸುವರ್ಣಲಕ್ಷ್ಮಿ ಎಮ್.ಎಚ್.**

1. ಸುಜಾತಾ ರವೀಶ್



ಬದುಕು_ಪಗಡೆ



ಮಧ್ಯ ಹಾಸಿರಲು ರಂಗಿನ ಪಗಡೆಯ ಹಾಸು
ಕಪ್ಪು ಕೆಂಪು ಹಳದಿ ಹಸಿರು ಕಾಯಿಗಳು
ಹಿತ್ತಾಳೆಯೋ ದಂತವೋ ಪಿಂಗಾಣಿಯೋ
ಶಕ್ತ್ಯಾನುಸಾರದಲಿ ಸಿದ್ಧವಾದ ದಾಳಗಳು

ಮೂರು ಮನೆಗಳಿಗೊಂದು ನಿಲುಗಡೆ ಘಟ್ಟ
ವಿಶ್ರಮಿಸಲಲ್ಲ! ಸಾಗುವ ಹೆಜ್ಜೆ ಎಣಿಸಲು
ಆರಂಭದಿಂದ ಅಂತ್ಯದವರೆಗೆ ನಿಲ್ಲದ ಓಟ
ಬಾಳಿನ ಅಲೆದಾಟದಂತೆಯೇ ಸೂಕ್ತ ರೂಪಕ

ದುಗ ಇತ್ತಗ ಎಂಟು ಹನ್ನೆರಡರ ಜೋಡಿಗಳು
ಅಟ್ಟಿಸಿ ಗೂಳಿಯಂತೆ ಗುದ್ದುವ ಎದುರಾಳಿಗಳು
ಒಂದು ಸುತ್ತು ಹಾಸು ಸುತ್ತಿ ಮನೆಗೆ ಮರಳಿ
ಮಲಗಿ ಹಣ್ಣಾದರೆ ಆಗ ಮಾತ್ರ ನಿಶ್ಚಿಂತೆ

ವಿಶೇಷವಾದ ಹತ್ತರ ಆಟ ಒಂಬತ್ತರ ಆಟ
ಹಾಸಿನ ಮನೆಗಳ ಮೇಲೆ ಕಾಯಿ ನಡೆಸುವಾಟ
ಜೀವನವ ಇದಕೆ ಹೋಲಿಸುವ ಮಾಟ
ವಿಧಿಯೆಂಬ ಆಟಗಾರನದೆ ಮೇಲ್ಗೈಯ ಹೂಟ

ಬದುಕಿನಲ್ಲಿ ನಮ್ಮಿಷ್ಟದಂತೆ ಏನು ನಡೆಯದು
ಎಂಬಂತೆ ಬೇಕಾದಾಗ ಬೀಳದ ಗರಗಳು
ಹೆಚ್ಚಿನ ಆಸೆಯಲಿ ಕಟ್ಟುತಿರೆ ಜೋಡಿಗಳ
ಬರಸಿಡಿಲು ಬಡಿದಂತೆ ಮನೆಗೆ ಮರಳುವವು

ಹಿಂದೆ ಶಕುನಿ ಹೇಳಿದಂತೆ ಕೇಳುವ ದಾಳ
ಹೊಂದಿದ್ದವಂತೆ ಪಿತ ಸೋದರರ ಆಸ್ತಿಗಳ
ಆಟವನು ದ್ಯೂತವಾಗಿಸಿ ಬೆಳೆಯುವ ದಾಹ
ಸೋದರರ ಸತಿಯ ನ್ಯಾಸವಾಗಿಸುವ ವ್ಯಾಮೋಹ

ರಾಜ್ಯಗಳ ದೇಶಗಳ ಬಂಧುಗಳ ವಿರಸ
ಇದರಿಂದಾಗಿಯೇ ಅದೆಷ್ಟೋ ಪ್ರಾಣ ನಾಶ
ಮೋಜಿಗಾಗಿಯೇ ಇರಲಿ ಜೂಜಾಗಿ ಬೇಡ
ಪರಂಪರೆ ಇತಿಹಾಸಗಳ ಮರೆಯುವುದು ಬೇಡ

2. ಶಾಂತಿವಾಸು



ನೀನು ಮಾತ್ರ ನನಗೆ

ಎನ್ನ ಜೀವನದ ಮೌನದೊಳಿಣುಕಿದ ಮಾತು,
ನೀನಲ್ಲವೇ ಇನಿಯ??
ಪಂಚಮ ಸ್ವರಕೆ ಪಲ್ಲವಿಯಾಗಿ ನೀನಿರಲು,
ಬದುಕಾಯಿತು ನಾದಮಯ...

ಸಾವಿರದ ಪ್ರೀತಿಯೆರೆದು ಸಾವಿರ ಆಸೆ
ತಂದವ ನೀನೇ ತಾನೇ? ತಬ್ಬಿಬಿಡು...
ಕತ್ತಲಾಗದ ಬೆಳಕನು ಸ್ವಾಗತಿಸಿ,
ಮುಸುಕಿದ ಮಾಯೆಯನು ಹೊರಗಿಟ್ಟುಬಿಡು....

ಐದು ಹತ್ತಾಗಿ, ಹತ್ತು ಇಪ್ಪತ್ತಾಗುವಂತೆ
ಬೆರಳುಗಳ ಬೆಸೆದವನು, ಎನ್ನ ಒಂಟಿತನದ
ನಟ್ಟಿರುಳುಗಳ ಕನಸು ನೀನು...
ಅನಾಥ ಮನಸಿನ ಅಲೆಮಾರಿ ಹಗಲುಗಳಲಿ,
ನಾ ತಡಕಾಡುವ ಹುಡುಕಾಟವೇ ನೀನು...


ಕಣ್ತುಂಬಿ ಚಿಮ್ಮಿ ನಿನ್ನೆದೆಗೆ ಬಿದ್ದ ಹನಿಗೆ
ಶುಭಯೋಗ ತಂದವನು, ನೀ ನನ್ನವನು...
ಕನವರಿಕೆಯ ಸುವ್ವಾಲಿಗೆ ಜೀವ ತುಂಬಲು,
ನಿನ್ನನು ಸದಾ ಸುತ್ತುವ ಸಾಕಾರವೇ ನಾನು...

ಯೌವನ ತುಂಬಿದ ಹೆಣ್ಣೆಂದು ನೀನೆಂದೂ ಎನ್ನನೊಪ್ಪಿ,
ಅಪ್ಪಲಿಲ್ಲ ಅಲ್ಲವೇ ಗೆಳೆಯ???
ಹಾಗಾಗಿದ್ದರೆ ಪ್ರೀತಿಸುತ್ತಿರಲಿಲ್ಲ ನಿನ್ನ ನಾನು!
ಅದಕ್ಕಾಗಿಯೇ ನೀನೀಗ ಎನ್ನೊಡೆಯ...

3. ಎನ್.ವಿ.ರಘುರಾಂ.



ಕಾದಂಬರಿಯ ಕಿರು ಪರಿಚಯ



ಕಾದಂಬರಿ: C/O ಚಾರ್ಮಾಡಿ
ಸಾಹಿತಿ: ಸಚಿನ್ ತೀರ್ಥಹಳ್ಳಿ
ಪ್ರಕಾಶನ: ಸಪ್ನ ಬುಕ್ ಹೌಸ್, ಬೆಂಗಳೂರು
ಮೊದಲ ಮುದ್ರಣ: ನವೆಂಬರ್ ೨೦೨೨
ಪುಟಗಳು: ೧೧೧
ಬೆಲೆ: ೧೧೦/-

ಚಿಕ್ಕಮಗಳೂರು ಜಿಲ್ಲೆಯ ಕೊಟ್ಟಿಗೆಹಾರವನ್ನು ದಕ್ಷಿಣಕನ್ನಡದ ಬೆಳ್ತಂಗಡಿಗೆ ಸೇರಿಸುವ ರಸ್ತೆಯೇ ಚಾರ್ಮಾಡಿ ಘಾಟ್. ಇದೊಂದು ಸುಂದರ ಸ್ಥಳ. ಬೆಟ್ಟ, ಗುಡ್ಡಗಳ ಸಾಲುಗಳು, ನೀರಿನ ಝರಿಗಳು, ನಿತ್ಯಹರಿದ್ವರ್ಣದ ಕಾಡು ಈಗಲೂ ಸ್ವಲ್ಪ ಮಟ್ಟಿಗೆ ನೋಡಲು ಸಿಗುವ ಸ್ಥಳವೇ ಈ ಚಾರ್ಮಾಡಿ ಘಾಟ್. ಬೇಸಿಗೆಯಲ್ಲಿ ಅಲ್ಲಲ್ಲಿ ಎಲೆಗಳ ಮಧ್ಯೆ ತೂರಿ ಬರುವ ಸೂರ್ಯನ ಕಿರಣಗಳ ಸಂಭ್ರಮ ಒಂದು ಕಡೆಯಾದರೆ, ಮಳೆಗಾಲದಲ್ಲಿ ಮೋಡಗಳ ಮಧ್ಯೆಯೇ ಹೋಗುವ ಅನುಭವವಾಗುತ್ತದೆ.

ಆದರೆ ಇಲ್ಲಿ ಪ್ರಯಾಣ ಮಾಡುವಾಗ ಪ್ರಕೃತಿ ಸೌಂದರ್ಯದಲ್ಲಿ ವಾಹನ ಚಾಲಕ ಮೈಮರೆವ ಹಾಗಿಲ್ಲ. ವಾಹನ ಚಾಲಕ ಬಹಳ ಕರಾರುವಕ್ಕಾಗಿ ಸಂಚಾರಿ ನಿಯಮಗಳನ್ನು ಪಾಲಿಸುತ್ತಾ ಮೈಯೆಲ್ಲಾ ಕಣ್ಣಾಗಿ ವಾಹನ ಚಲಾಯಿಸಬೇಕು. ಇಲ್ಲದಿದ್ದರೆ ಅಪಾಯ ಕಟ್ಟಿಟ್ಟ ಬುಟ್ಟಿ. ಅವನಿಗೆ ಮಾತ್ರವಲ್ಲ, ಅವನ ನಂಬಿ ಕೂತ ಸಹಪ್ರಯಾಣಿಕರಿಗೂ ತೊಂದರೆ. ಅದಕ್ಕೆ ಮುಖ್ಯ ಕಾರಣ ಅಲ್ಲಿರುವ ೧೨ 'ಹೇರ್ ಪಿನ್ ಕರ್ವ್ಸ್'. ಈ ತಿರುವುಗಳಲ್ಲಿ ಜೋಪಾನವಾಗಿ ವಾಹನ ಚಲಾಯಿಸಲು ಏನಾದರೂ ಸಿದ್ಧ ಸೂತ್ರಗಳು ಇದ್ದಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು. ಆಗ ಎಲ್ಲರೂ ಆ ಸೂತ್ರಗಳನ್ನು ಪಾಲಿಸಿದರೆ ಯಾವುದೇ ತೊಂದರೆ ಇಲ್ಲದೇ ಊರು ಸೇರಬಹುದು. ಆದರೆ ಆ ರೀತಿಯ ಸಿದ್ಧ ಸೂತ್ರಗಳಿಲ್ಲ. ಸಾಮಾನ್ಯವಾಗಿ ಪಾಲಿಸಬೇಕಾದ ಸಂಚಾರ ನಿಯಮಗಳನ್ನು ಇಲ್ಲಿ ಕೂಡ ಪಾಲಿಸಬೇಕು. ಆದರೆ ಆ

ನಿಯಮಗಳನ್ನು ಓದಿಯೋ, ಬಾಯಿಪಾಠ ಮಾಡಿಯೋ ಕಲಿಯಲು ಆಗಲ್ಲ. ಹಾಗೆ ನೋಡಿದರೆ ಸರಿಯಾದ, ನೇರವಾದ ರಸ್ತೆಯಲ್ಲಿ ಕೂಡ ವಾಹನ ಚಲಾಯಿಸಲು ಕಲಿಯಬೇಕು. ಆಗ ಅದು ಕ್ರಮೇಣ ಕರಗತವಾಗುತ್ತದೆ. ಕೆಲವರು ವಾಹನ ಚಾಲನಾ ತರಬೇತಿಯ ಸಂಸ್ಥೆಗಳ ಮೂಲಕ ಒಂದಿಷ್ಟು ಕಲಿತು ಪರವಾಗಿನೆ ತೆಗೆದುಕೊಂಡರೆ, ಇನ್ನು ಕೆಲವರು ತಾವೇ ಕಲಿತು ನೇರವಾಗಿ ಪಡೆಯಲು ಪ್ರಯತ್ನ ಪಡುತ್ತಾರೆ. ಒಟ್ಟಿನಲ್ಲಿ ಪ್ರಯತ್ನ ಇಲ್ಲದೆ ಅನುಭವ ಆಗಲ್ಲ. ಅನುಭವವಿಲ್ಲದೆ ಸುರಕ್ಷಿತವಾಗಿ ಮನೆಗೆ ಸೇರಲು ಕಷ್ಟವಾಗಬಹುದು.

ಜೀವನ ಕೂಡ ಹಾಗೆ ಅಲ್ಲವೇ? ಅನೇಕ ಬಾರಿ ನೇರವಾದ ರಸ್ತೆಯಲ್ಲಿ ಆರಾಮವಾಗಿ ಸಾಗುತ್ತೇವೆ, ಕೆಲವೊಮ್ಮೆ ರಸ್ತೆ ಉಬ್ಬು ತಗ್ಗುಗಳು ಎದುರಾಗುತ್ತದೆ, ಕೆಲವೊಮ್ಮೆ ಅನಿರೀಕ್ಷಿತ ತಿರುವುಗಳಿಂದ ಕೂಡಿರುತ್ತದೆ. ನಾವು ಜೀವನದಲ್ಲಿ ಮಾಗಿದಂತೆ ಈ ಪ್ರಯಾಣ ಅಂಥ ಪ್ರಯಾಸದಾಯಕ ಎಂದೆಣಿಸುವುದಿಲ್ಲ. ಸಂಸಾರದಲ್ಲಿ ಮುಂದೆ ಬರಲು ಅನೇಕ ಅನುಭವ ಆಧಾರಿತ ಸೂತ್ರಗಳು ಸಿಗುತ್ತವೆ. ಆದರೆ ಮದುವೆಯ ಮುನ್ನ ಬೀಳುವ ಪ್ರೀತಿಯ ಬಲೆಗೆ ಯಾವ ಅನುಭವವಿರಲು ಸಾಧ್ಯ?

ಹಾಗೆ ನೋಡಿದರೆ ಯಾವುದೇ ಸಿದ್ದ ಸೂತ್ರಗಳಿಗೆ ಬಂದಿಯಾಗಿರದೆ ಇರುವುದೆಂದರೆ ಪ್ರೀತಿ ಮಾತ್ರ. ಈ ಪ್ರೀತಿ ಹುಟ್ಟುವುದಕ್ಕೆ ಒಬ್ಬೊಬ್ಬರಿಗೆ ಒಂದೊಂದು ಕಾರಣ, ಕೆಲವೊಮ್ಮೆ ಯಾವುದೇ ಕಾರಣ ಕೂಡ ಬೇಕಾಗಿರುವುದಿಲ್ಲ. ನೋಡಿ, ಪ್ರೀತಿಗೂ ಗುಲಾಬಿಗೂ ಮೊದಲಿಂದಲೂ ಸಂಬಂಧವಿದೆ. ಈ ಪ್ರೀತಿ ಪ್ರತಿ ದಿನ ಅರಳುವ ಗುಲಾಬಿಯ ತರಹ. ಎಷ್ಟೋ ವರ್ಷಗಳಿಂದಲೂ ಗುಲಾಬಿ ಅರಳುತ್ತಿದ್ದರೂ, ಪ್ರತಿ ದಿನ ಅರಳಿದಾಗಲೂ ಅದು ಹೊಸದಾಗಿ ಕಾಣುವಂತೆ ಪ್ರೀತಿ ಕೂಡ ಅನುಭವಿಸುವ ಹೃದಯಕ್ಕೆ ಹೊಸದಾಗಿ ಕಾಣುತ್ತದೆ. ಒಂದು ಸಾರಿ ಪ್ರೀತಿಯ ಬಲೆಯಲ್ಲಿ ಬಿದ್ದ ಮೇಲೆ ಅದನ್ನು ಪಡೆಯುವ ತನಕ, ಉಳಿದೆಲ್ಲಾ ವಿಷಯಗಳು ಗೌಣವಾಗಿ ಬಿಡುತ್ತವೆ. ಆಗ ತನ್ನತನವನ್ನು ಮರೆತು ವಾಹನವನ್ನು ವೇಗವಾಗಿ ಓಡಿಸಿ ಒಂದೇ ಅಪಘಾತ ಮಾಡಕೊಳ್ಳಬಹುದು ಅಥವ ದಾರಿತಪ್ಪಿ ಇನ್ನೆಲ್ಲೋ ಹೋಗಬಹುದು. ಹಾಗಾಗಿ ಪ್ರೀತಿಯ ಬಲೆಗೆ ಬಿದ್ದ ಮೇಲೆ ಮುಂದುವರಿದು ಆಕೆಯ ಕೈ ಹಿಡಿಯಲು ಸಿದ್ಧ ಸೂತ್ರಗಳು ಇದ್ದರೆ ಎಷ್ಟು ಚೆನ್ನ ಅಲ್ಲವೇ?

ಹಾಗೆ ನೋಡಿದರೆ ಈಗ ಪ್ರೀತಿಯ ಬಲೆಗೆ ಬೀಳುವುದೇ ಮೊದಲ ಹೆಜ್ಜೆಯಲ್ಲ. ಮೊದಲು ಓಡಾಡಬೇಕು. ನಂತರ ಸ್ವಲ್ಪ ದಿವಸ ಒಟ್ಟಿಗಿದ್ದು, ಪರೀಕ್ಷೆ ಮಾಡಿ ನಂತರ ಪ್ರೀತಿಯ ವಿಷಯ. ಒಂದು ತರಹ ಗಾಡಿ ಓಡಿಸಲು 'ಲರ್ನಿಂಗ್ ಲೈಸೆನ್ಸ್' ತೆಗೆದುಕೊಳ್ಳುವ ತರಹ. ಈ ತರಹದ ಹುಡುಗಾಟಕ್ಕೆ ಇಟ್ಟಿರುವ ಹೆಸರು 'ಲಿವಿಂಗ್- ಇನ್-ರಿಲೇಷೇನ್ಷಿಪ್'!

ಹೌದು! ಈ ಕಾದಂಬರಿಯೂ ಈಗಿನ ಕಾಲದ 'ಡೇಟಿಂಗ್ ಆಪ್'ನಲ್ಲಿ ಪರಿಚಯ ಮಾಡಿಕೊಂಡು 'ಲಿವಿಂಗ್-ಇನ್-ರಿಲೆಷೇನ್ಷಿಪ್' ನಲ್ಲಿದ್ದ ನಾಯಕ ಹುಡುಗಿಗೆ ಕೊನೆಯ ಬಾರಿಗೆ ಟಾಟ, ಬೈ ಬೈ ಹೇಳಲು ತಯಾರಿ ನಡೆಸಿರುವ ಕಥೆಯಿಂದ ಪ್ರಾರಂಭವಾಗುತ್ತದೆ. ನಾಯಕ ಸ್ವಲ್ಪ ಮಟ್ಟಿಗೆ ಒದ್ದಾಡಿ ಬೈ, ಬೈ ಹೇಳಿದಾಗ ಆ ಹುಡುಗಿ ಅವನಿಗೆ "ವಿಶ್ ಯು ಫೈಂಡ್ ಯುವರ್ ಎಪಿಕ್ ಲವ್" ಎಂದು ಹಾರೈಸಿ ಆರಾಮಾಗಿ ಹೊರಟೇ ಹೋಗುತ್ತಾಳೆ. ಹಾಗಾಗಿ ಇದು ಪಕ್ಕಾ ಈ ಕಾಲದ ಕಥೆ ಎಂದು ತೀರ್ಮಾನ ಮಾಡುವುದು ಸಾಮಾನ್ಯ.

ಆದರೆ ಇದು ಕೇವಲ ಈ ಕಾಲದ ಕಥೆಯಲ್ಲ. ಏಕೆಂದರೆ ನಾಯಕ ಸಾಮಾನ್ಯನಲ್ಲ. ವಿದ್ಯಾವಂತ, ಒಳ್ಳೆಯ ಕೆಲಸದಲ್ಲಿ ಇರುವವನು ಕೂಡ. ಕೇವಲ ಅಷ್ಟೇ ಅಲ್ಲ, ನಾಯಕ ಹವ್ಯಾಸಿ ಕಥೆಗಾರ ಕೂಡ. ಕಥೆಗಾರರೆಂದರೆ ಭಾವನಾತ್ಮಕ ಜೀವಿಗಳು ಎಂದು ಗೊತ್ತಲ್ಲ! ಈ ಭಾವನಾತ್ಮಕ ಜೀವಿಗೂ ತನ್ನ ಕಥೆಯೊಂದು ಸಿನಿಮಾ ಮಾಡಲು ಆಯ್ಕೆಯಾದಾಗ, ಚಿತ್ರೀಕರಣದ ಜಾಗವನ್ನು ಆಯ್ಕೆಮಾಡಲು ಕಾಡಿನ ಮಧ್ಯದಲ್ಲಿ ಒಂದು ಸಣ್ಣ ಹಳ್ಳಿಯಲ್ಲಿರುವ ಪರಿಚಿತರಾದ ಕೇಶವಮೂರ್ತಿಗಳ ಮನೆಯಲ್ಲಿ ತಂಗುತ್ತಾರೆ. ಚಾರ್ಮಾಡಿ ಘಾಟ್ನಲ್ಲಿ ಅವರ ತಂಡ ಸಂಚಾರ ಮಾಡುತ್ತದೆ. ಆಗ ದಾರಿಯಲ್ಲಿ ಮಧ್ಯಾಹ್ನದ ನಿದ್ದೆಯಲ್ಲಿ ಮೈಮರೆತ ನಾಯಕ ತಂಡದಿಂದ ಹಿಂದೆ ಉಳಿಯುತ್ತಾನೆ. ನಂತರ ಆ ದಟ್ಟ ಕಾಡಿನಲ್ಲಿ ಸಂಜೆಯ ಸಮಯದಲ್ಲಿ ನಾಯಕನಿಗೆ 'ಹುಡುಗಿ'ಯೊಬ್ಬಳು ಎದುರು ಬರುತ್ತಾಳೆ. ತನ್ನ ಕಥೆಯ ಪಾತ್ರವಾಗಿ ಬಂದಂತ ಹುಡುಗಿ ಎದರುಗಡೆ ಪ್ರತ್ಯಕ್ಷಳಾಗಿದ್ದಾಳೆ ಎಂದು ನಾಯಕನಿಗೆ ಅನಿಸುತ್ತದೆ! ಅವಳನ್ನು ನೋಡಿದ ತಕ್ಷಣ 'ಜೀವನಪೂರ್ತಿ ನಾನು ಕಾಯುತ್ತಿದ್ದುದು ಇವಳಿಗಾಗೇ, ಬದುಕನ್ನು ಹಂಚಿಕೊಳ್ಳುವುದಾದರೆ ಅದು ಇವಳ ಜೊತೆ ' ಎಂದುಕೊಳ್ಳುತ್ತಾನೆ ನಾಯಕ. ಕಾಡಿನಲ್ಲಿ ದಾರಿ ತಪ್ಪಿಸಿಕೊಂಡ ನಾಯಕನಿಗೆ ಅವರು ಉಳಿದುಕೊಂಡಿದ್ದ ಮನೆಗೆ ತಲುಪಿಸುತ್ತಾಳೆ ಆ ಹಳ್ಳಿಯ ಬೆಡಗಿ. ಆವಳ ಗುಂಗಿನಲ್ಲೇ

ಇರುವಾಗ ಬೆಳಿಗ್ಗೆ ಆ ಹಳ್ಳಿಯ ಬೆಡಗಿ 'ಫೇಡಾದ ಜೀನ್ಸು' ಧರಿಸಿ, ಕೈಯಲ್ಲಿ 'ಐಫೋನ್' ಹಿಡಿದು ಬಂದಾಗ ನಾಯಕನಿಗೆ ಆಶ್ಚರ್ಯವಾಗುತ್ತದೆ. ಆಗ ಕೇಶವಮೂರ್ತಿಗಳು ತನ್ನ ಮೊಮ್ಮಗಳು ಎಂದು ಪರಿಚಯ ಮಾಡಿಕೊಡುತ್ತಾರೆ. ನಿನ್ನೆ ಸಂಜೆ ನೋಡಿದ್ದರೂ ಆಕೆಯೇನು ಪರಿಚಯದ ನಗೆ ಬೀರವುದಿಲ್ಲ. ಇವರ ಜೊತೆಗೆ ಅವಳೂ ಊರಿಗೆ ಹೊರಡುತ್ತಾಳೆ. ನಾಯಕನ ಜೊತೆ ಮಾಡುವ ಈ ಪ್ರಯಾಣ ಮುಂದುವರೆಯುತ್ತದೆಯೇ? .... ಮುಂದೆ ಏನಾಯಿತು ಎನ್ನುವುದೇ ಕಥೆ! ಅದನ್ನು ಪುಸ್ತಕದಲ್ಲಿ ಓದಿ ಆನಂದಿಸಬೇಕು.

ಹಾಗಾದರೆ ಇದೊಂದು 'ಲವ್ ಸ್ಟೋರಿ' ಎಂದು ನಿಶ್ಚಿತವಾಯಿತು. ಆದರೆ ಇದು ಈ ಕಾಲದ ಬೆಳಿಗ್ಗೆ ಪರಿಚಯವಾಗಿ, ಮಧ್ಯಾಹ್ನದ ಊಟಕ್ಕೆ ಜೊತೆಯಾಗಿ, ಸಂಜೆಯ ಹೊತ್ತಿಗೆ ಬೈ, ಬೈ ಹೇಳುವ ಸಾಮಾನ್ಯ ಕಥೆಯಲ್ಲ. ಚಾರ್ಮಾಡಿ ಘಾಟ್ನ ಕಾಡಿನ ಮಧ್ಯೆದಲ್ಲಿ ಪ್ರಾರಂಭವಾದ ಈ 'ಲವ್ ಎಟ್ ಫಸ್ಟ್ ಸೈಟ್' ಕಥೆ ನಂತರ ನಡೆಯುವುದು ಬೆಂಗಳೂರಿನಲ್ಲೇ. ಆದರೆ ಆ ಘಾಟಿನ ದಟ್ಟವಾದ ಛಾಯೆ ಕತೆಯುದ್ದಕ್ಕೂ ಹರಡಿದೆ. ಘಾಟಿನ ದಟ್ಟ ಅರಣ್ಯದಲ್ಲಿ ನಡೆದಾಡುವಾಗ ಸುತ್ತ ಮುತ್ತಲಿನ ಸೌಂದರ್ಯ ನೋಡಿ ಮೈಮರೆಯುವ ಕ್ಷಣಗಳ ರೀತಿ ನಾಯಕ ಆ ಹುಡುಗಿಯ ಧ್ಯಾನದಲ್ಲಿ ಮೈಮರೆಯುತ್ತಾನೆ. ಆಕೆಯಿಂದ ಆಗಾಗ ಬರುವ ಸಂದೇಶಗಳು ಬೇಸಿಗೆಯಲ್ಲಿ ಎಲೆಗಳ ಸಂದಿಯಿಂದ ತೂರಿ ಬಂದ ಬೆಳಕಿನ ಕಿರಣಗಳನ್ನು ನೆನಪಿಸಿದರೆ, ಆಕೆಯ ಬಗ್ಗೆ ಮತ್ತಷ್ಟು ತಿಳಿಯಲು ಪ್ರಯತ್ನಿಸಿ ನಿರಾಶನಾದಾಗ ಮೋಡ ಮುಸುಕಿದ ವಾತಾವರಣ ನೆನಪಾಗುತ್ತದೆ. ಮಲೆನಾಡಿನಲ್ಲಿ ಧೋ ಎಂದು ಸುರಿಯುವ ಮಳೆ ಎಲ್ಲರನ್ನೂ ಮನೆಯಲ್ಲಿ ಬಂದಿಯಾಗಿಸುವಂತೆ ಭಾವನೆಗಳ ಸುರಿಮಳೆಯಲ್ಲಿ ಬಂದಿಯಾಗಿರುವ ನಾಯಕನ ದಿನಗಳು ಕೂಡ ಇದೆ. ಮಳೆಗಾಲ ಮುಗಿದ ಮೇಲೆ, ತಿಳಿಯಾದ ನೀಲಾಕಾಶದಲ್ಲಿ ಬೆಳಕು ಮೂಡಿತೆ? ಕಥೆಯಲ್ಲೇ ಓದಿ ತಿಳಿದರೆ ಚೆನ್ನ.

ಕೇವಲ ಇಷ್ಟೇ ಆಗಿದ್ದರೆ ಇದೊಂದು ಎಲ್ಲ ನವಿರಾದ ಪ್ರೀತಿಯ ಕಥೆಗಳ ತರಹ ಇನ್ನೊಂದು ಕಥೆ ಆಗುತ್ತಿತ್ತು. ಇದು ಕೇವಲ ಚಾರ್ಮಾಡಿ ಘಾಟ್ನ ಪ್ರದೇಶದ ಬಗ್ಗೆ ಮಾತ್ರ ಹೇಳುವುದಿಲ್ಲ. 'ನೋ ಫಾರ್ ರೊಮ್ಯಾನ್ಸ್' ಎಂದು ಪ್ರಿಂಟ್ ಆಗಿರುವ ಟಾಪ್ ಹಾಕಿಕೊಂಡು ಓಡಾಡುವ ಹುಡುಗಿಯನ್ನು ಒಲಸಿಕೊಳ್ಳುವ ಬಗೆ ಹೇಗೆ? ಸಾಮಾಜಿಕ ಜಾಲತಾಣಗಳ ಮೂಲಕ ಸಂವಹನ ನಡೆಸುವಾಗ 'ಜೆನ್ ಜಿ ಕಿಡ್ಸ್'ಗಳ ಮನ ಗೆಲ್ಲಲು

ಇರುವ ಹನ್ನೆರಡು ಸೂತ್ರಗಳು ಯಾವುವು? ಸಂದೇಶ ಕಳುಹಿಸಿ ಒಂದೆರಡು ಸೆಕೆಂಡುಗಳಲ್ಲಿ ' ಬ್ಲೂ ಟಿಕ್' ಬರೆದೇ ಇದ್ದರೆ ಚಡಪಡಿಸುವ ಈ ಕಾಲದಲ್ಲಿ ಪ್ರೀತಿಯ ನಡುವೆಯೂ 'ಹೌ ಟು ರಿಮೈನ್ ಎನಿಗ್ಮಾ ಟು ಹರ್'? ಈ ಎಲ್ಲಾ ವಿಷಯಗಳ ತಿಳಿದುಕೊಳ್ಳಲು ಪುಸ್ತಕ ಓದಿದರೆ ಚೆನ್ನ. ಚಾರ್ಮಾಡಿ ಘಾಟಿನಲ್ಲಿ ಹನ್ನೆರಡು ತಿರುವುಗಳು ಇರುವುದು ಮತ್ತು ಇಲ್ಲಿ ಕೂಡ ಹನ್ನೆರಡು ಸೂತ್ರಗಳು ಇರುವುದು ಕೇವಲ ಕಾಕತಾಳಿಯವೇ? ಗೊತ್ತಿಲ್ಲ. ಈ ಎಲ್ಲಾ ಸೂತ್ರಗಳು ತಿರುವುಗಳ ಮುಂದೆ ಹಾಕಿರುವ ಸಂಚಾರ ಸೂಚಿ ಚಿಹ್ನೆಗಳ ತರಹ ಮೂಡಿ ಬಂದಿದೆ.

ಇದರ ಜೊತೆಗೆ ನಾಯಕ ತನ್ನ ಪ್ರೀತಿಯ ಪ್ರಯಾಣದಲ್ಲಿ ಎದುರಿಸುವ ತಿರುವುಗಳು ಘಾಟಿನ ಯಾವುದೇ ತಿರುವುಗಳಿಗಿಂತ ಕಡಿಮೆ ಇಲ್ಲ. ಹಾಗಾಗಿ ಈ ಪ್ರೇಮಕಥೆಗೆ ರೋಚಕತೆಯೂ ಸೇರುತ್ತಾ ಹೋಗುತ್ತದೆ. ಘಾಟಿನ 'ಹೇರ್-ಪಿನ್-ಕರ್ವ್' ತರಹ ತೀವ್ರವಾದ ತಿರುವುಗಳು ಈ ಪ್ರೀತಿಯ ಪ್ರಯಾಣದಲ್ಲೂ ಬರುತ್ತವೆ. ಕೆಲವೊಮ್ಮೆ 'ಬ್ಲೈಂಡ್ ಕರ್ವ್' ಎದುರಿಸಿದರೆ, ಕೆಲವೊಮ್ಮೆ 'ನೂರಾ ಎಂಭತ್ತು ಡಿಗ್ರಿ ಯೂ ಟರ್ನ್'! ಹಾಗಾಗಿ ಇದೊಂದು ಈಗಿನ ಕಾಲದ 'ರೊಮ್ಯಾಂಟಿಕ್ ಥ್ರಿಲ್ಲರ್' ಆಗಿ ಬದಲಾಗುತ್ತದೆ.

ಈಗಾಗಲೇ ಎರಡು ಕಥಾ ಸಂಕಲನಗಳನ್ನು ಪ್ರಕಟಿಸಿರುವ ಶ್ರೀ ಸಚಿನ್ ತೀರ್ಥಹಳ್ಳಿಯವರ ಪ್ರಥಮ ಕಾದಂಬರಿ ಇದು. ಅವರ ಮಾತಿನಂತೆ ಹೇಳುವುದಾದರೆ 'ಕಥೆಯೆಂದರೆ ಮಿಂಚೊಂದು ಅಗಸದಲ್ಲಿ ಮೂಡಿ ಮರೆಯಾದಂತೆ. ಆದರೆ ಕಾದಂಬರಿ ಬರೆಯುವುದಕ್ಕೆ ಒಂದು ಮಳೆಗಾಲವನ್ನೇ ಸೃಷ್ಟಿಸಬೇಕು'. ಹಾಗೆ ನೋಡಿದರೆ ಇಲ್ಲಿ ತೀವ್ರವಾದ ವರ್ಷಕಾಲ ಮಾತ್ರವಲ್ಲದೆ ಶಿಶಿರದಿಂದ ಹಿಡಿದು ಹೇಮಂತ ಋತುಗಳವರೆಗೆ ಎಲ್ಲಾ ಕಾಲಗಳು ಬರುತ್ತವೆ. ಹಾಗಾಗಿ ಈ ಕಾದಂಬರಿಗೆ ಒಂದು ಪರಿಪೂರ್ಣತೆ ಇದೆ.

ಖ್ಯಾತ ಸಾಹಿತಿ ಶ್ರೀಯುತ ಜೋಗಿಯವರು ಕೂಡ ಕಥೆಯಲ್ಲಿ ಪಾತ್ರಧಾರರು. ಹಾಗಾಗಿ ಓದಿದವರು ಇದೊಂದು ಲೇಖಕರ ಆತ್ಮಕಥೆಯೇ ಎಂದು ಅನಿಸಿದರೆ ಆಶ್ಚರ್ಯವಿಲ್ಲ. ಲೇಖಕರು ಪ್ರಥಮ ಕಾದಂಬರಿಯಲ್ಲೇ ನಿರೂಪಣೆ ಶೈಲಿಯಲ್ಲಿ ಯಶಸ್ವಿಯಾಗಿರುವುದನ್ನು ಇದು ತೋರಿಸುತ್ತದೆ.

ಪುಸ್ತಕ ಓದಿ ಮುಗಿದ ಮೇಲೆ ಹಾಗೆ ಸುಮ್ಮನೆ ಈ ಪುಸ್ತಕವನ್ನು ಆಘ್ರಾಣಿಸಿದರೆ ಒಂದು ಕ್ಷಣ ಗಾಢವಾದ ಬಿಯರ್ ಅಥವ ವಿಸ್ಕಿಯ ವಾಸನೆ

ಅಲೆ ಅಲೆಯಾಗಿ ಬಂದು ಹೋಗುವ ಅನುಭವವಾದರೆ ಆಶ್ಚರ್ಯವಿಲ್ಲ! ಅಷ್ಟು ದಟ್ಟವಾಗಿ ಕಾದಂಬರಿ ನಮ್ಮನ್ನು ಆವರಿಸಿಕೊಳ್ಳುತ್ತದೆ. ಪುಸ್ತಕದ ಗಮವನ್ನು ಮಲ್ಲಿಗೆಯ ಸುವಾಸನೆಗೆ ಹೋಲಿಸದೆ ಬಿಯರ್ ಎಂದು ಹೇಳಿರುವದಕ್ಕೆ ಏನಾದರೂ ಕಾರಣವಿದೆಯೇ, ಅಮೆರಿಕಾದ ಗಾಯಕ ಬಾಬ್ ಡಾಯ್ಲನ್ ಹೇಳಿದ "ಯೂ ಕಾನ್ಟ್ ಬಿ ವೈಸ್ ಎಂಡ್ ಇನ್ ಲವ್ ಎಟ್ ದ ಸೇಮ್ ಟೈಮ್ " ಹೇಳಿಕೆ ನಿಜವೇ ಎನ್ನುವುದನ್ನು ಕಾದಂಬರಿ ಓದಿಯೇ ತಿಳಿದುಕೊಂಡರೆ ಒಳ್ಳೆಯದು.

ಉತ್ತಮ ಕಾದಂಬರಿ ಕೊಟ್ಟ ಶ್ರೀ ಸಚಿನ್ ತೀರ್ಥಹಳ್ಳಿವರಿಗೆ ಅಭಿನಂದನೆಗಳು. ಇನ್ನಷ್ಟು ಕಾದಂಬರಿಗಳು ಅವರಿಂದ ಮೂಡಿ ಬರಲಿ ಎಂದು ಆಶಿಸುತ್ತೇನೆ.

4. ಕೆ.ಎನ್.ಭಗವಾನ್



ಹಾಲನ್ನು ಆಲೆಂದರೆ..!?

ನಮ್ಮ ಮನೆಗೆ ನಿತ್ಯವೂ ನಂದಿನಿ ಪ್ಯಾಕೆಟ್ ತಂದುಕೊಡುವ ಹುಡುಗ ಅಂಗಳದಲ್ಲೇ ಮೊಪೆಡ್ ನಿಲ್ಲಿಸಿ 'ಆಲೂ..' ಅಂತ ಕೂಗುತ್ತಾನೆ.ಇದಕ್ಕೆ ಮೊದಲು ಇವನ ಅಣ್ಣನೂ ಸಹ ಹೀಗೆಯೇ ಕರೆಗಂಟೆ ಧ್ವನಿ ಮಾಡಿ'ಆಲಾ..' ಎಂದು ಇನ್ನೊಂದು ನಮೂನೆಯಲ್ಲಿ ಕೂಗುತ್ತಿದ್ದ.ಒಂದು ದಿನ ಈ ಹುಡುಗನನ್ನು ಕುರಿತು 'ಅಯ್ಯಾ,ಆಲೂ ಅಂದ್ರೆ ಆಲೂಗೆಡ್ಡೆಯೂ ಆಗುತ್ತೆ.ಹಿಂದಿವಾಲರು ಚೀಲವನ್ನೋ,ಬುಟ್ಟಿಯನ್ನು ಹಿಡಿದು ಬರುತ್ತಾರೆ ಅಷ್ಟೆ' ಎಂದು ಕೀಟಲೆ ಮಾಡಿದೆ.ಹುಡುಗ 'ಇದನ್ನ ಆಲಲ್ಲದೆ ಆಲೂಗೆಡ್ಡೆ ಅಂತ ಇದುವರೆಗೆ ಯಾರೂ ಅರ್ತ ಮಾಡ್ಕಂಡಿಲ್ಲ.ನೀವೇನಂಕಲ್ ಹಿಂಗೆ?'ಅಂತ ಕೊಂಚ ರಾಂಗಾದ.ಇವನಿಗೆ ಟಾಂಗ್ ಕೊಡೋಣ ಅಂತ ನಾನು ಕೂಡ 'ಹಾಗಾದರೆ ಹಾಡು ಹಸೆ,ಹುಡುಗ ಹುಡುಗಿ,ಹನುಮಂತಪ್ಪ ಇಂಥವನೆಲ್ಲ ಹೆಂಗೆ ಉಚ್ಚಾರಣೆ ಮಾಡ್ತೀಯಾ' ಎಂದು ಕೇಳಿದೆ.ಅವನು ' ಇದೇನಂಕಲ್ ಹಿಂಗೆ ಒಂದನೇ ಕ್ಲಾಸಿನ ಉಡುಗನ್ನ ಕೇಳ್ದಂಗೆ ಕೇಳ್ತೀರಾ? ಆಡು ಅಸೆ,ಉಡುಗ ಉಡುಗಿ,ಅನ್ಮಂತಪ್ಪ' ಅಂತ ಎಲ್ಲವನ್ನೂ ಪುನರುಚ್ಚರಿಸಿದ.ಮಾತು ಬಲ್ಲವ ತಾ ಸೋತು ಹೋಗುದು ಲೇಸು ಎಂಬ ಸರ್ವಜ್ಞ ವಚನಕ್ಕೆ ಶರಣಾಗಿ ' ಸರಿಯಪ್ಪ,ಇವತ್ತು ಇನ್ನೂ ಅರ್ಧ ಲೀಟರ್ ಹಾಲು ಕೊಡು'ಅಂತ ಅಹವಾಲಿಸಿದೆ.

ನನಗೆ ಕೆಲವೊಮ್ಮೆ ಎಂತೆಂಥವೋ ಆಲೋಚನೆಗಳು ಬಂದು ಬಿಡುತ್ತವೆ. ಈಗ ಅಲ್ಪಪ್ರಾಣ, ಮಹಾಪ್ರಾಣಗಳ ಕುರಿತೂ ಆಲೋಚನೆ, ಅನುಮಾನ ಬರತೊಡಗಿತು.ಪ್ರಶ್ನೆ ಹಾಕಿಕೊಂಡೆ. ಚಿತ್ರ ವಿಚಿತ್ರ ಪದಗಳು ವಿನೋದ ಹುಟ್ಟಿಸತೊಡಗಿದವು.ಮರದ ಮೇಲಿನ 'ಹಕ್ಕಿ'ಯು ಮೊರದಲ್ಲಿನ 'ಅಕ್ಕಿ'ಯಾಗಿಬಿಟ್ಟಿತು. ನನ್ನ ಹೆಂಡತಿಯ ತವರೂರಾದ 'ಹಾಸನ' ವು ಕೂಡುವ 'ಆಸನ'ವಾಯಿತು! ಗಾಯಕ ಗಾಯಕಿಯರು 'ಹಾಡು'ವುದನ್ನು ಬಿಟ್ಟು ಬಯಲಲ್ಲಿ 'ಆಡ'ತೊಡಗಿದರು. ಯೌವನೋತ್ಸಾಹದಿಂದ ಪುಟಿಯುತ್ತಿದ್ದ 'ಹುಡುಗಿ' ಏಕದಂ 'ಉಡುಗಿ' ಹೋದಳು! 'ಹೇರು'ಭಾರವಾಗುವ ಬದಲು ಹಗುರವಾಗಿ ಮೇಲಕ್ಕೆ 'ಏರು'ತ್ತಿತ್ತು.ವೀಳ್ಯದೆಲೆಯ 'ಹಂಬು' ' ಬಿಲ್ಲಿಗೆ ಹೂಡಿದ 'ಅಂಬು' ವಾಗಿ ಗುರಿತಪ್ಪಿ ಎಲ್ಎಲ್ಲಿಗೋ ಹೋಗಿಬಿಡುವುದು.'ಹಟ್ಟಿ' ಯವರು

ಮುಟ್ಟಿಸಿಕೊಳ್ಳಲು 'ಅಟ್ಟಿ'ಸಿ ಕೊಂಡು ಬಂದರು.'ಹರ'ನು ಶಿವನಾಗದೆ ಲೋಹ ಉಜ್ಜುವ 'ಅರ'ವಾಗಿಬಿಟ್ಟ.ಇನ್ನು 'ಹರಿ' ಯಂತೂ 'ಅರಿ'(ಶತ್ರು)ಯಾಗಿ ಕಾಡತೊಡಗಿದ!'ಹಾದರ'ದಂಥ ಅನೈತಿಕತೆಗೂ 'ಆದರ'(ಗೌರವ) ಸಿಗುವಂತಾಯಿತು.ಕಾಲಿನ 'ಹಿಮ್ಮಡಿ' ನೋವು ' ಇಮ್ಮಡಿ'(ಎರಡು ಪಟ್ಟು)ಯಾಗಿ ನೋಯಿಸತೊಡಗಿತು!ಎಂಥ ವಿನೋದಮಯ ಪದವಿಹಾರ ಅಲ್ವಾ!

ಕೆಲವರು ತಮಗೆ 'ಅ'ಕಾರ,'ಹ' ಕಾರಗಳು ಚೆನ್ನಾಗಿ ತಿಳಿದಿದೆಯೆಂದು ತೋರಿಸಲು ಅವುಗಳನ್ನು ಅದಲು ಬದಲು ಮಾಡುವುದುಂಟು.ಇಂಥವರ ಬಾಯಲ್ಲಿ ಹಾಸನ ಆಸನವೂ,ಅರಸೀಕೆರೆಯು ಹರಸೀಕೆರೆಯೂ ಆಗುವುದು ನಿಶ್ಚಿತ.ಇಂಥ ಗೊಂದಲ 'ಹರಕಲಗೂಡು' ತಾಲೂಕಿನವರಿಗಷ್ಟೇ ಅಲ್ಲ,'ಊವಿನ ಅಡಗಲಿ' ಯವರಿಗೂ ಆಗುವುದುಂಟು.ಬಹಳ ಹಿಂದೆ ಹಲಸಿನ ಮರಗಳಿಂದ ತುಂಬಿತ್ತೆನ್ನಲಾಗಿದ್ದ ಬೆಂಗಳೂರಿನ 'ಹಲಸೂರು' ಅನೇಕಾನೇಕ ವರ್ಷಗಳ ಕಾಲ ಅಲ್ಪಪ್ರಾಣಿಗಳ ಬಾಯಿಗೆ ಸಿಕ್ಕಿ 'ಅಲಸೂರು'ಆಗಿತ್ತು.ಅವನ್ನು ಅಲ್ಸರ್ ಎಂದು ಕರೆದವರೂ ಇದ್ದಿರಬಹುದು.ಆದರೆ ನಮ್ಮ ಉಟ್ಟು ಓರಾಟಗಾರರು ಮತ್ತೆ ಹಲಸೂರನ್ನು ಮರಳಿ ಕೊಡಿಸಿದ್ದು ಹಬಿಮಾನದ ಸಂಗತಿಯೇ ಸರಿ.

ತೀರಾ ಹಳೆಗನ್ನಡದ ಕಾಲದ ತಮಿಳು ಲಿಪಿ ಮೂವತ್ಮೂರು ಅಕ್ಷರಗಳನ್ನಷ್ಟೆ ಹೊಂದಿತ್ತೆಂದು ದ್ರಾವಿಡ ಪಂಡಿತರ ವಾದ.ಅಂಥ ವಾದ ಪ್ರಸ್ತುತ ತಮಿಳಿಗಷ್ಟೆ ಸೀಮಿತ.ಅದರ ಪರಿಣಾಮ ತಮಿಳು ಪದ ಶ್ರೀಮಂತಿಕೆ ಕಳೆದುಕೊದುಕೊಂಡಿತು.ಈಗ ತಮಿಳರು ನಮ್ಮ ಕನ್ನಡದಂತೆ ಎಷ್ಟೋ ಪದಗಳನ್ನು ನುಡಿದಂತೆ ಬರೆಯಲಾರರು,ಬರೆದಂತೆ ನುಡಿಯಲಾರರು! ಒಂದು ವೇಳೆ ಕನ್ನಡ ವರ್ಣಮಾಲೆಯನ್ನೂ ಅಲ್ಪ ಪ್ರಾಣಿಗಳ ಅನುಕೂಲಕ್ಕಾಗಿ ಮೂವತ್ಮೂರು ಅಕ್ಷರಗಳಿಗೇ ಇಳಿಸಿಬಿಟ್ಟರೆ ನೋಡಿ' ಚೆನ್ನೈನಲ್ಲಿರುವ ಸರ್ವಜ್ಞ,ಬೆಂಗಳೂರಿನಲ್ಲಿರುವ ತಿರುವಳ್ಳುವರ್ ನಿರಾತಂಕವಾಗಿ ಕವನ ಕಟ್ಟಿ ಅದನ್ನು ದ್ರಾವಿಡ ಭಾಷಾ ಕವನ ಎಂದು ನಿರಾಳವಾಗಿ ಇದ್ದುಬಿಡಬಹುದು.

ನೋಡಿ, ಹಾಲಿನಿಂದ ಆರಂಭವಾದ ವಿಷಯ ಕೆರೆದ ಹುಣ್ಣು ಬ್ರಹ್ಮಾಂಡ ಆದಂತಾಯಿತು.ಆದರೂ ಕನಿಷ್ಠ ಹಾಲಿನ ವಿಷಯದಲ್ಲಾದರೂ ಅಲ್ಪ ಪ್ರಾಣಿ,ಮಹಾಪ್ರಾಣಿಗಳ ಉಚ್ಚಾರಣೆಗಳನ್ನು ಸಮನ್ವಯಗೊಳಿಸುವ ನಿಟ್ಟಿನಲ್ಲಿ ನಾವೊಂದು ಹೊಸ ಸೂತ್ರವನ್ನು ಕಂಡುಕೊಳ್ಳಬಹುದು.ಹಾಲಿನ ಸಾಂದ್ರತೆಯನ್ನು ಅಳೆಯಲು ಲ್ಯಾಕ್ಟೋಮೀಟರ್ ಎಂಬ ಮಾಪಕವನ್ನು ಬಳಸುತ್ತಾರಷ್ಟೆ.ಅದರಿಂದ ಹಾಲಿನಲ್ಲಿರುವ ಕೊಬ್ಬಿನ ಅಂಶವನ್ನು ಆಧರಿಸಿ

ಹಾಲಿನ ಬೆಲೆ ನಿಗದಿಯಾಗುತ್ತದೆ.ಹೆಚ್ಚು ಸಾಪೇಕ್ಷ ಸಾಂದ್ರತೆಯಿರುವ ಈ ಬಿಳಿದ್ರವವನ್ನು 'ಹಾಲು' ಎಂಬುದಾಗಿಯೂ,ಕಡಿಮೆ ಸಾಪೇಕ್ಷ ಸಾಂದ್ರತೆಯುಳ್ಳದ್ದನ್ನು 'ಆಲು' ಎಂಬುದಾಗಿಯೂ ಕನ್ನಡ- ಕನ್ನಡ ನಿಘಂಟಿನಲ್ಲಿ ಸೇರಿಸಬಹುದು.

ಹಳ್ಳಿಯಲ್ಲಿ ಹುಟ್ಟಿ ಬೆಳೆದ ನನ್ನಂಥವರಿಗೆ ಇನ್ನೊಂದು ಬಗೆಯ ಹಾಲೂ ತಿಳಿದಿರುತ್ತದೆ.ಅತ್ತಿ,ಎಕ್ಕ,ಹಲಸು,ಬೇವು,ಕಳ್ಳಿ ಮುಂತಾದ ಮರಗಳ ಕಾಂಡವನ್ನು ಗೀರಿದಾಗ ಒಸರುವ ಅಂಟು ದ್ರವವೂ ಹಾಲೇ. ಅದರಿಂದಾಗಿಯೇ ' ಬೆಳ್ಳಗಿರುವುದೆಲ್ಲ ಹಾಲಲ್ಲ' ಎಂಬ ಗಾದೆ ಹುಟ್ಟಿರಬಹುದು.

ನನ್ನ ಶಾಲಾದಿನಗಳ ಹಿಂದಿ ಪಠ್ಯಪುಸ್ತಕದಲ್ಲಿ ' ದೂಧ್ ಕಾ ದೂಧ್, ಪಾನೀ ಕಾ ಪಾನಿ' ಎಂಬ ನೀತಿ ಪಾಠವಿತ್ತು.ಕಥೆ ಬಹಳ ಸರಳವಾದುದು.ಒಬ್ಬ ಹಾಲಪ್ಪ(ಅದು ಹೆಸರಲ್ಲ) ಹಾಲಿಗೆ ಅರ್ಧದಷ್ಟು ನೀರು ಬೆರೆಸಿ ಗ್ರಾಹಕರಿಗೆ ಮೋಸ ಮಾಡುತ್ತಿದ್ದ.ಒಂದು ಮಧ್ಯಾಹ್ನ ಹಾಲನ್ನೆಲ್ಲ ಪೇಟೆಯಲ್ಲಿ ಮಾರಿ ತನ್ನೂರಿಗೆ ಹಿಂದಿರುಗುತ್ತಿದ್ದ.ದಾರಿಯಲ್ಲಿ ಎತ್ತರದ ಮರದ ನೆರಳಿನಲ್ಲಿ ಕುಳಿತು ಊಟದ ಬುತ್ತಿ ಗಂಟನ್ನು ಬಿಚ್ಚಿದ.ಪಕ್ಕದಲ್ಲೇ ಹಣದ ಗಂಟನ್ನೂ ಇರಿಸಿಕೊಂಡಿದ್ದ.ಕೋತಿಯೊಂದು ಎಲ್ಲಿಂದಲೋ ಹಾರಿಬಂದು ಅವನಿಗೆ ತಿಳಿಯದಂತೆ ಹಣದ ಚೀಲವನ್ನೆತ್ತಿಕೊಂಡು ಮರ ಹತ್ತಿ ಕೊಂಬೆಯ ಮೇಲೆ ಕುಳಿತಿತು.ಚೀಲದ ಗಂಟನ್ನು ಬಿಚ್ಚಿತು.ಅಲ್ಲಿ ತಿನಿಸೇನೂ ಸಿಗದಿದ್ದ ಕಾರಣ ನಿರಾಸೆಯಿಂದ ಒಂದೊಂದೇ ರೂಪಾಯಿ ನಾಣ್ಯವನ್ನು ಕೆಳಕ್ಕೆ ಎಸೆಯತೊಡಗಿತು.ಅವುಗಳಲ್ಲಿ ಕೆಲವು ನೆಲದ ಮೇಲೂ,ಮತ್ತೆ ಕೆಲವು ಬದಿಯೇ ಇದ್ದ ಕೆರೆಯ ನೀರಿಗೂ ಬಿದ್ದವು.ಬಳಿಕ ಚೀಲವನ್ನು ಖಾಲಿ ಮಾಡಿ ಕೆಳಕ್ಕೆ ಹಾಕಿ ಅವನನ್ನು ಅಣಕಿಸಿತು.ಅವನು ಸಿಕ್ಕಷ್ಟೆ ಪುಣ್ಯ ಎಂದುಕೊಂಡು ನೆಲದ ಮೇಲೆ ಬಿದ್ದಿದ್ದ ನಾಣ್ಯಗಳನ್ನು ಎತ್ತಿಟ್ಟುಕೊಂಡ.ಎಣಿಸಿದರೆ ತಾನು ಗಳಿಸಿದ್ದರಲ್ಲಿ ಅರ್ಧದಷ್ಟು ನಾಣ್ಯಗಳಷ್ಟೆ ಇದ್ದವು.ಪಶ್ಚಾತ್ತಾಪದಿಂದ ಅವನು ತನ್ನಲ್ಲೆ ಹೇಳಿಕೊಂಡ ' ಹಾಲಿನದು ಹಾಲಿಗೆ,ನೀರಿನದು ನೀರಿಗೆ' .ಅತಿಯಾಸೆ ಗತಿಕೇಡು ಎಂಬ ಈ ನೀತಿ ಕಥೆ ನಮ್ಮ ಮನೆಯ ಹಾಲು ಹುಡುಗನಿಗೆ ಅದೆಷ್ಟರ ಮಟ್ಟಿಗೆ ಅರ್ಥವಾಯಿತೋ,ನೀರು ಬೆರೆಸುವ ಮೋಸವಂತೂ ಅವನಿಂದ ಸಾಧ್ಯವಿರದಲ್ಲ! ಕಾರಣ ಅವನು ನೀಡುತ್ತಿದ್ದುದು ನಂದಿನಿ ಹಾಲಿನ ಪ್ಯಾಕೆಟ್ಟು ತಾನೆ?

5. ಗಣಪತಿ ಹೆಗಡೆ



ಕಾವ್ಯ ಹಾಗೂ ರಸೋತ್ಪತ್ತಿ:

'ಶಬ್ದಾರ್ಥೌ ಸಹಿತೌ ಕಾವ್ಯಂ' ಎನ್ನುವದು, ಗದ್ಯವಿರಲಿ ಅಥವಾ ಪದ್ಯವಿರಲಿ' ಬರಹಗಳಿಗೆ ಸಂಬಂಧಿಸಿದ ಒಂದು ಪರಿಚಯಾತ್ಮಕವಾದ ಹೇಳಿಕೆ. ಕಾವ್ಯ ಅಂದರೆ ಸಾಹಿತ್ಯ ಎನ್ನುವದಕ್ಕೆ ಒಂದು ಪರ್ಯಾಯ ಪದ. ಇಲ್ಲಿ 'ಶಬ್ದಾರ್ಥ 'ಸಹಿತ'ವಾದದ್ದು ಸಾಹಿತ್ಯ' ಅಂತ ಅರ್ಥ ವಿವರಣೆ. ಅರ್ಥವಿಲ್ಲದ ಅಕ್ಷರ ಸಮೂಹಗಳು ಒಂದು 'ಶಬ್ದ' ಅಂತ ಹೇಳಿಸಿಕೊಳ್ಳಲಾರವು. 'ಣಿದಪ್ರಾಯಾಘಸಂ' ಇದು ಆರು ಅಕ್ಷರಗಳನ್ನು ಕೂಡಿದ ಒಂದು ಅಕ್ಷರ ಸಮೂಹ. ಆದರೆ ಅರ್ಥ ಸ್ಪುರಣೆ ಇಲ್ಲದೇ ಇರುವದರಿಂದ ಒಂದು ಶಬ್ದ ಅಂತ ಕರೆಯಿಸಿಕೊಳ್ಳುವದಿಲ್ಲ. ಇದು ಅರ್ಥವತ್ತಾಗಲು, ಈ ಅಕ್ಷರಗಳನ್ನು ಒಂದು ವ್ಯವಸ್ಥಿತವಾದ ರೀತಿಯಲ್ಲಿ ಜೋಡಿಸಬೇಕು. 'ಪ್ರಾ-ಣಿ-ದ-ಯಾ-ಸಂ-ಘ' ಹೀಗೆ ಕ್ರಮಬದ್ಧವಾಗಿ ಜೋಡಿಸಿದಾಗ ಮಾತ್ರ ಅರ್ಥ ಸ್ಪುರಿಸುತ್ತದೆ. ಘ ಎನ್ನುವ ಅಕ್ಷರ ಮುಗಿದ ಕೂಡಲೇ ಈ ಅಕ್ಷರಸಮೂಹದ ಅರ್ಥ ಸ್ಪೋಟಿಸುತ್ತದೆ. ಆದುದರಿಂದ ಇದೊಂದು ಶಬ್ದ ಅಂತ ಗುರುತಿಸಬಹುದು. (ಅರ್ಥಪೂರ್ಣವಾದ ಅಕ್ಷರ ಸಮೂಹವನ್ನು ಶಬ್ದವೆಂತಲೂ, ಅರ್ಥಪೂರ್ಣವಾದ ಶಬ್ದಸಂಚಯವನ್ನು ವಾಕ್ಯವೆಂತಲೂ ಕರೆಯುತ್ತಾರೆ).

ಹೀಗೆ 'ಸಹಿತವಾದದ್ದು' (ಶಬ್ದಾರ್ಥ ಎನ್ನುವದು ಗ್ರಹೀತ) ಸಾಹಿತ್ಯ ಎಂದಾಗ ಎಲ್ಲಾ ರೀತಿಯ ಬರಹಗಳೂ ಸಾಹಿತ್ಯದ ವ್ಯಾಪ್ತಿಗೆ ಬರುವದು ಸಹಜ. ಅಂದರೆ ಅಕ್ಷರ ರೂಪದಲ್ಲಿ ಬರೆದಿದ್ದೆಲ್ಲಾ ಸಾಹಿತ್ಯವೇ ಸರಿ.

ಈ ಸಾಹಿತ್ಯವನ್ನು ಬೇರೆ ಬೇರೆ ಪ್ರಕಾರದಿಂದ ಗುರುತಿಸುವದನ್ನು ನಾವೆಲ್ಲರೂ ತಿಳಿದಿದ್ದೇ ಆಗಿದೆ. ಪ್ರವಾಸದ ಪರಿಚಯ ಮಾಡಿಕೊಡುವದು ಪ್ರವಾಸ ಸಾಹಿತ್ಯ, ಅನುವಾದ ರೂಪವಾದರೆ ಅನುವಾದ ಸಾಹಿತ್ಯ, ವ್ಯಕ್ತಿ ಚಿತ್ರಣವಾದರೆ ಆತ್ಮ ಚರಿತ್ರೆ ಅಥವಾ ಜೀವನ ಚರಿತ್ರೆ, ಪುರಾಣಕ್ಕೆ ಸಂಬಂಧಿಸಿದ್ದಾದರೆ ಪುರಾಣಸಾಹಿತ್ಯ, ಇತಿಹಾಸಕ್ಕೆ ಸಂಬಂಧಿಸಿದ್ದರೆ ಇತಿಹಾಸ ಸಾಹಿತ್ಯ, ವೈದ್ಯಕೀಯ ವಿಭಾಗಕ್ಕೆ ಸಂಬಂಧಿಸಿದರೆ ವೈದ್ಯಕೀಯ ಸಾಹಿತ್ಯ, ಸ್ತ್ರೀಯರ ನೋವಿಗೆ ಸಂಬಂಧಿಸಿದ್ದಾದರೆ ಸ್ತ್ರೀಪರ ಸಾಹಿತ್ಯ, ಚಿಕ್ಕ ಮಕ್ಕಳಿಗೆ ಸಂಬಂಧಿಸಿದ್ದಾದರೆ ಶಿಶು ಸಾಹಿತ್ಯ, ದಲಿತರಿಗೆ ಸಂಬಂಧಿಸಿದ್ದು ದಲಿತ ಸಾಹಿತ್ಯ ಹೀಗೆ ಹತ್ತು ಹಲವು ಪ್ರಕಾರದ ಸಾಹಿತ್ಯ ಪ್ರಭೇದಗಳನ್ನು ಕಾಣಬಹುದು.

ಆದರೆ ಕೆಲವು ಬರಹಗಳನ್ನು, ಇವು ನೀರಸವಾಗಿವೆ ಎಂದು ಹೇಳುವದನ್ನು ಕೇಳುತ್ತೇವೆ. ಕೆಲವೊಂದು ಸಾಹಿತ್ಯ ಕೃತಿಗಳನ್ನು ಒತ್ತಾಯಕ್ಕೋ ಅಥವಾ ಪರೀಕ್ಷಾ ದೃಷ್ಟಿಯಿಂದಲೋ ಓದುವದಿರುತ್ತದೆ. ಇಂತಹ ನೀರಸವಾದ ಸಾಹಿತ್ಯವನ್ನು ಗುರುತಿಸುವದು ಕಷ್ಟವೇನಲ್ಲ. ಸಂವಿಧಾನವನ್ನೋ ಅಥವಾ ಅದರ ವ್ಯಾಖ್ಯಾನವನ್ನೋ ಓದುವಾಗ ಮನಸ್ಸು ಯಾವುದೇ ಭಾವನೆಗೆ ಒಳಪಡುವದಿಲ್ಲ. ಯಾರದಾದರೂ ಜೀವನ ಚರಿತ್ರೆ ಅವನ ಹುಟ್ಟು, ಬಾಲ್ಯ, ಶಿಕ್ಷಣ, ಕೆಲಸ, ಮದುವೆ, ಮಕ್ಕಳು, ಸಾವು ಇವುಗಳಷ್ಟನ್ನೇ ತಿಳಿಸಿದಲ್ಲಿ ಆ ಸಾಹಿತ್ಯ ಅವನ ಕುರಿತಾದ ತಿಳುವಳಿಕೆ ಮಾತ್ರ ಅಂತ ಆಯಿತು. ಇಂತಹ ಓದಿಗೆ 'ಎಕಾಡಮಿಕ್ ' ಮಹತ್ವ ಮಾತ್ರ. ಅಂದರೆ ಇಂತಹ ಬರಹಗಳು ಮನಸ್ಸಿಗೆ ಮುದವನ್ನು ಕೊಡುವಂತಹವಲ್ಲ.

ಆದರೆ ಯಾವುದೇ ಭಾಷೆಯ ಕೃತಿಗಳಿರಲಿ, ಎಲ್ಲಾ ರೀತಿಯ ಬರಹಗಳನ್ನು ಸಾಹಿತ್ಯ ಅಂತ ಕರೆದರೂ 'ಕಾವ್ಯ' ಎಂದು ಗುರುತಿಸುವಾಗ ಕೇವಲ ಅರ್ಥವತ್ತಾದ ಶಬ್ದಸಮೂಹ ಆದರೆ ಸಾಲದು. ಇನ್ನೂ ಸ್ವಲ್ಪ ಆಳವಾಗಿ ಚಿಂತಿಸಬೇಕು.

ಕಾವ್ಯದ ಕುರಿತಾದ ವ್ಯಾಖ್ಯಾನದಲ್ಲಿ ಅತಿ ಸರಳವಾದ ಹಾಗೂ ಪರಿಪೂರ್ಣವಾದ ಹೇಳಿಕೆ ವಿಶ್ವನಾಥನ ಸಾಹಿತ್ಯ ದರ್ಪಣದಲ್ಲಿದೆ. 'ವಾಕ್ಯಂ ರಸಾತ್ಮಕಂ ಕಾವ್ಯಂ' ಅಂತ. ರಸವನ್ನು ಒಳಗೊಂಡ ವಾಕ್ಯವೇ ಕಾವ್ಯ. ಹೀಗೆ ವಿಚಾರಿಸಿದರೆ ಎಲ್ಲಾ ವಾಕ್ಯಗಳು ರಸಾತ್ಮಕವಾಗಿರುವದಿಲ್ಲ. ಇದರಿಂದಾಗಿ ನೀರಸವಾದ ಸಾಹಿತ್ಯವನ್ನು ಕಾವ್ಯಪ್ರಕಾರವೆಂದು ಸೂಚಿಸಲು ಸಾಧ್ಯವಿಲ್ಲ. ಇದನ್ನು ಮುಂದುವರಿಸಿದವನು 'ದೋಷಾಸ್ತಪ್ಯಾಕರ್ಷಕಾ ಉತ್ಕರ್ಷಹೇತವಃ ಪ್ರೋಕ್ತಾ ಗುಣಾಲಂಕಾರ ರೀತಯಃ' ಅಂತ ಹೇಳಿ ರಸೋತ್ಪತ್ತಿಯ ಜೊತೆ ಗುಣ ಹಾಗೂ ಅಲಂಕಾರಗಳು ಕಾವ್ಯದ ಪ್ರಭಾವವನ್ನು ಹೆಚ್ಚಿಸುತ್ತದೆ ಎನ್ನುತ್ತಾನೆ.

'ಶೃಂಗಾರ ಹಾಸ್ಯ ಕರುಣಾ ರೌದ್ರ ವೀರ ಭಯಾನಕ

ಭೀಭತ್ಸಾದ್ಭುತಶಾಂತಶ್ಚ ನವ ನಾಟ್ಯೇ ರಸಾಸ್ಸ್ಮೃತಃ' ಹೀಗೆ ಲಾಕ್ಷಣಿಕರು ಒಂಬತ್ತು ರಸಗಳನ್ನು ಗುರುತಿಸಿದ್ದಾರೆ. (ಶಾಂತ ಎನ್ನುವದನ್ನು ಕೆಲವರು ರಸ ಅಂತ ಪರಿಗಣಿಸುವದಿಲ್ಲ. ಎಲ್ಲಾ ರಸಗಳನ್ನು ಮೀರಿದ ಆನಂದ ಸ್ಥಿತಿ ಈ ಶಾಂತ ರಸ ಎನ್ನುತ್ತಾರೆ. ಈ ರಸಗಳಿಗೆ ಮೂಲವಾದ ಸ್ಥಾಯೀ ಭಾವಗಳು

ಎಂಟು ಎನ್ನುವದುಂಟು. ' ರತಿರ್ಹಾಸಶ್ಚ ಶೋಕಶ್ಚ ಕ್ರೋಧೋತ್ಸಾಹೌ ಭಯಂ ತಥಾ।
ಜುಗುಪ್ಸಾ ವಿಸ್ಮಯಶ್ಚೇತಿ ಸ್ಥಾಯೀಭಾವಾಃ ಪ್ರಕೀರ್ತಿತಾಃ॥'. ಈ ಸ್ಥಾಯೀಭಾವಗಳು ರಸವು ಉತ್ಪನ್ನವಾಗಲು ಮೂಲಕಾರಣ ಎನ್ನುತ್ತಾರೆ. ಆದರೆ ಕೆಲವರು ಶಮ ಎನ್ನುವ ಸ್ಥಾಯೀಭಾವ ಉಂಟೆಂದೂ, ಅದರ ರಸರೂಪ ಶಾಂತರಸ ಎನ್ನುವದು ಅವರ ಅಭಿಪ್ರಾಯ.)

ಭಗವಾನ್ ಬುದ್ಧನ ಶಾಂತ ರೂಪವನ್ನು ಶಾಂತರಸದ ಉದಾಹರಣೆಯಾಗಿ ಗುರುತಿಸುವದುಂಟು. ಗೀತೆಯಲ್ಲಿ ಹೇಳಿದ 'ದುಃಖೇಷು ಅನುದ್ವಿಗ್ನ ಮನಃ ಸುಖೇಷು ವಿಗತಸ್ಪೃಹಃ। ವೀತರಾಗ ಭಯಕ್ರೋಧಃ ಸ್ಥಿತಧೀರ್ಮುನಿರುಚ್ಯತೇ॥' ಎನ್ನುವದೂ ಒಂದುರೀತಿಯಿಂತ ಶಾಂತರಸದ ಉದಾಹರಣೆಯೆ.

ರಸೋತ್ಪತ್ತಿ ಎನ್ನುವದು ಚಿತ್ತವೃತ್ತಿಗೆ ಸಂಬಂಧಿಸಿದ್ದು. ಶೃಂಗಾರ, ಹಾಸ್ಯ ಮೊದಲಾದ ರಸಗಳು ಹುಟ್ಟಿಕೊಳ್ಳುವದು ಭಾವನೆಗಳಲ್ಲಿ. 'ವಿಭಾವಾನುಭಾವ ವ್ಯಭಿಚಾರೀ ಸಂಯೋಗಾತ್ ರಸನಿಷ್ಪತಿಃ' ಎನ್ನುವದು ರಸೋತ್ಪತ್ತಿ ಕುರಿತಾದ ಒಂದು ಹೇಳಿಕೆ.

ಮನಸ್ಸು ಒಂದು ಸರೋವರವಿದ್ದ ಹಾಗೆ. ಸರೋವರದಲ್ಲಿ ಹೊರಗಿನಿಂದ ಒಂದು ಕಲ್ಲು ಬಿದ್ದರೆ ತರಂಗಗಳೆದ್ದು ಹರಡುತ್ತಾ, ಹೋಗುತ್ತವೆ. ಹಾಗೆಯೆ ಮನಸ್ಸು ಕೂಡ ಹೊರಗಿನ ಪ್ರಚೋದನೆಗಳಿಗೆ ಪ್ರತಿಕ್ರಿಯೆ ತೋರಿಸುತ್ತಾ, ತರಂಗಗಳೇಳುತ್ತಲೇ ಇರುತ್ತವೆ. ಇದು ರಸೋತ್ಪತ್ತಿಗೆ ಮೂಲ ಕಾರಣ.

ಮೂಲಭೂತವಾಗಿ ರಸತತ್ವವು ತಲೆಯೆತ್ತಿದ್ದು ಗೀತ, ವಾದ್ಯ, ಅಭಿನಯಾದಿಗಳಿಂದ ಕೂಡಿದ ನಾಟ್ಯ ಅಥವಾ ನಾಟಕವನ್ನು ದೃಷ್ಟಿಯಲ್ಲಿಟ್ಟುಕೊಂಡು. ಆದುದರಿಂದಲೇ ಅಭಿನಯಪೂರ್ವಕವಾದ ನಾಟಕವನ್ನು ದೃಶ್ಯಕಾವ್ಯ ಎನ್ನುತ್ತಾರೆ. ರಸಾಸ್ವಾದನೆಗೆ ಮೂಲದ್ರವ್ಯ ನಾಟಕ ಮೊದಲಾದ ದೃಶ್ಯ ಮಾಧ್ಯಮಗಳು.

ಶ್ರಾವ್ಯಕಾವ್ಯವಾದ ಓದುವದರಿಂದಲೋ ಅಥವಾ ಕೇಳುವದ ರಿಂದಲೋ ರಸೋತ್ಪತ್ತಿ ಹೇಗೆ?. ಓದುವವನ ಅಥವಾ ಕೇಳುವವನ ಚಿತ್ತದಲ್ಲಿ ಭಾವತರಂಗಗಳು ಹೇಗೆ ಏಳುತ್ತವೆ?. ಹಾಸ್ಯಪ್ರಧಾನವಾದ ಸನ್ನಿವೇಶವನ್ನು ಓದುವದರಿಂದ ಹಾಸ್ಯರಸವೋ, ಗಂಡು ಹೆಣ್ಣಿನ ಅನುರಾಗಕ್ಕೆ ಸಂಬಂಧಿಸಿದ ವಿಷಯವನ್ನು ಓದುವಾಗ ಶೃಂಗಾರರಸವೋ ಹೇಗೆ ಉತ್ಪತ್ತಿಯಾಗುತ್ತದೆ?.

ಕಾವ್ಯದ ಮಾತುಗಳು ಶ್ರೋತೃವಿನ ಕಿವಿಯ ಮೇಲೆ ಬಿದ್ದು ಹಾಗೇ ಉಳಿದು ಬರಿಯ ಮಾತುಗಳಾಗಿಯೇ ನಿಂತರೆ ರಸಾಸ್ವಾದವಾಗುವ ಸಂಭವವೇ ಇಲ್ಲ. ನಾಟ್ಯರಸದ ವಿವರಣೆ ಕಾವ್ಯರಸಕ್ಕೂ ಹೇಗೆ ಅನ್ವಯಿಸುತ್ತದೆ?.

ಲಾಕ್ಷಣಿಕರು ಹೇಳುವ ಹಾಗೆ, ಓದುವಾಗ ಅಥವಾ ಕೇಳುವಾಗ, ಅವನ ಮನಸ್ಸಿನಲ್ಲಿಯೇ ಒಂದು ರಂಗಮಂದಿರ ನಿರ್ಮಾಣವಾಗಬೇಕು. ಕವಿಯ ಹೇಳಿಕೆಗಳು ಸನ್ನಿವೇಶಗಳನ್ನು ಹುಟ್ಟುಹಾಕಿ, ಅವನು ಚಿತ್ರಿಸಿದ ವ್ಯಕ್ತಿಗಳು ಜೀವಂತ ಪಾತ್ರವಾಗಿ ಶ್ರೋತೃನ ಭಾವನೆಗಳಲ್ಲಿ ವಿಹರಿಸಬೇಕು. ಕಾವ್ಯದ ಪಾತ್ರಗಳು ಜೀವವುಳ್ಳ ವ್ಯಕ್ತಿಗಳಂತೆ ಮನಸ್ಸಿನಲ್ಲಿ ಸುಳಿದು ತಮ್ಮ ವಿಧವಿಧವಾದ ನಡವಳಿಕೆಗಳನ್ನು ಪ್ರದರ್ಶಿಸಬೇಕು. ಹೀಗೆ ಕಾವ್ಯದ ವಸ್ತುಗಳೆಲ್ಲವೂ ಸಹೃದಯನ ಒಳಗಣ್ಣಿಗೆ ಸಾಕ್ಷಾತ್ತಾಗಿ ನಡೆದಂತೆ ಭಾಸವಾಗಬೇಕು. ಆಗ ಇಂತಹ ಕಾವ್ಯಗಳನ್ನು ಓದುವದರಿಂದ ಅಥವಾ ಕೇಳುವದರಿಂದ ನವರಸಗಳು ಅನುಭವಕ್ಕೆ ಬರುವುದು ಸಾಧ್ಯ.

ಹೀಗೆ, ಯಾವ ಸಾಹಿತ್ಯವನ್ನು ಓದುವದರಿಂದ ಅಥವಾ ಕೇಳುವದರಿಂದ ಸಹೃದಯನ ಮನಸ್ಸಿನಲ್ಲಿ ರಂಗಮಂದಿರ ನಿರ್ಮಾಣವಾಗಿ ರಸಗಳ ಅನುಭವವಾಗುತ್ತದೆಯೋ ಅದನ್ನು ಕಾವ್ಯ ಎನ್ನಬಹುದು. ಉಳಿದ ಸಾಹಿತ್ಯಗಳೆಲ್ಲ ಕೇವಲ ಬರಹಗಳು ಮಾತ್ರ.

ಇದನ್ನು ಲಕ್ಷಿಸಿದರೆ, ವೇದ, ಶಾಸ್ತ್ರಗಳು, ಕಾಯಿದೆ, ಸಂವಿಧಾನ, ಪರಿಚಯ, ವ್ಯಕ್ತಿ ಚಿತ್ರಣ, ವಿಮರ್ಶಾಬರಹ ಮುಂತಾದ ಸಾಹಿತ್ಯಗಳು ಕಾವ್ಯಗಳಲ್ಲ. ಕೇವಲ ಬರಹಗಳು.

6. ವಿಠ್ಠಲ. ಇಜೇರಿ



ನಗೆಗಾರ ನಯಸೇನನ ಕಥಾ ಸಂಗ್ರಹ

ನಯಸೇನ 1150 ರ ದಶಕದಲ್ಲಿ ಗದಗ ಜಿಲ್ಲೆಯ ಮುಳುಗುಂದದಲ್ಲಿ ವಾಸವಿದ್ದನು. ಅವನೊಬ್ಬ ಶ್ರೇಷ್ಠ ಜೈನ ಸನ್ಯಾಸಿ. ಸನ್ಯಾಸಿ ಅಂತಲೋ ಏನೋ ಇವನ ತಂದೆ ತಾಯಿ, ಕುಟುಂಬದ ವಯಕ್ತಿಕ ವಿವರಗಳು ಲಭ್ಯವಿಲ್ಲ. ಅವನು ರಚಿಸಿದ ಚಂಪೂ ಕಾವ್ಯ ಧರ್ಮಾಮೃತ ಜೈನ ಧರ್ಮದ ಮಹತಿಯನ್ನು ಕುರಿತಾಗಿದೆ. ಇದರಲ್ಲಿ ಒಟ್ಟು ಹದಿನಾಲ್ಕು ಕಥೆಗಳಿವೆ. ಎಲ್ಲ ಕತೆಗಳಲ್ಲಿ ಹಾಸ್ಯ, ವಿಡಂಬನೆ ರಾರಾಜಿಸುತ್ತಿದೆ. ಕತೆ ಹೇಳುವ ಜಾಣ್ಮೆ ನಯಸೇನನಿಗಿದೆ. ಕತೆಗಳಲ್ಲಿ ಗಾದೆ ಮಾತುಗಳನ್ನು ಮತ್ತು ದೇಸಿ ನಾಣ್ಣುಡಿಗಳನ್ನು ಹೇರಳವಾಗಿ ಬಳಸಿದ್ದಾನೆ. ಅವನ ಕಾವ್ಯ ಮಣ್ಣಿನ ವಾಸನೆ ಹೊಂದಿವೆ. ಅವನ ಅವನ ಭಾಷೆ ಸಂಪದ್ಭರಿತ ಎಂದು ಎಚ್. ಎಸ್. ಹರಿಶಂಕರ್, ಕನ್ನಡ ಪ್ರಾಧ್ಯಾಪಕರು, (ಮಾನಸ ಗಂಗೋತ್ರಿ, ಮೈಸೂರು) ಅದನ್ನು ಈ ಮಾತುಗಳಲ್ಲಿ ತಿಳಿಸುತ್ತಾರೆ. ನಯಸೇನನ ಕನ್ನಡದ ಅಭಿಮಾನ ದೊಡ್ಡದು. ನಯಸೇನನ ಲೋಕಾನುಭವ ಅದ್ವೀ ತೀಯವಾದುದು. ಆತನ ಕಣ್ಣಿಗೆ ಕಾಣದ ವಸ್ತುವೇ ಇಲ್ಲ. ಜನಜೀವನವನ್ನು ತೀಕ್ಷ್ಣವಾಗಿ ಅವಲೋಕಿಸಿದ್ದಾನೆ. ಆದುದರಿಂದ ಒಂದಕ್ಕೆ ಹತ್ತು ಹೋಲಿಕೆ ಕೊಡಲು ಸಮರ್ಥನಾಗಿದ್ದಾನೆ. ಒಂದರ ಮೇಲೊಂದು ಉಪಮಾನಕೊಡುತ್ತ ಉಪಮಾನಗಳ ಸರಣಿಯನ್ನೇ ನಮ್ಮೆದುರು ನಿಲ್ಲಿಸುತ್ತಾನೆ. ಹೇಳಬೇಕಾದ ವಿಷಯ ಪೂರ್ಣವಾಗುವುದರೊಂದಿಗೆ ಅವನ ಲೋಕಾನುಭವವೂ ವೇದ್ಯವಾಗುವುದು. ಅವನು ಒಂದು ಸ್ಥಳದಲ್ಲಿ ನೀಡುವ ಉದಾಹರಣೆ ನೋಡಿ " ಪಾದರಿ ಗಂಡನಂ ನಂಬಿ ಮನೆಯ ಗಂಡನನ್ನು ಬಿಡುವಂತೆ.

2. ಸಜ್ಜನವೆಂಡತಿಯಾನೊಲ್ಲದೆಗಾಳುವಪ್ಪ ಸೂಳೆಯಂ ಮೆಚ್ಚುವಂತೆ.

3. ಮೂರುದಿನದಪಗರಣಕ್ಕೆ ಗಡ್ಡ ಮೀಸೆ ಮಂಡೆಯಂ ಬೋಳಿಸಿಕೊಳ್ವಂತೆ "

ಹಳ್ಳಿಗಳ ನಾಟಕಗಳಲ್ಲಿ ಗಂಡಸರೇ ಸ್ತ್ರೀ ಪಾತ್ರ ವಹಿಸುತ್ತಿದ್ದರು ಮತ್ತು ಅದಕ್ಕಾಗಿ ಗಡ್ಡ, ಮೀಸೆ, ತಲೆ ಬೋಳಿಸಿಕೊಳ್ಳುತ್ತಿದ್ದರು. ಆ ಮೇಲೆ ಒಂದು ತಿಂಗಳು ಬಾಯಿ ಮುಚ್ಚಿಕೊಂಡು ತಿರುಗಾಡುತ್ತಿದ್ದರು.

ಇನ್ನೊಂದು ಉದಾಹರಣೆ ಜನ ಅಲ್ಪವಾದುದನ್ನು ಹಿಗ್ಗಿಸಿ ಹೇಳುವುದರ

ಕುರಿತಾದದ್ದು. ತಾವು ಉಪವಾಸವಿದ್ದರೂ ಹೋಳಿಗೆ ತುಪ್ಪ ತಿಂದೆವೆಂದು ಹೇಳುವವರ ಬಗ್ಗೆ, ಸಂಸಾರದ ಅಲ್ಪ ಸುಖವನ್ನೇ ಮಹಾಸುಖವೆಂದು ಭಾವಿಸುವವರ ಕುರಿತು ನಯಸೇನ ಹೀಗೆ ಬರೆಯುತ್ತಾನೆ.

" ತವುಡಂ ತಿಂದು ತುಯ್ಯಲನ್ನುಂಡೆನೆಂಬ
ನಾಯನೇರಿ ಕರಿಯನೇರಿದೆ ಎಂಬಂತೆ
ಗಂಜಿಯ ಕುಡಿದು ಕಳವೆಯ ಕೂಳನುಂಡೆ ಎಂಬಂತೆ. (ಮೃಷ್ಟಾನ್ನ)
ಬಾಳೆಯಲೆಯಂ ತಿಂದು ಪಣ್ಣಂ ತಿಂದೆ ಎಂಬಂತೆ
ಕಬ್ಬಿನಡಿಯ ಬೇರಂ ತಿಂದು ಕಬ್ಬಂ ಮೆಲ್ದೆ ನೆಂಬಂತೆ."

ಇಂತಹ ಅನೇಕ ಮೋಜಿನ ಪ್ರಸಂಗಗಳನ್ನು ನಯಸೇನ ತನ್ನ ಕೃತಿಯಲ್ಲಿ ಪ್ರಸ್ತುತ ಪಡಿಸಿದ್ದಾನೆ. ಅವನ ಧರ್ಮಾಮೃತ ಕತೆಗಳ ಸಾಗರ. ಪ್ರತಿಯೊಂದು ವಿಷಯಕ್ಕೂ ಒಂದೊಂದು ಕತೆ ಮೀಸಲು. ಕೆಲವು ಕತೆಗಳಲ್ಲಿ ಕತೆಗೊಂದು ಕತೆ ಹುಟ್ಟಿ ಒಂದು ಕತೆಗೆ ಹಲವಾರು ಕಥೆಗಳಾಗುವವು.

ಅವನದೊಂದು ಕತೆ ನೋಡೋಣ :-

ಕತೆ.. ಅನಾಸಕ್ತೆ ಅನಂತಮತಿ.

::::::::: ::::::::::: ::::::::::

ಅಂಗದೇಶದಲ್ಲಿ ಪ್ರಿಯದತ್ತ ಸೆಟ್ಟಿ ಎಂಬ ಜೈನ ವರ್ತಕನಿದ್ದ, ಅವನ ಭಾರ್ಯೆ ಅಂಗಮತಿ. ಅವರಿಗೆ ಚೆಲುವಿನ ಖಣಿ ಅನಂತಮತಿ ಎಂಬ ಪುತ್ರಿ ಇದ್ದಳು. ಒಂದು ದಿನ ಆಕೆ ತನ್ನ ಸ್ನೇಹಿತೆಯರೊಡನೆ ಮದುವೆಯ ಆಟ ಆಡುತ್ತಿದ್ದಳು. ಪ್ರಿಯದತ್ತ ಸೆಟ್ಟಿಯು ದೇವರ ದರ್ಶನಕ್ಕೆಂದು ಬಸದಿಗೆ ಹೊರಟವನು ಮಕ್ಕಳ ಮದುವೆಯಾಟ ಕಂಡು ಅನಂತಮತಿಯನ್ನು ಅಕ್ಕರೆಯಿಂದ ಎತ್ತಿಕೊಂಡು ಮುದ್ದಾಡಿ " ಮಗಳೇ ಮದುವೆಗೆ ತೋರಣ ಕಟ್ಟ ಬೇಡವೇ?
ಮಂಗಳವಾದ್ಯ ಮೊಳಗಬೇಡವೇ ? ಬಂಧು ಬಾಂಧವರು ಬರಬೇಡವೇ? ನಿನ್ನನ್ನು ನಾನಾ ರತ್ನಗಳಿಂದ ಶೃಂಗರಿಸಬೇಡವೇ ? ವೈಭವದಿಂದ ನಿನ್ನ ಮದುವೆಯನ್ನು ಮಾಡಿ ಕಣ್ತುಂಬ ನೋಡ ಬೇಡವೇ? ನೀನು ನಿನ್ನ ಪ್ರೀತಿ ಪಾತ್ರರೊಡನೆ ಹೀಗೆ ಕದ್ದು ಮದುವೆಯಾಗುವುದೇ?. ಎಂದು ಹೇಳುತ್ತ ಬಸದಿಗೆ ಆಕೆಯೊಡನೆ ಬಂದನು.

ಈ ಕತೆ ಕ್ರಿ. ಶ.1152 ರಲ್ಲಿಯದು. ಅಂದಿನ ದಿನಗಳಲ್ಲಿಯೂ ಸಮಾಜದಲ್ಲಿ ಮದುವೆ ಎಂಬುದು ಒಂದು ಸಂತೋಷದ, ಸಂಭ್ರಮದ,

ನೆಂಟರಿಷ್ಟರು ಒಂದೆಡೆ ಸೇರುವ ಉತ್ಸಾಹದ ವ್ಯವಸ್ಥೆಯಾಗಿತ್ತು ಎಂಬುದು ಗೊತ್ತಾಗುವುದು.

ಬಸದಿಯಲ್ಲಿ ಮುನಿಗಳ ಬಳಿ " ನೋಡಿ ಸ್ವಾಮೀಜಿ, ಈ ನನ್ನ ಮಗಳು ನಮ್ಮಲ್ಲಿ ಯಾರಿಗೂ ಗೊತ್ತಾಗದಂತೆ ಮದುವೆ ಮಾಡಿಕೊಂಡಿರುವಳು. ಮದುವೆಗೆ ಮುಂಚೆ ಜಿನ ಪೂಜೆಯನ್ನು ಮಾಡಿಲ್ಲ, ಈಕೆಗೆ ತವು ಬ್ರಹ್ಮಚರ್ಯ ವ್ರತವನ್ನು ದಯಪಾಲಿಸಬೇಕು. " ಎಂದು ವಿನೋದಕ್ಕಾಗಿ ಕೇಳಿಕೊಂಡನು. ಮುನಿಗಳು " ಇಗೋ ನಿನಗೆ ಬ್ರಹ್ಮಚರ್ಯ ದಯಪಾಲಿಸಿದ್ದೇನೆ " ಎಂದು ಘೋಷಿಸಿ ಬಿಟ್ಟರು. ಅನಂತಮತಿಗೆ ಅಷ್ಟೇ ಸಾಕಾಯಿತು. ಬ್ರಹ್ಮಚರ್ಯ ದೊರೆತದ್ದು ಬಹಳ ಸಂತೋಷವಾಯಿತು. ಅದನ್ನು ಕವಿ ಹೇಳುವ ರೀತಿ ನೋಡಿ " ಬಡವ ರಾಜನಾದಂತೆ, ಕುರುಡನಿಗೆ ಕಣ್ಣು ಬಂದಂತೆ, ರೋಗಿಗೆ ಸಂಜೀವಿನಿ ಸಿಕ್ಕಿದಂತೆ, ಭವ ರೋಗಿಗೆ ಅಮೃತ ದೊರೆತಂತೆ, ಅನಂತಮತಿ ಅತೀವ ಸಂತೋಷದಿಂದ ಮನೆಗೆ ಬಂದಳು. ಒಂದು ದಿನ ಅನಂತಮತಿ ಉದ್ಯಾನದಲ್ಲಿ ತನ್ನ ಸಖಿಯರೊಡನೆ ಕಾಲ ಕಳೆಯುತ್ತಿದ್ದಳು.


ಅನಂತಮತಿ ಸಖಿಯರೊಡನೆ ಉಯ್ಯಾಲೆಯಾಡುತ್ತಿದ್ದಳು. ಕಿನ್ನಾರಗೀತದ ರಾಜ ವಿದ್ಯಾಧರನು ತನ್ನ ಮಡದಿ ಸುಕೇಶಿನಿಯೊಡನೆ ವಿಮಾನದಲ್ಲಿ ವಿಹಾರ ಹೊರಟಿದ್ದನು. ವಿದ್ಯಾಧರನು ಉಯ್ಯಾಲೆಯಾಡುತ್ತಿದ್ದ ಅನಂತಮತಿಯನ್ನು ಮೇಲಿನಿಂದಲೇ ನೋಡಿ ಆಕೆಯ ಚೆಲುವಿಗೆ ಮನಸೋತನು. ಅವನ ಮನಸ್ಸು ಅಸ್ತವ್ಯಸ್ತ ವಾಯಿತು, ಮೈ ಬಿಸಿಯಾಯಿತು. ಆಹಾ, ಎಂತಹ ಸುಂದರಿ, ಈಕೆಯ ನೋಟದಲ್ಲಿಯೇ ಕೋಟ್ಯಾನುಕೋಟಿ ಕುಸುಮಾಯುಧರು ಹುಟ್ಟುತ್ತಿರುವರಲ್ಲ, ಈಕೆಯ ಅಂಗಾಂಗಗಳು ಕಾಮನ ಬಾಣ, ಬತ್ತಳಿಕೆಗಳಾಗಿವೆಯಲ್ಲ ಅಂದುಕೊಂಡ. ವಿದ್ಯಾಧರನು ಮಡದಿಗೆ " ಪ್ರಿಯೆ, ನಾವು ದಾರಿ ತಪ್ಪಿರುವೆವು. ನಾಳೆ ನೀನು ಇನ್ನೂ ಚೆನ್ನಾಗಿ ಅಲಂಕಾರ ಮಾಡಿಕೊ, ಇಂದು ನಗರಕ್ಕೆ ಮರಳೋಣ " ಎಂದು ಇಬ್ಬರೂ ತಮ್ಮ ನಗರಕ್ಕೆ ಹಿಂದಿರುಗಿದರು. ನಂತರ ವಿದ್ಯಾಧರನು ನಾನು ಸರಿಯಾದ ಮಾರ್ಗ ನೋಡಿಕೊಂಡು ಬರುವುದಾಗಿ ಹೆಂಡತಿಗೆ ತಿಳಿಸಿ ಅನಂತಮತಿ ಇದ್ದಲ್ಲಿಗೆ ಬಂದು ಆಕೆಯನ್ನು ವಿಮಾನದಲ್ಲಿ ಕೂಡಿಸಿಕೊಂಡು ಹೋರಟನು. ಆಕೆಯ ಬಗ್ಗೆ " ಬ್ರಹ್ಮನ ಕಲಾಕುಸುಮ ಈಕೆ, ಎಳೆಯ ಬಳ್ಳಿಯಿಂದ ಇವಳನ್ನು ಮಾಡಿರುವರು, ಇಂಥ ಅಪೂರ್ವ ಸುಂದರಿ ನನ್ನ ವಶವಾಗಿರುವಳು. ಲಕ್ಷ್ಮಿಯ ರೂಪು ಶಶಿಯ ಚೆಲುವು, ಸಮರಸಗೊಂಡಂತೆ ಇವಳು ಕಂಗೊಳಿಸುವಳು. ಇವಳ ಮುಖ ಕಮಲ, ಇವಳ ಪೆರೆನೊಸಲು

ಮನೋಹರವಾಗಿದೆ. ಕಾಮ ಬಾಣಗಳೇ ಇವಳ ಅಂಗೈಯಲ್ಲಿ ಬೆರಳುಗಳಾಗಿವೆಯೆಲ್ಲ, ಎಂದು ಆ ಕುಮಾರಿಯ ಹಾವ,ಭಾವಗಳಿಗೆ ಮರುಳಾದನು.

ಇತ್ತ ಸುಕೇಶಿನಿ ಗಂಡ ವಿದ್ಯಾಧರ ಹೋಗಿ ಬಹಳ ಸಮಯವಾದರೂ ಏಕೆ ಬರಲಿಲ್ಲ, ಎಂದು ತನ್ನ ಅನುಚರಳನ್ನು ಶೃಷ್ಟಿಸಿ ಕಳುಹಿಸಿದಳು. ಆಕೆ ವಿದ್ಯಾಧರನ ಚಲನವಲನಗಳ ಮಾಹಿತಿ ನೀಡಿದಳು. ಸುಕೇಶಿಗೆ ತನ್ನ ಪತಿ ಅನಂತಮತಿಯತ್ತ ಆಕರ್ಷಿತಾನಾದುದು ತಿಳಿದು ರವಿಕೆಯಲ್ಲಿ ವಜ್ರದಂಡ ಆಯುಧ ಬಚ್ಚಿಟ್ಟುಕೊಂಡು. ಗಂಡನನ್ನು ಹುಡುಕಿಕೊಂಡು ಹೋದಳು. ವಿದ್ಯಾಧರನು ಹೆಂಡತಿ ರೋಷದಿಂದ ಬರುವುದನ್ನು ಕಂಡು
ತನ್ನ ಸಾರಥಿಗೆ ಅನಂತಮತಿಯನ್ನು ಪರ್ಣ ಕುಟೀರದಲ್ಲಿ ಇಳಿಸಿ ಬಾ " ಎಂದು ಕಳಿಸಿದನು.

ಸಾರಥಿ ಅವಳನ್ನು ಹತ್ತಿರದ ಕಾಡಿನಲ್ಲಿ ಬಿಟ್ಟು ಬಂದನು. ಅನಂತಮತಿ ತಾನರಿಯದ ಕಾಡಿನಲ್ಲಿ ಭೀತಳಾಗಿ ಧರ್ಮ ಮಾತ್ರ ರಕ್ಷಿಸಬಲ್ಲುದು ಎಂದು ಜಿನೇಂದ್ರನಿಗೆ ಶರಣಾದಳು. ಅಲ್ಲಿಯ ಪ್ರಾಣಿಗಳು ಅನಂತಮತಿಯ ಮಿತ್ರರಾದವು. ಅಲ್ಲಿಗೆ ಬಂದ ಬೇಡನೊಬ್ಬ ಆಕೆಯನ್ನು ಕಂಡು ಈಕೆ ವನದೇವತೆಯೇ ಇರಬೇಕು ಎಂದು ಅಲ್ಲಿಯೇ ಇದ್ದ ಹೂ ಇರಿಸಿ, ಬೇಲದ ಹಣ್ಣನ್ನು ನೈವೇದ್ಯವಾಗಿರಿಸಿ ಸಾಷ್ಟಾಂಗ ನಮಸ್ಕಾರ ಹಾಕಿ ಓಡಿ ಹೋಗಿ ತನ್ನ ಒಡೆಯನಿಗೆ ವನದೇವತೆಯೊಬ್ಬಳು ತಮ್ಮ ಭೀಮ ವನದಲ್ಲಿಹಳು ಎಂದು ಸುದ್ದಿ ಮುಟ್ಟಿಸಿದ. ಬೇಡರೊಡೆಯ ಬಂದು ಆಕೆ ಕಣ್ಣು ಮೀಟುಕಿಸುವುದನ್ನು ಕಂಡು ಈಕೆ ನಮ್ಮ ಹಾಗೆ ಮಾನವಳು, ಆದರೆ ಸುಂದರಿ ಈಕೆಗೆ ನಮ್ಮ ಸಂಪತ್ತು ತೋರಿಸಿ ಮದುವೆಯಾಗಬೇಕು, ಎಂಬ ಹಂಬಲದಿಂದ ಅನಂತಮಾತಿಗೆ " ನೀನು ರೂಪಸಿ, ನಾನು ಪರಾಕ್ರಮಿ ನಾವಿಬ್ಬರೂ ಮದುವೆಯಾಗೋಣ " ಎಂದು ಹೇಳಿದ. ಆಕೆ ಮೌನಿಯಾಗಿ ಜಿನನ ಸ್ಮರಣೆಯಲ್ಲಿ ತೊಡಗಿದಳು. ಬೇಡರ ಒಡೆಯ ಬೆಳಗಾಗುವುದರಲ್ಲಿ ನಿನ್ನ ಮನಸ್ಸು ಬದಲಿಸಿಕೋ, ಇಲ್ಲವೇ ಸಾವಿಗೆ ಸಿದ್ದಳಾಗು ಎಂದು ಎಚ್ಚರಿಸಿ ಒಬ್ಬನನ್ನು ಕಾವಲಿಗಿರಿಸಿ ಹೊರಟು ಹೋದನು. ರಾತ್ರಿ ಯಕ್ಷಿಣಿಯೊಬ್ಬಳು ಬಂದು ಅನಂತಮತಿಗೆ ಧೈರ್ಯಹೇಳಿ ಬೇಡರ ಒಡೆಯನಿಗೆ ಒದ್ದು ಹಿಂಸಿಸಿ ನಾಳೆ ನನ್ನನ್ನು, ಅನಂತಮತಿಯನ್ನು ಗೌರವದಿಂದ ಅಯೋಧ್ಯಗೆ ಕಳಿಸಿಕೊಡಬೇಕು " ಎಂದು ಹೇಳಿದಳು. ಆ ಪ್ರಕಾರ ಮರುದಿನ ವಿಮಾನದಲ್ಲಿ ಅಯೋಧ್ಯಯ ಜಿನಮಂದಿರಕ್ಕೆ ಬಂದು ಭಕ್ತಿಯಿಂದ ನಮಸ್ಕರಿಸಿ, ಯಕ್ಷಣಿಯೊಡನೆ ಮನೆಗೆ ಬಂದು ತನ್ನ ತಂದೆ ತಾಯಿಯರನ್ನು ಪ್ರಸನ್ನಗೊಳಿಸಿದಳು.

7. ಅನ್ನಪೂರ್ಣ ಸುಬ್ಬರಾವ್



* ಸ್ವಾನುಭವ.*

ಮಗ ಬ್ಯಾಂಕು, ಪೋಸ್ಟಾಫೀಸು, ಮೆಡಿಕಲ್ ಶಾಪು, ಅಂತ ಆಚೆ ಹೋದ್ರೆ ಬೇಗ ಮನೆಗೆ ಬಂದುಬಿಡ್ಬೇಕು. ನಮ್ಮತ್ತೆಯವರಿಗೆ. ಸ್ವಲ್ಪತಡ ಆದ್ರೂ



ಯಾಕೋ ಇಷ್ಟೋತ್ತಾದ್ರು ಇವ್ನುಬರ್ಲಿಲ್ಲ ಫೋನಾದ್ರು ಮಾಡಮ್ಮ ಅಂತಿದ್ರು..ಕೆಲ್ಸಕ್ಕೆ ಹೋದ ಮೊಮ್ಮಗ ಬೇಗ ಮನೆಗೆ ಬರ್ಲಿಲ್ಲ ಅಂದ್ರೆ ಅವರಿಗೆ ಏನೋ ಕಳವಳ. ಎಷ್ಟಾಯ್ತು ಟೈಮು. ಅಂತ ಪದೇ ಪದೇ ಕೊಳೋದು. ಕೇಳ್ತಾ ಕೇಳ್ತಾ , ಎಂಟು ಗಂಟೆ ಅಂದ್ರೆ ಅವರಿಗೆ ಮಧ್ಯರಾತ್ರಿ ಆದಹಾಗೆ,, ಇಷ್ಟೋತ್ತಾದ್ರು ಬರ್ಲಿಲ್ಲ ನೋಡು , ಫೋನಾದ್ರು ಮಾಡಮ್ಮ ಎಲ್ಲಿದ್ದೀಯ ಅಂತ ಕೇಳಮ್ಮ ಅನ್ನೋರು.. ಅಷ್ಟು ಹೊತ್ತಿಗಾಗಲೇ ನಾನು ಕಾಲ್ ಮಾಡಿರ್ತಿದ್ದೆ.

ಬರ್ತಾರೆ ಬಿಡ್ರಮ್ಮ, ಆಚೆ ಹೋಗಿರೋರು ಕೆಲ್ಸ ಮುಗಿಸ್ಕೊಂಡ್ ಬರ್ಬೇಡ್ವ ...!! ನೀವ್ಯಾಕೆ ಅಷ್ಟೊಂದ್ ಹೆದರ್ಕೊತೀರ, ಅಂತ ನಾನು ಸಮಾಧಾನ ವಾಗೇ ಹೇಳ್ತಿದ್ದೆ..

ಹತ್ತು ನಿಮಿಷಕ್ಕೆ ಒಂದ್ಸಾರಿ ಫೋನ್ ಮಾಡು, ಫೋನ್ ಮಾಡು ಅಂತ ಒಂದೇ ವರಾತ ಮಾಡಿದ್ರು.. ನನಗೂ ಕೇಳಿ ಕೇಳಿ, ತಡೆಯಕ್ಕಾಗ್ಲಿಲ್ಲ.. ಬೇಜಾರಾಗಿ ಏನಮ್ಮಾ ನಿಮಗೊಬ್ರಿಗೆನ ಧಾವಂತ, ಇರೋದು.. ನನಗಿಲ್ವ..? ಮಾಡಿದೀನಿ ಅಂತ ಹೇಳ್ತಾ ಇದ್ದೀನಿ..ಪದೇ ಪದೇ ಅದನ್ನೇ ಹೇಳ್ತೀರ..!!
ಬರ್ತಾರೆ ಸಮಾಧಾನವಾಗಿರಿ, ನೀವು ಊಟಮಾಡಿ, ನೆಮ್ಮದಿಯಾಗಿ ಮಲಕ್ಕೊಳ್ಳಿ ಅಂದಿದ್ದೆ. ಅಷ್ಟು ಹೇಳಿದ್ಮೇಲೆ ಸ್ವಲ್ಪ ಹೊತ್ತು ಮೌನ... ಮತ್ತದೇ ರಾಗ.. ಹತ್ತು ಗಂಟೆನೂ ಹೊಡಿತು.

ಮೊಮ್ಮಗ ಬಂದ .ಬಂದವನು ಇನ್ನೂ ಒಳಗೆ ಕಾಲಿಡೋದೇ ತಡ, ಯಾಕಪ್ಪಾ ಇಷ್ಟೊತ್ತು..? ಅಂತ ಕೇಳೋದು..

ಕೆಲ್ಸ ಇತ್ತಜ್ಜಿ. ಆಚೆ ಹೋದ್ಮೇಲೆ ತಡ ಆಗುತ್ತೆ, ಕೆಲ್ಸ ಆಗ್ಬೇಕಲ್ಲ, ಏನ್,ನಿಮ್ಮ ಕಾಲನಾ...!! ಹಾಗೋಗಿ ಹೀಗೆ ಬಂದು ಕೆಲ್ಸ ಮುಗಿತಪ್ಪಾ ಅನ್ನೋಕೆ..!! ಟ್ರಾಫಿಕ್ ಇರುತ್ತೆ ಸಿಕ್ಕಾಪಟ್ಟೆ, ಆದಕ್ಕೆ ಲೇಟಾಗುತ್ತೆ ಅಂದಿದ್ದ. ಏನೋಪ್ಪ, ನಂಗ್ಯಾಕೊ ತುಂಬ ಗಾಬರಿ ಆಗುತ್ತೆ .!! ಆಚೆ ಹೋದೋರು ಬೇಗ ಬರ್ಲಿಲ್ಲ ಅಂದ್ರೆ, ನಿಮ್ಮಮ್ಮಂಗೆ ಎಷ್ಟು ಸಲ ಹೇಳ್ದೆ.. ಕೇಳು. ಕಿವಿಮೇಲೆ ಹಾಕ್ಕೊಳಲ್ಲ. ಬರ್ತಾರೆ ಬಿಡ್ರಿ ಅಂತಾಳೆ .. ಅಂದು ಸುಮ್ಮನಾದ್ರು.

ನೀವ್ಯಾಕೆ ಕಾಯ್ತೀರ ನೀವು ಊಟ ಮಾಡಿ ಮಲಗಿ ಅಜ್ಜಿ ಅಂದ ಮೊಮ್ಮಗ. ಇದು ಪ್ರತಿದಿನದ ಕೆಲಸ ಆಗಿತ್ತು..

ಹೋದ ವಾರ, ಚಿಕ್ಕ ಮಗನ ಮನೇಲಿ ಗಣಹೋಮ, ಮೃತ್ಯುಂಜಯ ಹೋಮ ಇದೆ ಅಂತ ಅತ್ತೆಯನ್ನು ಕರ್ಕೊಂಡು ಹೋಗಿದ್ದೆ... ಕಾರ್ಯ ಮುಗಿಸಿಕೊಂಡು, ಹೊರಟಾಗ, ಸ್ವಲ್ಪ ದಿನ ಅಮ್ಮ ಇಲ್ಲೇಇರ್ಲಿ ಬಿಡಿ ಅಂದ ಚಿಕ್ಕಮಗ.. ಅತ್ತೇನು ಸ್ವಲ್ಪದಿನ ಇದ್ದು ಇರ್ತೀನಿ ಅಂದ್ರು.. ಬಿಟ್ಟು ಬಂದೆ.. ಮನೆಗೆ ಬರ್ತಿದ್ದ ಹಾಗೇ ಅವರು ಮಲಗುತ್ತಿದ್ದ ಖಾಲಿ ಮಂಚ ನೋಡಿ ನಂಗೆ ಯಾಕೋ ತಡೆಯಕ್ಕಾಗ್ಲಿಲ್ಲ ಯಾಕೋ ದುಃಖ ಒತ್ತರಿಸಿ ಬಂತು. ಅಳು ಬಂದುಬಿಡ್ತು.. ಅತ್ತುಬಿಟ್ಟೆ..

ಯಾಕೆ.. ಏನಾಯ್ತು..? ಅಂದ್ರು ಇವ್ರು.

ರಿ ಅಮ್ಮ ಇಲ್ದೆ ಇರೋದು ಎಷ್ಟು ಬಿಕೋ ಅನ್ನುತ್ತೆ ನೋಡ್ರಿ ಅಂದೆ.

ಎಲ್ಲಾ ಅಷ್ಟೇನಮ್ಮಾ, ಕಣ್ಣೆದುರು ಇರುವಾಗ ಗೊತ್ತಾಗಲ್ಲ..

ಇಲ್ಲದಿದ್ದಾಗ್ಲೆ ಆದರ ಬೆಲೆ ಗೊತ್ತಾಗೋದು ಅಂದ್ರು. ಹೌದಲ್ವಾ..!! ಅನ್ನಿಸಿ, ನಂಗೂ ಯಾಕೋ ಮನಸು ಪಿಚ್ಚೆನಿಸಿತು.

ಮಾಮೂಲಿನಂತೆ ಮಗ ಕೆಲ್ಸಕ್ಕೆ ಹೋದವನು ಸಮಯಕ್ಕೆ ಸರಿಯಾಗಿ ಮನೆಗೆ ಬರ್ಲಿಲ್ಲ.. ನಾನೂ ತಾಳ್ಮೆಯಿಂದ ಕಾದೆ. ಸಮಯ ಮೀರಿತ್ತು. ಯಾಕೆ ಈ ಹುಡುಗ ಇಷ್ಟು ಹೊತ್ತಾದ್ರೂ ಬರ್ಲಿಲ್ಲ ಯಾಕೆ ಹೀಗೆ ಮಾಡ್ತಾರೋ ಏನೋ..ತಡ ಆಗುತ್ತೆ ಅಂತ ಒಂದು ಕಾಲ್ ಮಾಡಕ್ಕೇನು..? ನಮ್ಮ ಆತಂಕನೆ ಇವರಿಗೆ ಆರ್ಥ ಆಗಲ್ಲ. ಅಂತ ಚಡಪಡಿಸಿ ,ನಿಮಿಷಕ್ಕೊಮ್ಮೆ ಗೇಟಿನ ಬಳಿ ನಿಂತು ಆಕಡೆ ಈಕಡೆ ನೋಡ್ತಾ ಇದ್ದೆ. ನನ್ನ ಚಡಪಡಿಕೆ ಗಮನಿಸುತ್ತಿದ್ದ ನನ್ನವರು, ಈಗ ಅರ್ಥ ಆಯ್ತಾ ನಿಂಗೆ. ..? ಅಮ್ಮ ಯಾಕೆ ಹಾಗಾಡ್ತಾ ಇದ್ರೂ ಅಂತ..! ಅವ್ರು ಇದ್ದಿದ್ರೆ ಇದುವರೆಗೆ ಅದೆಷ್ಟು ಸಾಲ ಹೇಳ್ತಾ ಇದ್ಲೋ, ಫೋನ್ ಮಾಡಮ್ಮಾ ಯಾಕೋ ಇಷ್ಟೋತ್ತಾದ್ರು ಬರ್ಲಿಲ್ಲ ಅಂತ.. ಅದಕ್ಕೇ ನೋಡು ಹೇಳೋದು ತಾಯಿ ಹೃದಯ ಅಂತ. . ನಿನಗೆಷ್ಟು ಧಾವಂತ

ಇದ್ಯೋ, ಹಾಗೆ ಅವರಿಗೂ ಧಾವಂತ ಇರ್ತಿತ್ತು ಅಲ್ವಾ..!! ಇರುವಾಗ ಹೇಳಿದ್ದೆ ಹೇಳ್ತಾರೆ ಅಂತ ಬೇಜಾರು ಮಾಡ್ಕೋತಿದ್ದೆ , ಈಗ ನಿಂಗೇ ಸ್ವತಃ ಅನುಭವ ಆಗ್ತಿದೆ. ನಿನ್ನ ಮಗನ ಬಗ್ಗೆ ನಿಂಗೆ ಕಾಳಜಿ ಇದ್ದ ಹಾಗೇ, ಅವರ ಮಗನ ಬಗ್ಗೆ ಅವರಿಗೂ ಅಷ್ಟೇ ಕಾಳಜಿ ಇರುತ್ತಲ್ವಾ..!!
ನಿಜಾರಿ ಅಂದೆ.

ಮಗನ ಬಗ್ಗೆನೇ ಅಲ್ಲ, ಮೊಮ್ಮಕ್ಳ ಬಗ್ಗೆ, ನಿನ್ನ ಬಗ್ಗೇನೂ ಅಷ್ಟೇ ಕಾಳಜಿ ಇದೆ ಅವರಿಗೆ . ನೀನು ಎಲ್ಲಾದ್ರೂ ಆಚೆ ಹೋದಾಗ್ಲು ಕೂಡಾ, ಅವಳ್ಯಾಕೋ ಇಷ್ಟೋತ್ತಾಯ್ತು ಬರ್ಲಿಲ್ಲ ಕಣೋ, ಒಂದು ಫೋನಾದ್ರು ಮಾಡಪ್ಪ ಅಂತಿದ್ರು.. ಮಾಡಿದ್ದೀನಿ ಅಂತ ಹೇಳ್ತಿದ್ದೆ. ಆದ್ರೆ ನಾನು ಯಾವತ್ತೂ ನಿಂಗೆ ಅದನ್ನು ಹೇಳಿಲ್ಲ ಅಷ್ಟೇ..!! ಅಂದ್ರು..

ಆ ಮಾತು ಕೇಳಿ ನಿಜವಾಗ್ಲೂ ನನ್ನ ಬಗ್ಗೆ ನಂಗೇ ಕೆಟ್ಟೆನಿಸಿತು .. ತುಂಬ ನೋವಾಯ್ತು.. ನೀವು ಫೋನ್ಮಾಡು, ಅಂದಾಗ್ಲೆಲ್ಲ ಎಷ್ಟು ಬೇಸರ ಮಾಡ್ಕೊತಿದ್ದೆ ನಾನು.. ನಿಮ್ಮ ಧಾವಂತ ನಂಗೆ ಅರ್ಥನೆ ಆಗ್ಲಿಲ್ವಲ್ಲಮ್ಮ . ಎಷ್ಟು ಸಾರಿ ಹೇಳ್ತೀರ ಸುಮ್ನೆ ಇರಿ ಅಂತಿದ್ದೆ. ನಿಮ್ಮ ಮನಸಿಗೆ ನೋವಾಗುತ್ತೆ ಅನ್ನೋದನ್ನೂ ಯೋಚ್ನೆ ಮಾಡ್ತಿರ್ಲಿಲ್ಲ.. ತಪ್ಪು ಮಾಡ್ದೆ. ಅನ್ನಿಸ್ತಿದೆ . ಅಮ್ಮಾ...ನಿಮ್ಗೆ ನೋವು ಕೊಟ್ಟಿದ್ದಕ್ಕೆ ನನ್ನನ್ನು ಕ್ಷಮಿಸಿಬಿಡಿ ,ಅಂದುಕೊಂಡೆ.. ಮನದಲ್ಲೇ.. ಅವರ ತಾಳ್ಮೆ ನಂಗೂ ಬರ್ಲಿ ಅಂತ ಬೇಡ್ಕೊಂಡೆ. ಸದಾ ಶ್ರೇಯಸ್ಸನ್ನು ಬಯಸುವ , ನಮ್ಮ ಕಾಳಜಿ ಮಾಡುವ ಹಿರಿಯರು ಮನೇಲಿ ಇರ್ಬೇಕು.. ಅನ್ಸುತ್ತೆ ..ಇದ್ರೆ ಎಷ್ಟು ಚೆನ್ನ ಅಲ್ವಾ..!!.. ಆಗ್ಲೇ ಮನೆಗೆ ಒಂದು ಖಳೆ. ಹಿರಿಯರ ಅನುಭವಗಳೇ ಕಿರಿಯರಿಗೆ ದಾರಿದೀಪ ಅನ್ನೋದ್ರಲ್ಲಿ ಸಂಶಯವೇ ಇಲ್ಲ...!!!!
ಇರುವಾಗ ಬೇಸರ ಮಾಡ್ಕೊಳ್ಳೋದು ಇಲ್ಲದಿರುವಾಗ ಪಶ್ಚಾತ್ತಾಪ ಪಡೋದು ಎಷ್ಟು ನಿಜ ಅಲ್ವಾ...!!!!!

8 ಗಿರಿಜಾರಾಜ್



ಸಮಾಜಶಾಸ್ತ್ರವೋ?ಸಜಾಶಾಸ್ತ್ರವೋ?

ಯಾರ ಜೀವನದಲ್ಲಾದರೂ ಸಹಜವಾಗಿಸಂಭವಿಸಿರುವ ಅಥವಾ ಸಂಭವಿಸಬಹುದಾದ ಪ್ರಸಂಗಗಳು ಘಟಿಸುವಾಗ ಅದು 'ಹಾಸ್ಯ' ಎಂದು ಅನುಭವಿಸುವವರಿಗೆ ಅನ್ನಿಸದೆ, ಸನ್ನಿವೇಶಕ್ಕೆ ಅನುಗುಣವಾಗಿ, ಕೋಪವೋ, ವಿಷಾದವೋ, ನಿರಾಸೆಯೋ ಇರಬಹುದು! ಮತ್ತೆ ಯಾವಾಗಾಲಾದರೂ ಮೆಲುಕು ಹಾಕುವಾಗ, ಅದು ಖುಷಿಕೊಡುವ ಸರಸದ ರಸ ಬುಗ್ಗೆಯಾಗಿರುತ್ತದೆ, ನಗುವ ಮನಸ್ಸಿರುವವರಿಗೆ ಸವಿಯಲು ನೆನಪಿನ ಸಿಹಿ ಬುತ್ತಿಯಾಗಿರುತ್ತದೆ. ಎಷ್ಟೋ ಘಟನೆಗಳು ಹಾಗೆಯೇ ನಮಗೆ ಗೊತ್ತಿಲ್ಲದಂತೆ ನಾವು ಅದರ ಪಾತ್ರಧಾರಿಗಳಾಗಿರುತ್ತೇವೆ. ಬದುಕು ಸಹನೀಯವಾಗಲು, ಶೂನ್ಯವಾಗದಿರಲು ಈ ತಿಳಿಹಾಸ್ಯದ ಕಾರಂಜಿಗಳುವ ಆಸರೆಗಳಲ್ಲವೇ?

ನಾನು ಮೂರನೆಯ ತರಗತಿಯ ಸಮಾಜಶಾಸ್ತ್ರ ಪ್ರಶ್ನೆಪತ್ರಿಕೆಗೆ ಉತ್ತರಿಸಲು ಸನ್ನದ್ಧಳಾಗಿದ್ದೇನೆ ಸ್ವಾಮಿ. ನಗಬೇಡಿ... ನನ್ನ ಮಗ ಮೂರನೇ ತರಗತಿಯಲ್ಲಿದ್ದ.ನಾವಿಬ್ಬರೂ ಅಂದರೆ ನಾನೂ ನನ್ನ ಅರ್ಧಾಂಗ, ನನ್ನ ಮಗನನ್ನು ಮಧ್ಯೆಕೂರಿಸಿಕೊಂಡು, ಸಮಾಜಶಾಸ್ತ್ರಕ್ಕೆ ಸಂಬಂಧಿಸಿದ ಕ್ಲಾಸ್ ವರ್ಕ್, ಹೋಂವರ್ಕ್, ಪಠ್ಯಪುಸ್ತಕ, ಪ್ರಾಕ್ಟೀಸ್ ಬುಕ್ಅದಕ್ಕೆ ಸಂಬಂಧ ಪಟ್ಟ ಎಲ್ಲ ಕಡತಗಳನ್ನೂ ಹೊತ್ತು, ಒಳ್ಳೆಯ ರಾಹು-ಕೇತುಗಳ ಹಾಗೆ ಕುಳಿತೆವು. ಇಲ್ಲದಿದ್ದರೆ ಈ ಮಗ ಅನ್ನೋ ಮಂಗ ಕೇಳಬೇಕಲ್ಲ.ಕೆಲವು ಮಕ್ಕಳು ಓದುವುದನ್ನು ಖುಷಿಯಾಗಿ ಮಾಡುತ್ತಾರಂತೆ. ಆದರೆ ನನ್ನ ಮಗ ಓದುವುದಿರಲಿ, ಅವನೊಬ್ಬನೇ ಮುಟ್ಟುವ ಕಷ್ಟಕ್ಕೂ ಹೋಗುವವನಲ್ಲ. ಅವನು ಎಂಜಾಯ್ ಮಾಡುವುದು ಟಿ.ವಿ.ಯ ರಂಗುರಂಗಿನ ಕಾರ್ಯಕ್ರಮಗಳನ್ನು... ಆದರೆ ನಾವುಬಿಡಬೇಕಲ್ಲ,ಬೆಂಗಾವಲಿನ ಭೂತಗಳು! ಬಿಟ್ಟರೆ ಕೆಟ್ಟೆವು, ಏಕೆಂದರೆ ಈ ಠಕ್ಕ ಬಿಟ್ಟರೆ ಸಿಕ್ಕ!ಸರಿ,ಆ ಕಡೆ ಈ ಕಡೆ ಕುಳಿತೆವು.ಕೋರ್ಟಿನಲ್ಲಿ ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಹಾಕಿ ಕಕ್ಷಿದಾರನನ್ನು ಮಾನಸಿಕವಾಗಿ ಕಕ್ಕಾಬಿಕ್ಕಿಯಾಗಿ ಬಿಕ್ಕುವ ಹಾಗೆ ಮಾಡುವ ಲಾಯರ್ಗಳಂತೆ ಪ್ರಾರಂಭಿಸಿದೆವು.

"ವಿಶ್ವೇಶರಯ್ಯ ಯಾರು? ಜನರಲ್ ಕಾರಿಯಪ್ಪ ಯಾರು? ಬೆಳಗಾಂ
ಜಿಲ್ಲೆಯ ನದಿಗಳು ಯಾವುವು?

ಚಿಕ್ಕ ಮಂಗಳೂರಿನ ಬೆಳೆಗಳು ಯಾವುವು?ಶಿವಮೊಗ್ಗೆಯ ನದಿಗಳು ಯಾವುವು?
ಚೆನ್ನಮ್ಮ ಯಾರು? ಮಲ್ಲಮ್ಮ ಯಾರು?
ರಾಯಣ್ಣ ಯಾರು?ನನ್ನ ಮಗ ಆ ಕಡೆ ಈ ಕಡೆಯಿಂದ ಬರುವ ಪ್ರಶ್ನೆಗಳದಾಳಿಯನ್ನು ಎದುರಿಸಲು ಸನ್ನದ್ಧನಾದ.ಹೇಳುತ್ತಲೇ ಹೋದ,ಮಧ್ಯೆ ಮಧ್ಯೆ ತಲೆ ಕೆರೆದು ನೆನೆಸಿಕೊಳ್ಳುತ್ತಿದ್ದ, ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿದ್ದ, ತಿನ್ನಲು ಅದು ಕೊಡು,ಇದು ಕೊಡು ಎಂದು ಕಾಡಿಸುತ್ತಿದ್ದ....ಈ ಮುಹೂರ್ತ ಅವನಿಗೆ,ದಿವ್ಯ ಮುಹೂರ್ತ! ಒಳ್ಳೆಯಕಾಲ.

ಕೇಳದ್ದೆಲ್ಲಾ ನಡೀತಿತ್ತು. ನಾನು ನನ್ನ ಮಗ ಕೇಳಿದ್ದನ್ನೆಲ್ಲಾ ಹೋಟೆಲ್ ನಲ್ಲಿ ಮಾಣಿ ಒದಗಿಸುತ್ತಾನಲ್ಲ, ಹಾಗೆ ಅಡುಗೆ ಮನೆಗೂಓದುವ ಕೊಠಡಿಗೂ ಓಡಾಡಿಕೊಂಡು ಒದಗಿಸುತ್ತಿದ್ದೆ. ಒಟ್ಟಿನಲ್ಲಿ ನಮ್ಮಿಬ್ಬರಿಗೂಇದ್ದದ್ದು,ನಮ್ಮ ಮಗ ಸಮಾಜ ಶಾಸ್ತ್ರದಲ್ಲಿ ಒಳ್ಳೆಯ ಅಂಕ ತೆಗೆದುಕೊಂಡು ನಾವು ಆ ಟೀಚರ್ಸ್ಗಳಿಂದ ಛೀಮಾರಿ ಹಾಕಿಸಿಕೊಳ್ಳುವುದು ತಪ್ಪ ಬೇಕು,ಎಷ್ಟು ಸಲ ಅಂತ ಇವನು ಮಾಡಿದತರಲೆಗಳಿಗೆಲ್ಲ ನಾವು ದಂಡ ತೆರುವುದು. ತಲೆಬಾಗುವುದು, ಉಗಿಸಿಕೊಳ್ಳುವುದು. ತಿಂಡಿಗಳು ಸಿಗುತ್ತದೆ ಎಂಬ ಕಾರಣದಿಂದ ಅವನಿಗೆ ಶುಕ್ರದೆಸೆಯಾದರೂ, ನಾವು ಅವನನ್ನು ಬೆಂಬಿಡದ ಬೇತಾಳಗಳಂತೆ ಹಿಡಿದದ್ದು ಮಾತ್ರ ಒಂದು ಚೂರೂ ಇಷ್ಟವಾಗಲಿಲ್ಲ. ಪ್ರಶ್ನೆಗಳ ಸುರಿಮಳೆ ನಿಲ್ಲಲೇ ಇಲ್ಲ! ನನ್ನ ಮಗ ಉತ್ತರ ಹೇಳಿ ಹೇಳಿ ಸೋತು ಹೋದ. ನಾವಿಬ್ಬರೂ, ಒಮ್ಮೊಮ್ಮೆ ಗದರುತ್ತಾ ರಮಿಸುತ್ತ, ಬೈಯುತ್ತ, ಮುದ್ದಾಡುತ್ತ, ಹೊಡೆಯುತ್ತ ಮತ್ತೆ ಮುದ್ದಿಸುತ್ತ ಸಂಕಟಪಡುತ್ತ ಕೇಳುತ್ತಲೇ ಇದ್ದೆವು.

ಕರ್ನಾಟಕದ 31 ಜಿಲ್ಲೆಗಳಲ್ಲಿ, ಜನಗಳಉದ್ಯೋಗಗಳು,ನದಿಗಳು, ವ್ಯಾಪಾರಕೇಂದ್ರಗಳು, ವಿಶೇಷಗಳು, ಬೆಳೆಗಳು, ಪ್ರೇಕ್ಷಣೀಯ ಸ್ಥಳಗಳು.. ಮುಗಿಯದ ಕತೆ....!ನಮ್ಮ ರಾಜ್ಯವೆಂದರೇನು ವೈಭವವೆಷ್ಟು? ಇತಿಹಾಸವನ್ನೆಲ್ಲ ನಮ್ಮ ಮಕ್ಕಳು ಬೇಗ ತಿಳಿದುಕೊಳ್ಳಬೇಕಲ್ಲವೇ? ಎಲ್ಲವನ್ನೂ ಅರೆದು ಕುಡಿದು ಬಿಡಬೇಕಲ್ಲವೇ ಮೂರನೆಯ ತರಗತಿಗೇ? ಮುಂದಿನ ತರಗತಿಗಳಲ್ಲಿ ಇನ್ನೂ world history ಇದೆ, Freedom struggle..ಇನ್ನೂ ಏನೇನೆಲ್ಲ ಇವೆ! ಹಾಕಿದಷ್ಟೂ ಹೀರಿಕೊಳ್ಳುವ ಹಿಗ್ಗುವ Elastic property ಇರಬಹುದೇ? ಈಗಿನ ಪ್ರಚಂಡ ಮೆದುಳುಗಳಿಗೆ ಎನಿಸಿತು. ರಾತ್ರಿ ಹತ್ತಾಯಿತು, ಹನ್ನೊಂದಾಯಿತು, ನಾವಿಬ್ಬರೂ ಇನ್ನೂ ಅಕ್ಕ ಪಕ್ಕದಿಂದ ಕದಲಿರಲಿಲ್ಲ. ನಾವೆಷ್ಟು ನಿರ್ದಯರು ಎಂದು ನಮಗೇ ಅನ್ನಿಸ ತೊಡಗಿದಾಗ ಊಟಕ್ಕೆಂದು

ಬಿಟ್ಟೆವು.ಊಟ ಮಾಡಿದ ನಂತರ ಅವನ ಮಂಗಾಟಗಳು, ಮೊಂಡಾಟವೇನೂ ನಮ್ಮ ಬಳಿ ನಡೆಯಲಿಲ್ಲ. ನಾವು ಅವನ ಅಪ್ಪ ಅಮ್ಮ ಅಲ್ಲವೇ.? ಜಗಮೊಂಡರು....

ಅತ್ತಲಿತ್ತ ಹೋಗದಂತೆ,ಸುತ್ತ ಸುಳಿದು ನೋಡದಂತೆ, ಹಿಡಿದು ಮಧ್ಯೆ ಅಡಕತ್ತರಿಯ ಅಡಕೆಯಂತೆ ಸಿಕ್ಕಿಸಿಕೊಂಡೆವು. ಪ್ರಶ್ನೆ ಕೇಳಿ ಕೇಳಿ ನಮ್ಮ ಗಂಟಲು ಒಣಗತೊಡಗಿತು. ಉತ್ತರಿಸುತ್ತ ಉತ್ತರಿಸುತ್ತ ಸಾಕಾದ ಮಗ, ಒಂದು ಹಂತದಲ್ಲಂತೂ ತಲೆ ಹಿಡಿದುಕೊಂಡು ಅಪ್ಪ,ಅಮ್ಮ ತುಂಬ ಟೆನ್ಷನ್ ಮಾಡ್ತಾ ಇದೀರಾ?ಎಂದು ಕೂಗಿದ. ಒಬ್ಬರನ್ನೊಬ್ಬರು ನೋಡಿಕೊಂಡೆವು. ಏನು ಮಾತಾಡುವುದೆಂದು ಗೊತ್ತಾಗಲಿಲ್ಲ. ಅದು ಸಮಾಜಶಾಸ್ತ್ರ ಅನ್ನಿಸದೆ ಸಜಾಶಾಸ್ತ್ರ ಎನ್ನಿಸಿತು ನಮ್ಮ ಪಾಲಿಗೂ...

"ಆಯ್ತು...ಒಂದು ಸ್ವಲ್ಪ ಹೊತ್ತು ರಿಲ್ಯಾಕ್ಸ್ ಮಾಡಿಕೊಳ್ಳಲಿ ಬಿಡೆ, ನನಗೂ ಗಂಟಲು ಒಣಗಿ ಹೋಯ್ತು. ಎಲ್ಲಿ ಅವನಿಗೆ ಮಾಡಿಟ್ಟಿದ್ಯಲ್ಲ ನಿಂಬೆಹಣ್ಣು ಷರಬತ್ತು ಸ್ವಲ್ಪ ಕೊಡು, ಸುಸ್ತಾಗಿದೆ, ಇನ್ನು ಆ ಮಗೂಗೆ ಹೇಗೆ ಅಗಿರಬಹುದು? ಎಂದು ಅವರು ಎಂದಾಗ,ನಾನು ದೀರ್ಘವಾಗಿ ನಿಟ್ಟುಸಿರು ಬಿಡುತ್ತ ಬೆವರೊರಸಿಕೊಂಡೆ....

..

9. ಶೀಲಾ ಅರಕಲಗೂಡು



ಶೀರ್ಷಿಕೆ : ನಂಬಿಕೆಯ ಮೂಲವೆಲ್ಲಿ?

ರೈಲು ಹುಬ್ಬಳ್ಳಿ ಸ್ಟೇಷನ್ ತಲುಪಿದಾಗ ಬೆಳಿಗ್ಗೆ 5.30 ಆಗಿತ್ತು. ಇನ್ನೂ ಬೆಳಕು ಮೂಡಿರಲಿಲ್ಲ. ಸೂರ್ಯದೇವನಿಗಿನ್ನೂ ಇತ್ತ ಮೊಗ ಮಾಡಲು ಸಮಯವಾಗಿರಲಿಲ್ಲ. ಅವನ ಆಗಮನದ ಸೂಚನೆ ಕೊಡುವ ಅರುಣ ರಾಗವೂ ಇರಲಿಲ್ಲ. ಹಾಗಾಗಿ ರೈಲಿನಲ್ಲಿ ಮಲಗಿದ್ದ ಸುಜಯ್ ಕೂಡಾ ಗಾಢ ನಿದ್ರೆಯಲ್ಲಿದ್ದ. ಅಲ್ಲದೆ, ಹುಬ್ಬಳ್ಳಿಯೇ ಆ ರೈಲಿನ ಅಂತಿಮ ನಿಲ್ದಾಣವಾಗಿತ್ತು. ಆ ಕಾರಣದಿಂದಲೂ ಅವನು ನಿಶ್ಚಿಂತನಾಗಿ ಮಲಗಿದ್ದ.



ಹುಬ್ಬಳ್ಳಿಯ ರೈಲು ನಿಲ್ದಾಣದಲ್ಲಿ ಪ್ರಯಾಣಿಕರು ಗದ್ದಲ ಮಾಡಿಕೊಂಡು ಇಳಿಯುತ್ತಿದ್ದಾಗ ಕನಸಿನ ಲೋಕದಲ್ಲಿ ವಿಹರಿಸುತ್ತಿದ್ದ ಸುಜಯನಿಗೆ ಎಚ್ಚರವಾಗಿ, ಕಣ್ಬಿಟ್ಟು ನೋಡಿ ತಾನೂ ಎದ್ದ. ಒಂದು ಕ್ಷಣ ಹಾಗೆಯೇ ಕುಳಿತಿದ್ದು ನಂತರ ತನ್ನ ಸಾಮಾನುಗಳನ್ನು ಸೀಟಿನ ಕೆಳಗಿನಿಂದ ಹೊರಗೆಳೆದು ಸೀಟಿನ ಮೇಲಿಟ್ಟ.

ಸುಜಯ್ ತನ್ನ ಸೂಟ್ಕೇಸ್ ಹಾಗೂ ಲ್ಯಾಪ್ಟಾಪ್ ಚೀಲದ ಜೊತೆಗೆ ದೊಡ್ಡಮ್ಮ ವಿಮಲಾ ಕೊಟ್ಟಿದ್ದ ಪೆಟ್ಟಿಗೆಯನ್ನೂ ಸೀಟಿನ ಮೇಲಿಟ್ಟ. ಅವುಗಳನ್ನೊಮ್ಮೆ ನೋಡಿದ. ತಕ್ಷಣವೇ ಅವನಿಗೆ ತನ್ನ ದೊಡ್ಡಮ್ಮ ವಿಮಲಾ ಹೇಳಿದ ಮಾತು ನೆನಪಿಗೆ ಬಂತು.

"ಸುಜಯ್, ರೈಲಿನಿಂದ ಇಳಿಯುವಾಗ ನಾನು ಕೊಟ್ಟಿರುವ ಪೆಟ್ಟಿಗೆ ಇಳಿಸಿಕೊಳ್ಳುವುದನ್ನು ಮರೆಯಬೇಡಪ್ಪ. ಅದರ ತುಂಬಾ ಮಗನ ಮದುವೆಗಾಗಿ ಕೊಂಡಿರುವ ಬೆಲೆಬಾಳುವ ರೇಷ್ಮೆ ಸೀರೆಗಳು ಹಾಗೂ ಒಂದಷ್ಟು ಪಂಚೆ, ಅಂಗಿಗಳಿವೆ. ಹುಷಾರಾಗಿ ತೆಗೆದುಕೊಂಡು ಹೋಗಿ ನಿಮ್ಮ ಮನೆಯಲ್ಲೇ ಇಟ್ಟುಕೊಂಡಿರು. ನಾನು ಇನ್ನೆಂಟು ದಿನ ಬಿಟ್ಟು, ಅಲ್ಲಿ ನಮ್ಮ

ಮನೆಗೆ ಹಿಂದಿರುಗುತ್ತೇನೆ. ಆಗ ಆ ಪೆಟ್ಟಿಗೆಯನ್ನು ನನಗೆ ಕೊಡುವಿಯಂತೆ. ಹುಷಾರು ಕಣಪ್ಪ" ಎಂದು ಹೇಳಿದ್ದು ಇದೀಗ ಹೇಳಿದಂತೆನಿಸಿತು.

ಸಾಮಾನುಗಳನ್ನಿಳಿಸಿಕೊಂಡ ಸುಜಯ್ ಅವುಗಳೊಂದಿಗೆ ಸ್ಟೇಷನ್ನಿಂದ ಹೊರಗೆ ಬಂದ. ಅತ್ತಿತ್ತ ನೋಡುವಷ್ಟರಲ್ಲಿ ಒಬ್ಬ ಆಟೋದವನು ಇವನ ಬಳಿ ಬಂದ. ಅವನೊಂದಿಗೆ ಮಾತನಾಡಿ, ಮನೆ ಅಡ್ರೆಸ್ ತಿಳಿಸಿ, ಸಾಮಾನುಗಳನ್ನು ಒಳಗಿಟ್ಟು ತಾನೂ ಕುಳಿತುಕೊಂಡ. ಸೀರೆಗಳ ಪೆಟ್ಟಿಗೆಯನ್ನು ಜೋಪಾನವಾಗಿ ಸೀಟಿನ ಹಿಂದಿದ್ದ ಸ್ಥಳದಲ್ಲಿಟ್ಟ. ಬೆಂಗಳೂರಿನಲ್ಲಿ ಹೊಸದಾಗಿ ಕೆಲಸಕ್ಕೆ ಸೇರಿದ್ದು, ಸುಮಾರು ಒಂದು ವರ್ಷದ ನಂತರ ಅಪ್ಪ-ಅಮ್ಮನ ಮನೆಗೆ ಹಿಂದಿರುಗುತ್ತಿದ್ದ ಅವನ ಮನಸಿನ ತುಂಬಾ ಏನೋ ಹೇಳಲಾಗದ ಉತ್ಸಾಹ, ಸಂಭ್ರಮ ತುಂಬಿತ್ತು. ಬೆಳಿಗ್ಗೆ ಹತ್ತರ ಹೊತ್ತಿಗೆ ಹಳೆಯ ಸ್ನೇಹಿತರನ್ನು ಭೇಟಿಯಾಗುವ ಕಾರ್ಯಕ್ರಮವೂ ಇತ್ತು. ಆ ಬಗ್ಗೆಯೇ ಯೋಚಿಸುತ್ತಾ, ಯೋಜನೆಗಳನ್ನು ಹಾಕುತ್ತಿದ್ದವನಿಗೆ ಮನೆ ಬಂದುದೇ ತಿಳಿಯಲಿಲ್ಲ.

"ಸಾಮಾನು ಇಳಿಸ್ಕೋತೀರಾ ಸರ್?" ಎಂದ ಡ್ರೈವರ್ ಮಾತು ಕೇಳಿ ಇಹ ಲೋಕಕ್ಕೆ ಬಂದ ಸುಜಯ್, ದುಡ್ಡು ಕೊಟ್ಟು ಆಟೋದಿಂದ ಕೆಳಗಿಳಿಯುತ್ತಲೇ, ಬಾಗಿಲಲ್ಲೇ ಕಾದಿದ್ದ ಅವನಮ್ಮ ಸರಳಾ, "ಓ ಬಂದ್ಯಾ ಸುಜಯ್, ರೈಲು ಸರಿಯಾದ ಸಮಯಕ್ಕೆ ಬಂತು ಅನ್ಸುತ್ತೆ. ನಾನು ಹತ್ತು ನಿಮಿಷದಿಂದ ಇಲ್ಲೇ ಹೊರಗೆ ಕಾಯುತ್ತ ನಿಂತಿದ್ದೆ." ಎಂದಳು.

ಅಮ್ಮನನ್ನು ನೋಡುತ್ತಲೇ ಮತ್ತೆಲ್ಲವನ್ನು ಮರೆತ ಸುಜಯ್, ಸೂಟ್ಕೇಸ್ ಹಾಗೂ ಲ್ಯಾಪ್ಟಾಪ್ ಬ್ಯಾಗನ್ನು ಹಿಡಿದು ಒಳ ನಡೆದ. "ಅಮ್ಮಾ" ಎನ್ನುತ್ತ, ಅಮ್ಮನಿಗೆ ನಮಸ್ಕರಿಸಿ ಹಾಗೇ ಅಪ್ಪಿ ಹಿಡಿದ. ಒಳಗಿನಿಂದ ಬಂದ ಅಪ್ಪನನ್ನು ನೋಡುತ್ತಲೇ, ಅವರಿಗೂ ನಮಸ್ಕರಿಸಿ ಅಪ್ಪಿದ. ಇದೆಲ್ಲ ಭಾವೋದ್ವೇಗದ ಭರದಲ್ಲಿ ದೊಡ್ಡಮ್ಮ ಕಳಿಸಿದ್ದ ಪಟ್ಟಿಗೆಯ ವಿಷಯ ಮರೆತೇ ಬಿಟ್ಟ. ಈ ಬಗ್ಗೆ ತಂದೆ, ತಾಯಿಗೆ ಏನೂ ಗೊತ್ತಿರದಿದ್ದರಿಂದ ಅವರೂ ವಿಚಾರಿಸುವುದು ಸಾಧ್ಯವಿರಲಿಲ್ಲ.

ನಾಲ್ಕು ದಿನ ಸಂಭ್ರಮ, ಸಡಗರದಲ್ಲೇ ಕಳೆದ ಸುಜಯ್. ಅಂದು ಬೆಳಿಗ್ಗೆ ಆರಾಮಾಗಿ ಕುಳಿತು ಅಪ್ಪ, ಅಮ್ಮನೊಂದಿಗೆ ಮಾತನಾಡುತ್ತಿದ್ದಾಗ ಅವನಿಗೆ ದೊಡ್ಡಮ್ಮ ವಿಮಲಾಳಿಂದ ಕರೆ ಬಂತು. "ಹಲೋ ಸುಜಯ್, ಹೇಗಿದ್ದಿ? ಆಚೆ ನಾಡಿದ್ದು ಬೆಳಿಗ್ಗೆ ಊರಿಗೆ ಬರ್ತಿದ್ದೀನಿ. ಬಂದ ಮೇಲೆ ಮಧ್ಯಾಹ್ನದ ಹೊತ್ತಿಗೆ ನಿಮ್ಮ ಮನೆಗೆ ಬಂದು ಪೆಟ್ಟಿಗೆ ತೆಗೆದುಕೊಂಡು ಹೋಗ್ತೀನಿ. ಆಯ್ತಾ? " ಎಂದು ಹೇಳಿ ಫೋನಿಟ್ಟಳು.

ದೊಡ್ಡಮ್ಮನ ಮಾತು ಕೇಳಿದಾಕ್ಷಣ ಸುಜಯ್ ಎದೆ ಧಡ್ಡೆಂದಿತು. ಮುಖವೆಲ್ಲಾ ಬಿಳಿಚಿಕೊಂಡಿತು. ಆಗಲೇ ಅವನಿಗೆ ನೆನಪಿಗೆ ಬಂದದ್ದು, ತಾನು ಪೆಟ್ಟಿಗೆಯನ್ನು ಆಟೋದಲ್ಲೇ ಮರೆತು ಬಂದ ವಿಷಯ. ದಿಕ್ಕೇ ತೋಚದಂತಾಗಿ ಪೆಚ್ಚಾಗಿ ಕುಳಿತುಬಿಟ್ಟ.

ಅವನನ್ನೇ ಗಮನಿಸುತ್ತಿದ್ದ ತಾಯಿ ಸರಳಾಗೆ, ಮಗ ಚೆನ್ನಾಗಿ ನಗು ನಗುತ್ತಾ ಮಾತನಾಡುತ್ತಿದ್ದವನು, ಇದ್ದಕ್ಕಿದ್ದಂತೆ ಫೋನ್ ಬಂದಾಕ್ಷಣ ಹೀಗೆ ಪೆಚ್ಚಾಗಿ ಕುಳಿತದ್ದನ್ನು ನೋಡಿ ಆತಂಕವಾಗಿ,

"ಏನಾಯ್ತೋ ಸುಜಯ್? ಯಾರದ್ದು ಫೋನು ಬಂದಿದ್ದು? ಯಾಕೆ ಗಾಬರಿಯಾಗಿದ್ದಿ?" ಎಂದು ಕಳವಳದ ದನಿಯಲ್ಲಿ ಕೇಳಿದಳು.

ದೊಡ್ಡಮ್ಮ ಪೆಟ್ಟಿಗೆ ಕೊಟ್ಟಿದ್ದು, ಅದರಲ್ಲಿ ಬೆಲೆ ಬಾಳುವ ಸೀರೆಗಳು, ಇತರೆ ಬಟ್ಟೆಗಳಿದ್ದದ್ದು, ತಾನು ಪೆಟ್ಟಿಗೆಯನ್ನು ಆಟೋದಲ್ಲೇ ಮರೆತು ಮನೆಯೊಳಗೆ ಬಂದದ್ದು, ಎಲ್ಲವನ್ನೂ ನಿಧಾನವಾಗಿ ಹೇಳಿದ ಸುಜಯ್.

ಕೇಳಿದ ಅಪ್ಪ ಅಮ್ಮನಿಗೆ ದಿಕ್ಕೇ ತೋಚದಂತಾಯ್ತು. ಆಕಾಶವೇ ತಲೆಯ ಮೇಲೆ ಬಿದ್ದಂತಾಯ್ತು.

ವಿಮಲಾ ಸರಳಾಳ ಅಕ್ಕ. ವಿಮಲಾಳ ಮಗನ ಮದುವೆ ಇನ್ನು ಹತ್ತೇ ದಿನಕ್ಕೆ ನೆರವೇರುವುದಿತ್ತು. ಅದಕ್ಕಾಗಿ ಜವಳಿ ಖರೀದಿಗೆ ಬೆಂಗಳೂರಿಗೆ ಹೋಗಿದ್ದ ಅವಳು ಇನ್ನೂ ಹೆಚ್ಚಿನ ಖರೀದಿ ಮಾಡುವುದಿದ್ದರಿಂದ ಪೆಟ್ಟಿಗೆಯನ್ನು ಸುಜಯ್ ನೊಂದಿಗೆ ಕಳಿಸಿದ್ದಳು.

'ಈಗೇನು ಮಾಡುವುದು?' ಎಂದು ಆಲೋಚಿಸತೊಡಗಿದಳು ಸರಳಾ. ಅಪ್ಪ ಸುರೇಶನಂತೂ ಕೋಪದಿಂದ ಮಗನ ಮೇಲೆ ರೇಗತೊಡಗಿದ.

"ಎಂಥ ಬೇಜವಾಬ್ದಾರಿ ಹುಡುಗನಯ್ಯ ನೀನು. ನಿನ್ನ ಮೇಲಿನ ನಂಬಿಕೆಯಿಂದ ಪೆಟ್ಟಿಗೆ ಕಳಿಸಿದರೆ ಅದನ್ನೇ ಮರೆಯೋದೇ? ಬಂದು ಇಷ್ಟು ದಿನಗಳಾದರೂ ಇನ್ನೂ ನೆನಪಿಗೆ ಬರಲಿಲ್ವೇ? ಗೆಳೆಯರ ಜೊತೆ ಸುತ್ತಾಟ ಮಾತ್ರ ಮರೆಯದೆ ಮಾಡ್ತಿದ್ದಿ. ನಾಚಿಕೆ ಆಗಲ್ವಾ ನಿಂಗೆ?"

ಅಪ್ಪ ಬೈದದ್ದರಲ್ಲಿ ತಪ್ಪಿರಲಿಲ್ಲ. ತನ್ನ ಬೇಜವಾಬ್ದಾರಿಯ ಬಗ್ಗೆ ತಾನೇ ಬೇಸರಗೊಂಡ ಸುಜಯ್.

ಸುಜಯ್ ತುಂಬಾ ಒಳ್ಳೆಯ ಹುಡುಗನಷ್ಟೇ ಅಲ್ಲ, ಯಾವುದೇ ಕೆಲಸ ಕೊಟ್ಟರೂ ಶ್ರದ್ಧೆಯಿಂದ, ಪ್ರೀತಿಯಿಂದ ಮಾಡುತ್ತಿದ್ದ. ಹಾಗಾಗಿ, ಅವನಿಗೆ ಜವಾಬ್ದಾರಿ ಕೆಲಸವನ್ನು ಕೊಡಲು ಯಾರೂ ಹಿಂಜರಿಯುತ್ತಿರಲಿಲ್ಲ. ಆದರೆ, ಮೊದಲ ಬಾರಿಗೆ ಅವನು ದೊಡ್ಡಮ್ಮನ ಪೆಟ್ಟಿಗೆ ಮರೆತು, 'ಬೇಜವಾಬ್ದಾರಿ

ಹುಡುಗ' ಎಂಬ ಹಣೆಪಟ್ಟಿ ಧರಿಸಬೇಕಾಯ್ತು.

ಎರಡು ಕ್ಷಣ ಆಲೋಚಿಸಿದ ಸುಜಯ್, ಧಡಕ್ಕನೆದ್ದು ರೈಲ್ವೆ ಸ್ಟೇಷನ್ ಕಡೆ ಹೊರಟ. 'ಹೇಗಾದರಾಗಲೀ, ಪೆಟ್ಟಿಗೆ ಪಡೆದೇ ತೀರುತ್ತೇನೆ' ಎಂಬ ಘಟ್ಟಿ ನಿರ್ಧಾರ ಮಾಡಿದ. ಮಧ್ಯಾಹ್ನದವರೆಗೆ, ಊಟದ ನಂತರ, ರಾತ್ರಿಯವರೆಗೆ ಎಲ್ಲೆಲ್ಲೋ ಸುತ್ತುತ್ತ, ಕಂಡ ಕಂಡ ಆಟೋಗಳ ಡ್ರೈವರ್ ಗಳ ಮುಖ ಗಮನಿಸಿದ. ಛಲ ಬಿಡದ ತ್ರಿವಿಕ್ರಮನಂತಾಗಿದ್ದ ಸುಜಯ್.

ಸುಜಯ್ ಗೆ ಒಂದು ವಿಶೇಷ ಗುಣವಿತ್ತು. ಒಮ್ಮೆ ನೋಡಿದ ಮುಖವನ್ನು ಸುಲಭದಲ್ಲಿ ಮರೆಯುತ್ತಿರಲಿಲ್ಲ. ತನ್ನನ್ನು ಕರೆತಂದ ಡ್ರೈವರ್ ಮುಖವೂ ಅವನ ಮೆದುಳಿನಲ್ಲಿ ದಾಖಲಾಗಿತ್ತು. ಆದರೆ ಅವ ಅಂದು ಸಿಗಲೇ ಇಲ್ಲ.

ಮತ್ತೂ ಎರಡು ದಿನ ಬೆಳಗಿನಿಂದ ಸಂಜೇವರೆಗೂ ಸುತ್ತಿ ಸುತ್ತಿ ಸುಸ್ತಾದ ಸುಜಯ್. ಡ್ರೈವರ್ ಮಾತ್ರ ಕಾಣಿಸಲೇ ಇಲ್ಲ. ಬೆಳಕಿಂಡಿಯೇ ಇರದ ಕಗ್ಗತ್ತಲಿನ ಕೋಣೆಯಲ್ಲಿ ಬಂದಿಯಾದಂತಿತ್ತು ಸುಜಯ್ ನ ಸ್ಥಿತಿ.

ಅಂದು ದೊಡ್ಡಮ್ಮ ಬರುವವರಿದ್ದರು. ಅಪ್ಪ ಅಮ್ಮನಿಂದ ಇನ್ನೂ ಮಂಗಳಾರತಿ ಆಗುತ್ತಲೇ ಇತ್ತು. ಅವರಿಗೂ 'ಪರಿಸ್ಥಿತಿಯನ್ನು ಹೇಗಪ್ಪಾ ಎದುರಿಸುವುದು? ವಿಮಲಾ ಬಂದು ಪೆಟ್ಟಿಗೆ ಕೊಡು ಎಂದರೆ ಏನು ಹೇಳುವುದು? ನಮಗೆ ಮೊದಲೇ ವಿಷಯ ತಿಳಿದಿದ್ದರೆ ಸುಜಯ್ ಆಟೋದಿಂದ ಇಳಿಯುವಾಗ ಪೆಟ್ಟಿಗೆಯನ್ನು ಇಳಿಸಿಕೊಳ್ಳುವ ಬಗ್ಗೆ ಗಮನ ಹರಿಸಬಹುದಿತ್ತು. ಛೇ, ಈಗೇನು ಮಾಡುವುದು?' ಎಂದು ಯೋಚಿಸುತ್ತಾ ಒದ್ದಾಡತೊಡಗಿದರು. ಅಲ್ಲದೆ, ವಿಷಯ ತಿಳಿದು ವಿಮಲಾಳಿಗಾಗಬಹುದಾದ ಆಘಾತ ನೆನೆದು ವಿಹ್ವಲಗೊಂಡರು.

"ಸರ್, ಸರ್" ಎಂದು ಯಾರೋ ಹೊರಗಡೆ ಕರೆದಂತಾಗಿ, ಸುಜಯ್ ಹೊರಬಂದ, ನೋಡಿದ. ತಾನು ಮೂರು ದಿನದಿಂದ ಹುಡುಕುತ್ತಿದ್ದ ಆಟೋ ಡ್ರೈವರ್, ಕೈಯಲ್ಲಿ ಪೆಟ್ಟಿಗೆ ಹಿಡಿದು ನಿಂತಿದ್ದ.

"ಸರ್, ನೀವು ಅವತ್ತು ಪೆಟ್ಟಿಗೆಯನ್ನು ಆಟೋದಲ್ಲೇ ಬಿಟ್ಟು ಇಳಿದು ಬಿಟ್ರಿ. ನಾನೂ ರಾತ್ರಿಯ ತನಕ ಗಮನಿಸಲಿಲ್ಲ. ರಾತ್ರಿ ಅರ್ಜೆಂಟಾಗಿ ಊರಿಗೆ ಹೋಗಬೇಕಾಯ್ತು. ಇವತ್ತು ತಾನೇ ಬಂದೆ ಸರ್. ನಿಮ್ಮ ಪೆಟ್ಟಿಗೆ ಹಿಂದಿರುಗಿಸುವವರೆಗೂ ಮನಸ್ಸಿಗೆ ಸಮಾಧಾನವೇ ಇರಲಿಲ್ಲ ಸರ್. ನನ್ನಿಂದ ನಿಮಗೆ ತೊಂದರೆಯಾಗಿದೆ, ಕ್ಷಮಿಸಿ ಸರ್" ಎಂದು ಒಂದೇ ಸಮನೆ ವಿವರ ಕೊಟ್ಟ.

ಸುಜಯ್ ಗೆ ನಂಬಲೇ ಆಗಲಿಲ್ಲ. ಹೋಗುವಂತಾಗಿದ್ದ ಪ್ರಾಣ ಮರಳಿ ಬಂದಂತಾಯ್ತು. ಹೊರಗೆ ಬಂದಿದ್ದ ತಾಯ್ತಂದೆಯರಿಗೂ ಮನಸ್ಸಿನ ಭಾರ ಇಳಿದಂತಾಯ್ತು. ಆತಂಕವೆಂಬ ದಟ್ಟ ಮೋಡದಿಂದ ತುಂಬಿದ್ದ ಎಲ್ಲರ ಮನಸುಗಳು ತಕ್ಷಣವೇ ಬಿರು ಮಳೆಯ ನಂತರ ಬೆಳಕಿನಿಂದ ಹೊಳೆವ ತಿಳಿ ಗಗನದಂತಾಗಿ ಮುಖಗಳಲ್ಲಿ ನಿರಾಳ ಭಾವ ಮೂಡಿತು.

ಪೆಟ್ಟಿಗೆಯನ್ನು ಕೈಗೆ ತೆಗೆದುಕೊಂಡ ಸುಜಯ್, ಡ್ರೈವರ್ ನನ್ನು ಒಳ ಕರೆದು ಕೂರಿಸಿ ಹೇಳಿದ,

"ತುಂಬಾ ಧನ್ಯವಾದಗಳು ಕಣಪ್ಪ. ನಿನಗಾಗಿ ಊರೆಲ್ಲಾ ಹುಡುಕಿದೆ. ಸಧ್ಯ ತಂದುಕೊಟ್ಟೆಯಲ್ಲ. ಏನಪ್ಪಾ ನಿನ್ನ ಹೆಸರು?"

"ನನ್ನ ಹೆಸರು ಸತ್ಯ" ಎಂದ ಡ್ರೈವರ್ ಹೇಳತೊಡಗಿದ,

"ಸರ್, ಅಂದು ರಾತ್ರಿಯ ತನಕ ಪೆಟ್ಟಿಗೆ ನನ್ನ ಆಟೋದಲ್ಲಿರುವುದನ್ನು ಗಮನಿಸಲೇ ಇಲ್ಲ. ರಾತ್ರಿ ಒಂಭತ್ತಾದಾಗ ಮನೆ ಕಡೆ ಹೊರಟೆ. ಅಷ್ಟರಲ್ಲಿ ಮಾವನಿಂದ ಕರೆ ಬಂದು, ತಕ್ಷಣ ಅವರ ಊರಿಗೆ ಬರಬೇಕು ಅಂದ್ರು. ನನ್ನ ಹೆಂಡತಿಯ ಚೊಚ್ಚಲ ಹೆರಿಗೆ ಆಗುವುದರಲ್ಲಿತ್ತು. ಹಾಗಾಗಿ ಬೇರೇನನ್ನೂ ಯೋಚಿಸದೆ ಪೆಟ್ಟಿಗೆಯನ್ನು ಮನೆಯೊಳಗಿಟ್ಟು ತಕ್ಷಣ ಮಾವನ ಊರಿಗೆ ಹೊರಟುಬಿಟ್ಟೆ ಸರ್."

ಅವನನ್ನು ಪ್ರೀತಿಯಿಂದ ನೋಡಿದ ಸುಜಯ್, "ಹೆಸರಿಗೆ ತಕ್ಕಂತೆ ನಿನ್ನ ಗುಣವಿದೆ. ತುಂಬಾ ಸಂತೋಷವಾಯ್ತು. ಇದನ್ನು ತೆಗೆದುಕೊಳ್ಳಪ್ಪ" ಎಂದು ಐನೂರು ರೂಪಾಯಿ ಕೊಡಹೋದ.

"ಊಹುಂ, ಖಂಡಿತ ಬೇಡ. ನನ್ನ ಮಾನವೀಯ ಕರ್ತವ್ಯ ನಾನು ಮಾಡಿದ್ದೇನೆ ಸರ್. ಅದಕ್ಕಾಗಿ ಹಣ ಪಡೆಯಲಾರೆ. ನಿಮಗೆ ಸಂತೋಷ, ಸಮಾಧಾನವಾಯ್ತಲ್ಲ, ಅಷ್ಟು ಸಾಕು ನನಗೆ" ಎಂದು ಕೈಮುಗಿದು ಹೊರಟೇಬಿಟ್ಟ.

ಆಟೋದವನನ್ನು ಅನುಮಾನಿಸದೆ, ಶ್ರದ್ಧೆಯಿಂದ ಅವನನ್ನು ಹುಡುಕುತ್ತಿದ್ದ ಸುಜಯನಿಗೆ ಆಟೋದವನ ಪ್ರಾಮಾಣಿಕತೆ ನೋಡಿ ಮಾನವೀಯತೆಯ ಬಗ್ಗೆ ನಂಬಿಕೆ ಗಾಢವಾಯಿತು.

ಶ್ರದ್ಧೆ, ಪ್ರಾಮಾಣಿಕತೆಗಳೇ ಅಲ್ಲವೇ ನಂಬಿಕೆಗೆ ಮೂಲ?

10. ಕಮಲಾಕ್ಷಿ ಸಿ ಆರ್



ಅರಳುವ ಹೂಗಳು

ಮೊಗ್ಗು ಅರಳುತಿವೆ ನೋಡಿದಿರಾ?
ಹಿಗ್ಗು ತರುವಂತೆ ಬಿರಿಯುವರಾ?



ಕತ್ತಲು ಕಳೆದು ರವಿಯು ಮೂಡಲು
ಹಕ್ಕಿಯಂತೆ ಗರಿ ಬಿಚ್ಚಿ ಹಾರಲು
ಗಗನದೆಡೆ ಏರುವ ಬಾನಾಡಿಯಂತೆ
ಮನಸಿನಲಿ ಕನಸುಗಳು ಮೂಡಲು
ಮೊಗ್ಗು ಅರಳುತಿವೆ ನೋಡಿದಿರಾ?

ಜಾತಿ ನೀತಿಯ ಭೇದಗಳಿಲ್ಲ
ಹಮ್ಮ ಬಿಮ್ಮಿನ ಅರಿವೇ ಇಲ್ಲ
ಹೆಣ್ಣು ಗಂಡು ಎಲ್ಲರೊಂದೆ ಎನುತ
ಕೈ ಕೈ ಹಿಡಿದು ಸಾಗುವರಲ್ಲ
ಮೊಗ್ಗು ಅರಳುತಿವೆ ನೋಡಿದಿರಾ?

ಸ್ವಚ್ಛ ಸುಂದರ ಶುದ್ಧ ಮನಸಿನ
ಕಪಟ ವಂಚನೆ ಸುಳಿಯದ ವಯಸಿನ
ಬಾರದು ಮರಳಿ
ಬಾಲ್ಯವು ಉರುಳಲು
ಸುವರ್ಣ ಯುಗ ಮನುಜನ ಬಾಳಲಿ
ಮೊಗ್ಗು ಅರಳುತಿವೆ ನೋಡಿದಿರಾ?

ಶತ ಶತಮಾನದ ಕೊಳೆಯ ಒರೆಸಿ
ಹೃನ್ಮನಗಳಲಿ ಜ್ಞಾನವ ಹರಿಸಿ
ಸಂಸ್ಕೃತಿ ಶಿಕ್ಷಣದಲ್ಲಿ ಬೆರೆಸಿ
ಸೌಜನ್ಯವನು ನಡೆಯಲಿ ಕಲಿಸಿ

ಮೊಗ್ಗು ಅರಳುತಿವೆ ನೋಡಿದಿರಾ?

ಅಂಕೆ ಶಂಕೆಯ ಗಡಿಯ ಮೀರಿ
ನಮ್ಮೀ ನೆಲದ ಸತ್ವವ ಹೀರಿ
ಆಡುತ ಹಾಡುತ ಸಾಗುವ ಕುಡಿಗಳು
ಭವಿಷ್ಯ ಬೆಳಗಲಿ ಕೀರ್ತಿ ಶಿಖರ ಏರಿ
ಮೊಗ್ಗು ಅರಳುತಿವೆ ನೋಡಿದಿರಾ?

11. ನಾಗರತ್ನ ಚಂದ್ರಶೇಖರ್



"ಉಚಿತವೆಲ್ಲವೂ ಖಚಿತವಾಗುವ ದಾರಿಯಲ್ಲಿ"

ಅಮ್ಮಾವ್ರೇ, ನಿಮ್ಮನ್ನು ಕೇಳಿಕೊಂಡು ಒಂದು ಐದು ಜನ ಹೆಂಗಸರು ಬಂದವ್ರೆ, ಡ್ರೈವರ್ ಸೀನು ಡೈನಿಂಗ್ ಟೇಬಲ್ ಹತ್ರ ತಿಂಡಿ ಸಿದ್ಧ ಮಾಡ್ತಿದ್ದ ನನ್ನನ್ನು ದ್ದೇಶಿಸಿ ಹೇಳಿದಾಗ ಬೆಳ್ಳಂ ಬೆಳಗ್ಗೆ ಯಾರಪ್ಪ ತಿಂಡಿಗೆ ಬಂದ ನೆಂಟರು ಅಂತ ಕುತೂಹಲದಿಂದ ಹೊರಗೆ ಬಂದೆ. "ನಮಸ್ಕಾರ ಮೇಡಂ ,ಎಲ್ಲರೂ ಒಕ್ಕೊರಲ್ನಿಂದ ಕೈಜೋಡಿಸಿದರು. ನನ್ನ ಪ್ರಶ್ನಾರ್ಥಕ ಮುಖ ನೋಡಿ ಮುಗುಳ್ನಕ್ಕರು. "ನಾವೆಲ್ಲ ಬೇರೆ ಬೇರೆ ಬಡಾವಣೆಯ ಸ್ನೇಹಿತರು. ನಾವು ಈ ತಿಂಗಳಲ್ಲಿ ಪ್ರಾರಂಭಿಸಲಿರುವ ಒಂದು ಐದಾರು ಸಂಘಗಳಿಗೆ ಮುಖ್ಯ ಅತಿಥಿಗಳಾಗಿ ನಿಮ್ಮನ್ನು ಕರೆಯಲು ಬಂದಿದ್ದೇವೆ ಎಂದರು. ನನಗೆ ಒಳಗೊಳಗೆ ಬಹಳ ಆನಂದವಾಯಿತು. ಒಳಗೆ ಬನ್ನಿ ಎಂದು ನಾನು ಅವರನ್ನೆಲ್ಲ ಒರಾಂಡಾದಲ್ಲಿದ್ದ ಕುರ್ಚಿಗಳಲ್ಲಿ ಕೂರಲು ಹೇಳಿದೆ.

"ಹೇಳಿ ನೀವು ಯಾವ ಯಾವ ಬಡಾವಣೆಯ ಗೆಳತಿಯರು? ನೀವು ಪ್ರಾರಂಭಿಸಲಿರುವ ಹಲವಾರು ಸಂಘಗಳು ಎಂದು ಹೇಳಿದ್ರಿ. ಅಂದರೆ ಅದು ಒಂದಕ್ಕಿಂತ ಹೆಚ್ಚು ಎಂದಾಯಿತು. ಎಲ್ಲರೂ ಸೇರಿ ಒಂದೇ ಸಂಘದಲ್ಲಿ ಒಟ್ಟಾಗಿದ್ದವರು ಈಗೇಕೆ ಬೇರೆ ಬೇರೆ ಸಂಘ ಮಾಡ್ತಿದ್ದೀರಿ."ಎಂದೆ. ಅಯ್ಯೋ ಮೇಡಂ ಈಗ ನಾವೆಲ್ಲ ಒಂದೇ ಲೇಡೀಸ್ ಕ್ಲಬ್ ನವರು ಬೆಂಗಳೂರಿನ ಈ ತುದಿಯಿಂದ ಆ ತುದಿಯವರೆಗೂ ಇರುವ ನೂರಾರು ಸದಸ್ಯರು ಓಡಾಡಲು ತುಂಬಾ ಕಷ್ಟ ಆಗ್ತಾ ಇತ್ತು. ಈಗ ನಮ್ಮ ಹೊಸ ಸರ್ಕಾರ ಸಾಕಷ್ಟು ಸೌಲಭ್ಯ ಕೊಡ್ತಾ ಇದೆ. ಸ್ತ್ರೀಶಕ್ತಿ ಅಂತ ಉಚಿತ ಸಾರಿಗೆ ಸೌಲಭ್ಯ ಕೂಡ ಪ್ರಾರಂಭವಾಗಿದೆ ಅಲ್ವಾ, ಅದರ ಉಪಯೋಗ ಪಡ್ಕೊಳ್ದೆ ಇದ್ರೆ ಹೇಗೆ ಮೇಡಂ ಅದಕ್ಕೋಸ್ಕರನೇ ಒಂದೊಂದು ಬಡಾವಣೆಯಲ್ಲಿ ಒಂದೊಂದು ಬ್ರಾಂಚ್ ತೆಗೆದು ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ವಾರಕ್ಕೊಂದು ಸಾರಿ ಓಡಾಡಿಕೊಂಡು ಇರಬಹುದು ತುಂಬಾ ಚೆನ್ನಾಗಿರುತ್ತೆ ಅಲ್ವಾ ಮೇಡಂ .

ಹೌದು ಹೌದು. ಈಗ ಕರ್ನಾಟಕದಲ್ಲಿ ಎಲ್ಲಾ ಕಡೆ ನೀವು ಮಹಿಳೆಯರು ಸರ್ಕಾರಿ ಬಸ್ಸಲ್ಲಿ ಉಚಿತವಾಗಿ ಓಡಾಡಬಹುದು ಅಂತ

ಗ್ಯಾರಂಟಿ ನಂಬರ್ ಒಂದು ಸಿಕ್ಕಿದೆ ಅಲ್ವಾ.

"ಕರೆಕ್ಟ್ ಮೇಡಂ, ಆಟೋ ಟ್ಯಾಕ್ಸಿಗೆ ಹಣ ಕೊಡಕ್ಕಾಗದೆ ನಮ್ಮ ಸದಸ್ಯರು ಎಷ್ಟೋ ಜನ ಕಾರ್ಯಕ್ರಮಗಳಿಗೆ ಬರ್ತಾನೆ ಇರ್ಲಿಲ್ಲ. ಈಗ ಉಚಿತ ಖಚಿತ ಅಂತ ಗೊತ್ತಾದ್ಮೇಲೆ ನೋಡ್ತಾ ಇರಿ ಪ್ರತಿ ಬಡಾವಣೆಗಳಲ್ಲಿ ಬ್ರಾಂಚ್ ಓ ಅಲ್ಲಿಂದ ಇಲ್ಲಿಗೆ ಇಲ್ಲಿಂದ ಅಲ್ಲಿಗೆ ವಾರಕ್ಕೊಂದು ಸಾರಿ ಓಡಾಡಿಕೊಂಡು ಇರಬಹುದು ತುಂಬಾ ಚೆನ್ನಾಗಿರುತ್ತೆ ಅಲ್ವಾ ಮೇಡಂ .

ಹೌದು ಹೌದು. ಈಗ ಕರ್ನಾಟಕದಲ್ಲಿ ಎಲ್ಲಾ ಕಡೆ ನೀವು ಮಹಿಳೆಯರು ಸರ್ಕಾರಿ ಬಸ್ಸಲ್ಲಿ ಉಚಿತವಾಗಿ ಓಡಾಡಬಹುದು ಅಂತ ಗ್ಯಾರಂಟಿ ನಂಬರ್ ಒಂದು ಸಿಕ್ಕಿದೆ ಅಲ್ವಾ.

"ಕರೆಕ್ಟ್ ಮೇಡಂ, ಆಟೋ ಟ್ಯಾಕ್ಸಿಗೆ ಹಣ ಕೊಡಕ್ಕಾಗದೆ ನಮ್ಮ ಸದಸ್ಯರು ಎಷ್ಟೋ ಜನ ಒಂದೊಂದು ಕಾರ್ಯಕ್ರಮ ಒಂದೊಂದು ಬ್ರಾಂಚನಲ್ ಮಾಡೋದ್ರಿಂದ ಎಲ್ಲಾ ಬಡಾವಣೆ ನೋಡೋ ಅವಕಾಶ ಸಿಗುತ್ತೆ ಅಲ್ವಾ.

"ಅಷ್ಟೇ ಅಲ್ಲ ನಮ್ ಲೇಡೀಸ್ ಕ್ಲಬ್ ಗೆ ಒಂದೊಂದು ಬಡಾವಣೆಯಲ್ಲಿ ಒಂದೊಂದು ಹೆಸರಿಟ್ಟಿದ್ದೀವಿ. ನಮ್ಮ ಗಂಡ, ಮಕ್ಕಳನ್ನ, ದುಡ್ಡು ಕೊಡಿ ಅಂತ ಪಾಕೆಟ್ ಮನಿ ಕೇಳಿ ಸಾಕಾಗ್ತಿತ್ತು. ಜಯನಗರದಲ್ಲಿ ಸ್ತ್ರೀ ಶಕ್ತಿ ಸಂಘಟನೆ. ಜಾಲಹಳ್ಳಿ ಯಲ್ಲಿ ದುರ್ಗಾಪರಮೇಶ್ವರಿ ಸಂಘ, ಜೆಪಿ ನಗರದಲ್ಲಿ ಇಂದಿರಾ ನಮನ, ಹೀಗೆ ಊರ್ ತುಂಬಾ ಆಗ್ತಾ ಇದೆ. ಸದ್ಯಕ್ಕೆ ಈ ಮೂರರ ಉದ್ಘಾಟನೆಗೆ ಮುಂದಿನ ಮೂರು ಶುಕ್ರವಾರಗಳು ನೀವೇ ಮುಖ್ಯ ಅತಿಥಿಯಾಗಿ ಬರಬೇಕು ಮೇಡಂ. ಅವರೆಲ್ಲ ಹೋದಮೇಲೆ ನಾನಂತೂ ತುಂಬಾ ಖುಷಿಯಿಂದ ಬೀಗ್ತಾ ಇದ್ದೆ. ಯಾರಿಗುಂಟು ಯಾರಿಗಿಲ್ಲ !ಇಂಥ ಅವಕಾಶ. ಒಟ್ಟೊಟ್ಟಿಗೆ ಹೋಲ್ ಸೇಲ್ ಅನ್ನೋ ಹಾಗೆ ಮೂರು ಸಂಘಗಳ ಉದ್ಘಾಟನೆಗೆ ನಾನು ಅತಿಥಿ. ಅಬ್ಬಬ್ಬ ನನ್ನ ಬೆನ್ನು ನಾನೇ ತಟ್ಟಿಕೊಂಡೆ. ಈ ಮಹಿಳೆಯರೆಲ್ಲ ಅಡಿಗೆ ಮನೆಗೆ ರಜಾ ಹಾಕಿ ಕ್ಲಬ್ ನೆಪ ಹೇಳಿ ಊರ್ ಸುತ್ತೋಕೆ ಕಾರಣವಾಗಿರುವ ಗ್ಯಾರೆಂಟಿ ಯೋಜನೆ ಅಡಿ ಉಚಿತ ಪ್ರಯಾಣಕ್ಕೆ ಜೈ ಎಂದು ಮನದಲ್ಲೇ ಜೈಕಾರ ಹಾಕಿದೆ. ಇನ್ನು ನನ್ನ ಭಾಷಣಗಳ ಸರಮಾಲೆ ತಯಾರಾಗಬೇಕಿತ್ತಲ್ಲ ಅಷ್ಟರಲ್ಲಿ ನನ್ನ ಮಗಳು ಅಪ್ಪನ ಹತ್ತಿರ ಏನೋ ಮಾತಾಡ್ತಾ ಇರೋದು ಕಿವಿಗೆ ಬಿತ್ತು .

"ಡ್ಯಾಡಿ ಇನ್ಮೇಲೆ ನಾನು ಕಾಲೇಜಿಗೆ ಸರ್ಕಾರಿ ಬಸ್ ನಲ್ಲಿ ಹೋಗಿ ಬರ್ತೀನಿ. ನನ್ನ ಪಾಕೆಟ್ ಮನಿಯಲ್ಲಿ. ಒಂದು ಸಾವಿರ ರೂಪಾಯಿ ಉಳಿಯುತ್ತೆ ಅಂತ ಇದ್ಲು. ಅಷ್ಟರಲ್ಲಿ ಮಗರಾಯ ಅದೆಲ್ಲಿದ್ದನೋ ಧಾವಿಸಿ ಬಂದ "

ಹುಂ ನೀನು ಕಾಲೇಜ್ ಮುಗಿದ ಮೇಲೂ ಅಲ್ಲಿ ಇಲ್ಲಿ ಸುತ್ತಾಡ್ತಾ ಲೇಟಾಗಿ ಮನೆಗೆ ಬರಬಹುದು ಬಿಡು. ಎಲ್ಲಾ ಕಡೆ ಫ್ರೀ ಟ್ರಾನ್ಸ್ಪೋರ್ಟ್ ಅಲ್ವಾ. ನಾವು ಮಾತ್ರ ಕೊಡೊ ಪಾಕೆಟ್ ಮನಿಲೇ ಎಲ್ಲಾ ಅಡ್ಜಸ್ಟ್ ಮಾಡಿಕೊಂಡು ಹೋಗಬೇಕು .

ಅಲ್ಲ ನಿಂಗ್ಯಾಕ ಹೊಟ್ಟೆಕಿಚ್ಚು, ಈ ವರ್ಷ ನೀನು ಡಿಗ್ರಿ ಪಾಸಾದ ಮೇಲೆ ನಿನಗೂ ನಿರುದ್ಯೋಗ ಭತ್ಯೆ ಸಿಗುತ್ತಲ್ಲ 3000 ರೂಪಾಯಿ ಅಣ್ಣ. ಆವಾಗ ಎಂಜಾಯ್ ಮಾಡ್ಕೋ, ಅಮ್ಮನಿಗೂ ಎರಡು ಸಾವಿರ ಮನೆ ಯಜಮಾನಿ ಅಂತ ಸಿಗುತ್ತಲ್ಲ. ಪಾಪ ಅಪ್ಪಂಗೆ ಯಾವುದು ಇಲ್ಲ. ಅಷ್ಟರಲ್ಲಿ ಡ್ರೈವರ್ ಸೀನು ಒಳಗೆ ಬಂದ .

ಸರ್ ಕಾರು ರೆಡಿಯಾಗಿದೆ. ಚಿಕ್ಕಮ್ಮ ಅವರನ್ನ ಡ್ರಾಪ್ ಮಾಡಿ ಆಮೇಲೆ ನಿಮ್ಮ ಕಚೇರಿಗೆ ಹೋಗೋದೋ ಅಥವಾ ಅವರು ಬಸ್ಸಲ್ಲೇ ಹೋಗ್ತಾರ..

ನೋಡು ಸೀನು, ಇನ್ ಮೇಲೆ ಬಸ್ಸು, ಟಿಕೆಟ್ ಅಂತ ರಗಳೆನೇ ಇಲ್ದೆ ನಾನು ನನ್ ಮಗಳು ಇಬ್ರುನು ಕೈಬಿಸ್ಕೊಂಡು ಬಸ್ಸತ್ತಿ ಕೆಲಸ ಮಾಡಿಕೊಂಡು ಬರುತ್ತೇವೆ. ಕೈ ತುಂಬಾ ಚೀಲ ಹಿಡ್ಕೊಂಡು ಮಾರ್ಕೆಟಿಂದ ಬರೋದೇ ವಾಸಿ ಅಂತ ನಾನಂತೂ ತೀರ್ಮಾನಿಸಿದ್ದೇನೆ ನಿನಗೆ ಪಾರ್ಕಿಂಗ್ ಪಾರ್ಕಿಂಗ್ ಸಮಸ್ಯೆನೇ ಇರೋದಿಲ್ಲ ಬಿಡು ."ಅಯ್ಯೋ ಅಮ್ಮಾವ್ರೇ, ನೀವು ಹಿಂಗೆ ನನ್ನ ಕೆಲಸ ಎಲ್ಲಾ ಕಮ್ಮಿ ಮಾಡ್ತಾ ಇದ್ರೆ ಎಲ್ಲ ಗ್ಯಾರಂಟಿಗಳು ಜಾರಿ ಆಗ್ಬಿಟ್ಟರೆ ನನ್ನ ಕೆಲಸಾನು ಗ್ಯಾರಂಟಿ ಇರಲ್ಲ. ಏನ್ ಮಾಡೋದು ಹೇಳಿ "

ಸೀನನ ಮಾತು ಕೇಳಿ ಮನೆಯವರೆಲ್ಲ ಜೋರಾಗಿ ನಕ್ಕರು ."ಡ್ಯಾಡಿ ಜಾಸ್ತಿ ಜನ ಬಸ್ಸು ಉಪಯೋಗಿಸ್ತಾ ಇದ್ರೆ ಶಬ್ದ ಮಾಲಿನ್ಯ, ವಾಯು ಮಾಲಿನ್ಯ, ಟ್ರಾಫಿಕ್ ಸಮಸ್ಯೆ ಯಾವುದು ಇರಲ್ಲ ಅಲ್ವಾ. ನಮ್ಮನೆ ಕೆಲಸದ ಕಮಲಿ ಕೂಡ ಬಸ್ ಹತ್ತಿಕೊಂಡು ಜುಮ್ಮಂತ ಟೈಮ್ ಸರಿಯಾಗಿ ಎಲ್ರು ಮನೆಗೂ ಬರ್ತಾಳೆ ನೋಡ್ತಾ ಇರಿ ..

ಹೌದಲ್ವಾ ಇನ್ನು ದೇವಸ್ಥಾನ ಮಾರ್ಕೆಟ್ ಸಿನಿಮಾ ಶಾಪಿಂಗ್ ಮಾಲು ಎಲ್ಲಾ ಕಡೆ ಹೆಂಗಸರನ್ನೇ ಕಳ್ಸಕ್ಕೆ ಶುರು ಮಾಡಬೇಕು ಹಣ ಉಳಿತಾಯ. ಗಂಡಸರಿಗೆ ಡಬ್ಬಲ್ ಬೆನಿಫಿಟ್ ಜೊತೆ ಹೋದರೆ ಖರ್ಚು ಜಾಸ್ತಿ ಮಾಡಬೇಕಾಗುತ್ತೆ. ಹಾಗಂತ ತವರು ಮನೆಗೆ ವಾರಕ್ಕೆ ಒಂದು ಸರ್ತಿ ಹೋದರೆ ಕಷ್ಟ. ಇವರ ಅಣಕದ ಮಾತಿಂದ ನನಗೂ ಸಿಟ್ಟು ಬಂತು.

"ನಿಮಗೆಲ್ಲಾ ಹೊಟ್ಟೆ ಕಿಚ್ಚು, ಇಷ್ಟ್ ದಿನ ಆದ್ಮೇಲೆ ನಮ್ ಸರ್ಕಾರಕ್ಕೆ ಸ್ತ್ರೀಶಕ್ತಿ ಬಗ್ಗೆ ಗೌರವ, ವಿಶ್ವಾಸ ಬಂದಿದೆ .ಗಂಡನ್ನ ಮೆಚ್ಚಿಸಕ್ಕೆ ಅವನ ಹೊಟ್ಟೆಗೆ

ಒಳ್ಳೆಯ ಆಹಾರ ತಯಾರಿಸಿಕೊಡಬೇಕಂತೆ, ಹಾಗೆ ಹೆಂಗಸರನ್ನು ಮೆಚ್ಚಿಸೋಕೆ ಗ್ಯಾರಂಟಿಗಳನ್ನು ಕೊಡದಿದ್ದರೆ ಹೇಗೆ?

"ಹೋಗ್ಲಿ ಡ್ಯಾಡಿ ನಂಗೆ ಎಲೆಕ್ಟ್ರಿಕ್ ಸ್ಕೂಟರ್ಕೊಡಿಸಿ. ಹೇಗೂ ೨೦೦ ಯೂನಿಟ್ ಉಚಿತ ಇದೆಯಲ್ಲ. ಚಾರ್ಜಿಂಗ್ ಮಾಡ್ಕೊಂಡ್ರೆ ಪೆಟ್ರೋಲ್ ದುಡ್ಡು ಉಳಿಯುತ್ತೆ .ಮಗನ ಜಾಣತನ ಕಂಡು ನಾನು ಬೆರಗಾದೆ.

ಈ ಗ್ಯಾಸ್ ಬೆಲೆ ಬಿಪಿ ತರ ಏರ್ತಾನೆ ಇದೆ. 2 ಎಲೆಕ್ಟ್ರಿಕ್ ಸ್ಟವ್ ಇಟ್ಕೊಂಡ್ರೆ ಹೇಗೆ ನನ್ನ ಆಲೋಚನೆ ಆ ದಿಕ್ಕಿನ ತ್ತ ಓಡುತ್ತಿತ್ತು. ಕರೆಂಟ್ ಫ್ರೀ ಅಂತ ಸರ್ಕಾರ ಹೇಳಿಕೆ ಕೊಡ್ತಾ ಇದ್ದಂಗೇನೆ ವಾಷಿಂಗ್ ಮಷೀನ್, ಗೀಸರ್, ಏರ್ ಕಂಡಿಷನ್ ಇವೆಲ್ಲ ಇಂಟರೆಸ್ಟ್ ಫ್ರೀ ಇನ್ಸ್ಟಾಲ್ಮೆಂಟ್ ನಲ್ಲಿ ಸೇಲ್ ಹಾಕಿದ್ದಾರೆ ಅಪ್ಪ ಅಂತ ಮಗಳು ಪೇಪರ್ತಂದು ಮುಂದೆ ಹಿಡಿದಳು.

ಡ್ಯಾಡಿ ಹಾಗಾದರೆ ಎರಡು ಏರ್ ಕಂಡೀಷನರ್ ತಗೊಳೋಣ ಬೇಡಿಕೆ ಪಟ್ಟು ಅದಾಗಲೇ ಪ್ರಾರಂಭವಾಗಿತ್ತು. ಉಚಿತಗಳು ಖಚಿತವಾಗುವ ಮುನ್ನವೇ ಎಲ್ಲವೂ ನಿಶ್ಚಿತಯವಾಗಲಿದೆಯೇ? ಎಂಬ ಪ್ರಶ್ನೆಯಂತೂ ಗ್ಯಾರಂಟಿಯಾಗಿತ್ತು.

12. ಮಾಧುರಿ ಕೃಷ್ಣ



ನಾನೂ,ನನ್ನ ಸಹಪಾಠಿ ಮಿತ್ರನೂ ಲೇಖನ ಮಾಲೆ- 7

ಜೀವ ದ್ರವ್ಯ

ನನ್ನನ್ನು ನನ್ನ ಸಹಪಾಠಿ ಮಿತ್ರನ ಮನೆಯೆದುರು ಉದುರಿಸಿದ ಮಗ ಹೇಳಿದ,"ಅಮ್ಮ, ನಿನಗಿಂದು ಒಂದು ಗಂಟೆ ಎಕ್ಸ್ ಟ್ರಾ, ನಾನು ಪಿಕ್ ಅಪ್ ಮಾಡಲು ಬರುವಾಗ 7 ಗಂಟೆಯಾಗಲೂ ಬಹುದು ಇಲ್ಲ,ಅದಕ್ಕಿಂತಲೂ ತುಸು ತಡವೂ ಆಗಬಹುದು ...ಎರಡೆರಡು ಮೀಟಿಂಗ್ ಇವೆ ಇಂದು"ಎಂದು ತನ್ನ ಸ್ಕಾರ್ಫಿಯೋ ರಿವರ್ಸ್ ಮಾಡಿಕೊಂಡು ಹೋಗಿಯೇ ಬಿಟ್ಟ. ನನಗೋ ಮನಸ್ಸಿನಲ್ಲಿಯೇ ಖುಷಿಯಾಯಿತು.

ಮಿತ್ರನ ಮನೆ ಬಾಗಿಲಿನಲ್ಲೇ ಅವನ ಹೆಣ್ಣುಮಕ್ಕಳಿಬ್ಬರೂ ಕಾದು ನಿಂತಿದ್ದರು. ಬಾಗಿಲಿಂದ ನೇರ ಒಳಗೆ ತನ್ನ ಮರದ ಕುರ್ಚಿಯ ಮೇಲೆ ಎರಡೂ ಕೈಗಳನ್ನಿರಿಸಿ ಸಹಪಾಠಿ ಮಿತ್ರ ಕತ್ತು ಉದ್ದುದ್ದ ಮಾಡುತ್ತ ಮೆಟ್ಟಿಲೇರುತ್ತಿದ್ದ ನನ್ನನ್ನು ನೋಡುತ್ತಿರುವುದು ಕಾಣಿಸಿತು. ನಾನು ಹೊಸಿಲೊಳಗೆ ಕಾಲಿಡುತ್ತಿರುವಂತೇ ,

"ಅದೇನದು, ಯಾಕೋ ಮನಸ್ಸಿನೊಳಗೇ ನಗುತ್ತಲೇ ಇದ್ದೀಯಾ?" ಎಂದು ಕೇಳಿದ 'ಖದೀಮ, ಚುರುಕಿನಲ್ಲೇನೂ ಕಮ್ಮಿಯಿಲ್ಲ'!' ಅಂದುಕೊಳ್ಳುತ್ತಲೇ "ಅದಾ, ಇವತ್ತು ನನ್ನ ಮಗ ಪಿಕ್ ಅಪ್ ಮಾಡುವುದು ಒಂದು ಗಂಟೆ ಲೇಟಾಗುತ್ತದಂತೆ "ಎಂದೆ ಅವನನ್ನೇ ನೋಡುತ್ತಾ.

"ಹಾ...ಗಾದ್ರೆ ನೀವಿವತ್ತು ನಮ್ಮನೇಲಿ ಊಟ ಮಾಡಿಕೊಂಡು ಹೋಗಿ , ಆಂಟೀ "ಎಂದು ಮಿತ್ರನ ಮೊಮ್ಮಗ ಸಲೀಸಾಗಿ ಹೇಳಿದ.

"ಊಟಾನಾ? ನೀನೀಗ ಮೊದಲು ಹೋಗಿ ನನಗೆ ಎಳನೀರು ತಾ " ಎಂದೆ.

"ಈ ಕ್ಷಣ ತಂದು ಬಿಟ್ಟೆ "ಎಂದು ರೊಯ್ಯನೆ ಒಳಗೋಡಿದ.

"ಮತ್ತೆ, ಹೇಗಿದ್ದಿ ಈಗ?" ಸಿಂಗಲ್ ಸೀಟರ್ ಮೇಲೆ ಕೂರುತ್ತ ಕೇಳಿದೆ.

"ನೀನೇ ನೋಡುತ್ತಾ ಇದ್ದೀಯಲ್ಲ!" ಮಿತ್ರನ ಮುಖದಲ್ಲಿ ನಗು ಮಾಯವಾದಂತನಿಸಿತು. ಅರೆಕ್ಷಣ ನನಗೂ ತಬ್ಬಿಬ್ಬಾಗುವಂತಾಯಿತು. ' ಎಷ್ಟು ತುಂಟು ತುಂಟು ಹುಡುಗನಾಗಿದ್ದ ಆ ಕಾಲದಲ್ಲಿ! ಅದು ಹೇಗೆ ಅಷ್ಟು

ಗಂಭೀರ ಬ್ಯಾಂಕ್ ಮ್ಯಾನೇಜರ್ ಹುದ್ದೆಗೆ ಏರಿ ಪೂರ್ಣಾವಧಿ ಕಾರ್ಯ ನಿರ್ವಹಿಸಿಕೊಂಡು ಬಂದನೋ ಈ ಪುಂಡು ಹುಡುಗ !" ಮತ್ತೊಮ್ಮೆ ತುಟಿಗಳೆಡೆಯಲ್ಲಿ ಕಿರು ನಗು ಹಣಕಿತು.

"ಅಕಾ, ಪುನಹ ನಗು?ನಮಗೂ ಹೇಳು ಒಬ್ಬಳೇ ನಗುವುದು ಯಾಕೆ?"

ಅವನು ಹಾಗೆಂದುದೇ ತಡ , ಅವನ ಹೆಣ್ಣು ಮಕ್ಕಳಿಬ್ಬರೂ ಕೂತಲ್ಲೇ ಅಲರ್ಟ್ ಆಗಿ ಬಿಟ್ಟರು.

ಸುತ್ತ ಮುತ್ತು ನೋಡಿದೆ, ಅವನ ಮಿಸೆಸ್ ಎಲ್ಲಿ ಅಂದುಕೊಳ್ಳುವಷ್ಟರಲ್ಲಿ ಮೊಮ್ಮಗನ ಕೈ ಹಿಡಿದುಕೊಂಡು ಆಕೆಯೇ ಬಂದರು. ವಾತಾವರಣ
ಸರಿ ಹೋಯಿತು. ಇನ್ನು ಮಾತಾಡಲಡ್ಡಿಯಿಲ್ಲ.

ಏನಾಗಿದೆ ನಿನಗಿಂದು ನಗುವಿನ ಮೇಲೆ ನಗು?ಅದೇನು ಗುಟ್ಟು ? ನಮಗೂ ಸ್ವಲ್ಪ ಹೇಳಬಾರದೇ ಮಹರಾಯ್ತಿ?

ಈಗಂತೂ ನಾನು ಪಕ್ಕಾ !ಅವನ ಸಹನೆ ಕಟ್ಟೆಯೊಡೆಯುವಂತೆ ಕಾಣಿಸಿತು. ಅವನನ್ನೇ ನೋಡುತ್ತ ಕೇಳಿಯೂ ಬಿಟ್ಟೆ, "ಅಲ್ಲೋ, ಕಾಲೇಜಿಗೆ ನೀನು ಮೊದಲಾಗಿ ಬಂದು ಸೇರಿದ್ದೇ ಡಿಗ್ರಿ ಕ್ಲಾಸಿಗೆ! ಹಿಂದಿನ ಸಾಲಿನಲ್ಲಿ ಕುಳಿತು ಎರಡೂ ತುಂಬು ತೋಳನ್ನು ಪೂರಾ ಮೇಲೇರಿಸಿಕೊಂಡು, ಮೊಳ ಕೈ ಎರಡನ್ನೂ ಡೆಸ್ಕಿನ ಮೇಲಿರಿಸಿ,ಬೆನ್ನು ಬಾಗಿಸಿಕೊಂಡು ಬಾಕಿ ಹುಡುಗರನ್ನೂ ಮಾತಾಡಿಸದೆ ಬಾಯಿ ಬಿಡದೆ ಕುಳಿತಿದ್ದೆ. ತಿಂಗಳು ಕಳೆಯುವಷ್ಟರಲ್ಲೇ ಅದೆಂಥಾ ಪೋಕರಿಯಾಗಿ ಬಿಟ್ಟೆ ನೀನು ! ವರ್ಷ ಕಳೆಯುವಷ್ಟರಲ್ಲಿ ಕಾಲೇಜ್ ರೌಡಿ ಪಟ್ಟವನ್ನೂ ಗಳಿಸಿಕೊಂಡೇ ಬಿಟ್ಟೆಯಲ್ಲ... !"

ನಾನಿನ್ನೂ ಪೂರ್ತಿ ಆಡಿ ಮುಗಿಸಿರಲಿಲ್ಲ, ಅಷ್ಟರಲ್ಲೇ ಮಿತ್ರ ಮಧ್ಯೆ ಬಾಯಿ ಹಾಕಿದ " ರೌಡಿ ಪಟ್ಟವೇ! ಛೇ..ಛೇ..ಹಾಗೇನಿರಲಿಲ್ಲ!! ಅದ್ಯಾರು ಹಾಗೆಂದವರು? ನೀವು ಹುಡುಗಿಯರು ...ಸಾಮಾನ್ಯರಲ್ಲ...!" ಮಿತ್ರ ಹಲ್ಲು ಬಿಗಿದನೆನಿಸಿತು.

"ಛೇ..ನಾನು ಸೀದಾ ಹಾಗೆ ಹೇಳಬಾರದಿತ್ತು.." ಎಂದು ನಾಲಿಗೆ ಕಚ್ಚಿಕೊಳ್ಳುವಷ್ಟರಲ್ಲಿ ಸಹಪಾಠಿ ಮಿತ್ರ ತನ್ನದೇ ಲಹರಿಯಲ್ಲಿ ಮಾತು ಮುಂದುವರಿಸಿದ.." ಅಂದಿನ ದಿನಗಳಲ್ಲಿ ಮಾಡಲಾದರೂ ಏನಿತ್ತು! ..ಬಿ.ಯೆಸ್ಸೀಯವರಿಗಾದರೂ ಪ್ರಾಕ್ಟಿಕಲ್ಸ್ ಇತ್ತು,,ಫಿಸಿಕ್ಸ್ ಕೆಮಿಸ್ಟ್ರೀ ರೆಕಾರ್ಡ ಸಬ್ಮಿಟ್ ಮಾಡಬೇಕಿತ್ತು? 'ಆಸ್ ಐ ಟೋಲ್ಡ್ ಯು ಇನ್ ದ ಪ್ರೀವಿಯಸ್ ಕ್ಲಾಸ್ 'ಎಂದು ಆ ಹಿಸ್ಟರಿ ಲೆಕ್ಚರರ್ ಬಂದು ಕುರ್ಚಿಯಲ್ಲಿ ಕೂತು ಶುರು ಮಾಡಿದ ಕೂಡಲೇ ಡೆಸ್ಕ್ ಮೇಲೆ ತಲೆಯಿಟ್ಟು ಮಲಗಿ ಬಿಟ್ಟರೆ ಮತ್ತೆ

ಏಳುತ್ತಿದ್ದುದು ಅವರು ಮುಗಿಸಿ ಹೋಗುತಿದ್ದ ಮೇಲೆಯೇ! ಅದೂ ಪಕ್ಕದವ ತಿವಿದು ಎಬ್ಬಿಸಿದ ಮೇಲೆಯೇ!" ಮಿತ್ರ ಸಂಪೂರ್ಣವಾಗಿ 50 ವರ್ಷಗಳ ಹಿಂದೆಯೇ ಹೋಗಿ ಬಿಟ್ಟಿದ್ದ.

ಅವನೇನು! ನಾವು ಗರ್ಲ್ಸ್ ಕೂಡಾ ಅದೇ ತಾನೇ ಮಾಡಿದ್ದು....ಹಿಸ್ಟರಿ ಕ್ಲಾಸ್ ಅಂದ್ರೆ ರಫ್ ನೋಟ್ ಹಿಡಿದು ಚುಕ್ಕಿ ಹಾಕಿ ರಂಗೋಲಿ ಬಿಡಿಸುತ್ತ, ಲೆಕ್ಚರ್ ಬಿಗಿಯುತಿದ್ದ ಉಪನ್ಯಾಸಕರ ವಿವಿಧ ಭಂಗಿಗಳನ್ನು
ಡ್ರಾ ಮಾಡುತ್ತ, ಅದಕ್ಕೆ ಗಡ್ಡ ಮೀಸೆಗಳನ್ನು ಹಚ್ಚಿ ಆನಂದಪಡುತ್ತಿದ್ದೇವೆಯೇ ಹೊರತು ಪಾಠವನ್ನು ಚೂರೂ ಕೇಳಿಸಿಕೊಳ್ಳುತ್ತಿರಲಿಲ್ಲ...ಆದರೂ ಹುಡುಗರಿಗಿಂತ ನಾವೇ ಮೇಲೆಂದು ಪೋಸ್ ಕೊಡಲು ಮಾತ್ರ ಮರೆಯುತ್ತಿರಲಿಲ್ಲ! ಆದರೆ ಈಗ ತಲೆಯೊಳಗೆ ಸುತ್ತುತಿದ್ದ ವಿಚಾರ ಮಾತ್ರ ಅದಾಗಿರಲಿಲ್ಲ.

"ಅದೇನೋ ಸರಿಯೇ, ಆದರೂ ಬರೇ ಪಾಪ ಆಗಿದ್ದವನು ಅಷ್ಟು ಬೇಗ ಬದಲಾಯಿಸಿದ್ದು ಹೇಗೆಂದು ಈಗಲೂ ನನಗೆ ಆಶ್ಚರ್ಯವೇ!" ನನ್ನ ಬಾಯಿಂದ ಜಾರಿ ಮಾತು ಹೊರ ಬಿದ್ದೇ ಬಿಟ್ಟಿತು. ತುಟಿಯ ಮೇಲೆ ತೋರು ಬೆರಳು ತಾಗಿಸಿ ಕುಳಿತ ಮಿತ್ರ ಕ್ಷಣಕಾಲ ಹಾಗೇ ಇದ್ದ, ಆಮೇಲೆ 'ಹ್ಹಹ್ಹಾ ' ಎಂದು ಶಬ್ದವಾಗಿ ಮನೆಯೇ ಅಲುಗಾಡುವಂತೆ ಜೋರಾಗಿ ನಕ್ಕ. " ನೀನು ಎಂಥಾ ಜನ ಮಾರಾಯ್ತಿ, ಅಷ್ಟೂ ತಿಳಿದಿರಲಿಲ್ಲವೆಂದರೆ!
ಹಣೆ ಚಚ್ಚಿಕೊಳ್ಳುತ್ತ, "....ನಮ್ಮ ಕ್ಲಾಸಿನಲ್ಲಿದ್ದ ಆ ಮೂರು ಪ್ಲಸ್ ಹುಡುಗರಾದರೂ ಹೇಗಿದ್ದರು ಹೇಳು! ಆಫ್ ಕೋರ್ಸ್ ಕಲಿಯುವುದರಲ್ಲಾಗಲೀ,ಮಾರ್ಕ್ಸ್ ತೆಗೆಯುವುದರಲ್ಲಾಗಲೀ ಅಲ್ಲ, ನಾನು ಹೇಳಿದ್ದು! ಆ ವಾಮನಮೂರ್ತಿ, ಇದ್ದು ಬದ್ದ ಯುನಿವರ್ಸಿಟಿ ಡಿಬೆಟ್ ಗಳಿಗೆಲ್ಲ ಹೋಗಿ ,ತನ್ನ ದೇಹಕ್ಕಿಂತಲೂ ದೊಡ್ಡದಾದ ಕಪ್ ಶೀಲ್ಡುಗಳನ್ನು ಹೊರಲಾಗದೆ ಹೊತ್ತು ತರುತ್ತಿದ್ದ. ಅದು ಬಿಡು ಅವನು...ಹೆಸರೇನದು....ಪ್ರತಿ ಬಾರಿಯೂ ನೀವು ಹುಡುಗಿಯರನ್ನು ಸೋಲಿಸಿ ಫಸ್ಟ್ ಬಂದು ಎಲ್ಲ ಲೆಕ್ಚರರ್ಸ್ ಕೈಯಿಂದ ಬೆನ್ನು ತಟ್ಟಿಸಿಕೊಳ್ಳುತಿದ್ದವನು....
ಸಹಪಾಠಿ ಮಿತ್ರನ ಭಾಷಣ ಮುಂದುವರಿಯುತ್ತಲೇ ಇತ್ತು..ನನಗೋ ಅದನ್ನು ಕಟ್ ಮಾಡಲೇ ಬೇಕಿತ್ತು!
"...ಅದಕ್ಕೂ ನಿನ್ನ ಗೂಂಡಾಗಿರಿಗೂ ಏನು ಸಂಬಂಧವೋ? ನೀನೆಂದರೆ ಸ್ಟೂಡೆಂಟ್ಸ್ ಬಿಡು, ಲೆಕ್ಚರರ್ಸ್ ಕೂಡಾ ಹೆದರುತಿದ್ದರಲ್ಲ! ಪಾಪ ,ಇನ್ನು ಪಿ.ಯೂ.ಸಿ.ಗೆ ಸೇರಿಕೊಳ್ಳುತಿದ್ದ ಆ ಎಳೇ ಎಳೇ ಹುಡುಗರನ್ನು ನೀನು

ಛೇಡಿಸಿದ್ದು ಸ್ವಲ್ಪವೇ?" ಘಟ್ಟಿಸಿ ಕೇಳಿದೆ.
"ಅದಾ...." ಸಹಪಾಠಿ ಮಿತ್ರನಿಗೂ ಆ ಘಟನೆ ಎಂದಿಗೂ ಮರೆತು ಹೋಗಿರಲಿಕ್ಕಿಲ್ಲ...ತನ್ನಷ್ಟೂ ಹಲ್ಲುಗಳನ್ನು ತೋರಿಸಿ ಚೆಂದವಾಗಿ ನಕ್ಕ . ಅವನ ಹೆಣ್ಣು ಮಕ್ಕಳು ಅವನನ್ನೊಮ್ಮೆ, ನನ್ನನ್ನೊಮ್ಮೆ ನೋಡಿದರು.
ಆ ದಿನ, ಪಾಪ ಮೊದಲ ದಿನ ಕಾಲೇಜಿಗೆ ಬಂದ ಒಂದಷ್ಟು ಹುಡುಗರನ್ನು ಕೆಮಿಸ್ಟ್ರಿಲ್ಯಾಬೊಳಗೆ 'ಇಲ್ಲಿಯೇ ಓಪನಿಂಗ್ ಸೆರೆಮನಿ' ಎಂದು ಕೂಡಿ ಬಿಟ್ಟಿದ್ದ.ಎಲ್ಲ ಮುಗಿದ ಮೇಲಷ್ಟೇ ಲ್ಯಾಬಿಗೆ ಹೋಗಿದ್ದ ಅಟೆಂಡರ್ ನೋಡಿ ಹೊರಗೆ ಕಳುಹಿಸಿದ್ದು. ಒಟ್ಟಿನಲ್ಲಿ ಉಪನ್ಯಾಸಕರಿಂದ ಹಿಡಿದು ಪ್ರಿನ್ಸಪಾಲರ ವರೆಗೆ ಎಲ್ಲರೂ ಇವನ ಚೇಷ್ಟೆಗೆ ಹೆದರುತಿದ್ದರು .
"ಹಾಗೇನಿಲ್ಲ ,ಅದೆಲ್ಲ ನೀವು ಹುಡುಗಿಯರ ಭ್ರಮೆ ಅಷ್ಟೇ!" ಎಂದು ತನ್ನ ಮಕ್ಕಳ ಕಡೆ ನೋಡಿ ಕಣ್ಣು ಜೋರಾಗಿ ಮಿಟುಕಿಸಿದ.

ಅಲ್ಲಿಗೆ ನಾನು ಬಿಟ್ಟೇನೆಯೇ! "ಹಾಗಿದ್ದರೆ ಅವರೆಲ್ಲ ಯಾಕೆ ಪ್ರತಿಯೊಂದು ವಿಷಯಕ್ಕೂ ನಿನ್ನನ್ನು, ಸ್ಟಾಫ್ ರೂಮಿಗೋ, ಪ್ರಿನ್ಸಿಪಾಲ್ ರೂಮಿಗೋ ಕರೆಯುತಿದ್ದುದು ?" ಒಂದು ರೀತಿ ಚಾಲೆಂಜ್ ಹಾಕಿಯೇ ಕೇಳಿದೆ ನಾನು ! ಹಾಗೇ ಮುಂದುವರಿಸಿ, "ನೀನು ಆ ಬಿ.ಯೆಸ್ಸೀ ವಿದ್ಯಾರ್ಥಿನಿಯನ್ನು ಛೇಡಿಸಿ ತೊಂದರೆ ಕೊಟ್ಟದ್ದು ನಾನೇ ಕಣ್ಣಾರೆ ಕಂಡಿಲ್ಲವೇ?
ಮಿತ್ರ ಹುಬ್ಬು ಗಂಟಿಕ್ಕಿ ಯೋಚಿಸಿದ. ಈಗ ನಾನು ಇನ್ನಷ್ಟು ಗಟ್ಟಿಯಾದೆ. " ಹಾಗಾದ್ರೆ ಅವಳು ಪ್ರಿನ್ಸಿಪಾಲ್ ಗೆ ಕಂಪ್ಲೈಂಟ್ ಮಾಡಿದ್ದು ಸುಳ್ಳೇನು?
ನಾವು ಕ್ಲಾಸ್ ಮೇಟ್ಸ್ ಗೆ ಆವಾಗ ಎಷ್ಟೊಂದು ಶೇಮ್ ಆಗಿತ್ತು ಗೊತ್ತಾ? ಲೇಡೀಸ್ ವೈಟಿಂಗ್ ರೂಮಿಗೆ ಎಲ್ಲಾ ಬ್ಯಾಚಿನ ಗರ್ಲ್ಸ್ ಬಂದೂ ಬಂದು ನಮ್ಮನ್ನು ಕೇಳುತಿದ್ರು," ಅವನು ನಿಮ್ಮ ಕ್ಲಾಸ್ ನವನಂತೆ ಹೌದೇ? ನೀವು ಹೇಗೆ ಅವನ ಜತೆ ಕ್ಲಾಸಲ್ಲಿ ಕುಳಿತಿರುತ್ತೀರಿ ?"
ಸಹಪಾಠಿ ಮಿತ್ರನ ಹೆಣ್ಣು ಮಕ್ಕಳು ಈಗ ಸ್ವಲ್ಪ ಮಿಸುಕಾಡಿದಂತಾಯ್ತು. ನಾನು ಅವರ ಕಡೆ ನೋಡಲಿಲ್ಲ. ಮಿತ್ರನೇ ಅಂದ, " ಅಕಾ, ನಿನ್ನ ಕಣ್ಣು ಈಗಲೂ ಕೆಂಪಾಗಿ ಕಾಣುತ್ತಿದೆ ನನಗೆ....ಆಕ್ಚುವಲೀ ಆವತ್ತೇನಾಯ್ತು ಅಂದ್ರೆ ನೋ, -- ಸ್ವಲ್ಪ ಕೇಳುಸ್ಕೋ, ಅವಳಿಗೆ ಸಹಾಯ ಮಾಡಲೆಂದೇ ಅವಳನ್ನು ಹುಡುಕಿ ಹೋದದ್ದು ನಾನು! ಆದರೆ ಅವಳು ಮಾತ್ರ ತಪ್ಪಾಗಿ ತಿಳಿದುಕೊಂಡಳು. ಏನಾಗಿತ್ತೆಂದರೆ ಹಿಂದಿನ ದಿನ ಅವಳು ಕಾಲೇಜಿಗೆ ಬಂದದ್ದು ಸ್ವಲ್ಪ ಲೇಟಾಗಿತ್ತೆನಿಸುತ್ತದೆ.ಯಾವಾಗಿನಂತೆ ನಾವೂನೂ ನಾಲ್ಕೈದು ಜನ

ಕಾರಿಡಾರಿನಲ್ಲಿ ನಿಂತಿದ್ದೆವು.ಅವಳು ಬಂದಾಗ ನಾವೆಲ್ಲಾ ಸಾಲಾಗಿ ಗೋಡೆಗೊರಗಿ ' ಗುಡ್ ಮಾರ್ನಿಂಗ್ ಮಿಸ್ 'ಎನ್ನುತ್ತ ಅವಳು ಪಾಸಾಗಿ ಹೋಗಲಿ ಎಂದು ನಿಂತುಕೊಂಡೆವು. ಗಡಬಡಿಸಿಕೊಂಡು ಒಳಗೆ ಅವಳು ಹೋಗುವಾಗ ನೋಟ್ ಬುಕ್ಕೊಂದು ಜಾರಿ ಬಿದ್ದದ್ದು ಅವಳಿಗೆ ಗೊತ್ತಾಗ್ಲೇ ಇಲ್ಲ. ನಾನು ಹೆಕ್ಕಿಟ್ಟುಕೊಂಡೆ. ಕರೆದು ಕೊಡೋಣಾಂದ್ರೆ ಅವಳ ಲೆಕ್ಚರರ್ ಕ್ಲಾಸಲ್ಲಿ ಆಗಲೇ ನಿಂತು ಬಿಟ್ಟಿದ್ದರು.'ಸರಿ, ಆ ಮೇಲೆ ಕೊಡುವಾ' ಎಂದುಕೊಂಡೆ. ಮತ್ತೆ ನಮ್ಮ ಹಿಸ್ಟ್ರಿ ಪೀರಿಯಡ್ನಲ್ಲಿ 'ಏನಿದೆ ನೋಡುವಾ 'ಎಂದು ಬಿಡಿಸಿದರೇ....."ಮಾತು ನಿಲ್ಲಿಸಿಯೇ ಬಿಟ್ಟು ನನ್ನ ಕಡೆಗೆ ನೋಡಿದ. ಅವನ ಹೆಣ್ಣುಮಕ್ಕಳೂ ಈಗ ಕೂತಲ್ಲಿಂದ ಮುಂದೆ ಬಂದು ಅವನನ್ನೇ ನೋಡತೊಡಗಿದರು. " ಏನು .....ಏನಿತ್ತು ಅದರಲ್ಲಿ?

ಈಗ ಅವಸರವಾಗಿದ್ದು ನನಗೆ.

" ಏನಿತ್ತಾ.....ಏನಿರಲಿಲ್ಲ ಎಂದು ಕೇಳು, ಅದನ್ನು ಬೇಕಾದರೆ ಹೇಳುತ್ತೇನೆ! ಎಂದು ಗಂಭೀರ ಮುಖ ಮಾಡಿದ.

" ಏಏ....ಸಾಕೋ ಆಕ್ಟಿಂಗ್ ಹೇಳೀಗ...ಏನಿತ್ತು ಅದರಲ್ಲಿ?

"ಹುಡುಗಿಯರಿಗೆ ಸಂಬಂಧಪಟ್ಟ ಎಲ್ಲಾ ಇತ್ತು ಅದರಲ್ಲಿ..!

" ಅಂದ್ರೇ....."ನನ್ನೊಂದಿಗೆ ಮಿತ್ರನ ಹೆಣ್ಣುಮಕ್ಕಳಿಬ್ಬರೂ ಕಿರುಚಿದಂತನಿಸಿತು.

"ಅದರಲ್ಲೀ....ಆ ದಪ್ಪ ರಫ್ ನೋಟಲ್ಲಿ.." ಎಂದು ರಾಗ ಎಳೆಯುತ್ತ ಕುಸಿದ ತನ್ನ ದೇಹವನ್ನು ನೆಟ್ಟಗೆ ಮಾಡಲು ಹವಣಿಸಿದ. ಅಷ್ಟರಲ್ಲೇ ಅವನ ಹೆಣ್ಣು ಮಕ್ಕಳಿಬ್ಬರೂ ಥಟ್ಟನೆ ಅವನ ಬಳಿಗೋಡಿ, ಒಬ್ಬಳಂತೂ ಕೂಡಲೇ ಅವನ ಕಂಕುಳಿಗೆ ಕೈ ಹಾಕಿ ಅವನನ್ನು ನೆಟ್ಟಗೆ ಕೂರಿಸಿದಳು. ತನ್ನ ದೇಹಕ್ಕಾದ ಹಿಂಸೆಯನ್ನು ಗಮನಿಸದವನಂತೆ ಅವನು ಮಾತು ಮುಂದುವರಿಸಿದ. "ಅದರಲ್ಲಿ ಚಿತ್ರಗಳಿದ್ದುವು....ರೇಖಾಚಿತ್ರಗಳೂ, ಪೆನ್ನಿನ ಇಂಕು ಬಳಿದವುಗಳೂ ,ಕ್ಲಾಸು ತೆಗೆದುಕೊಳ್ಳುತಿದ್ದ ಎಲ್ಲಾ ಉಪನ್ಯಾಸಕರ ವ್ಯಂಗ್ಯ ಚಿತ್ರಗಳು ಭರ್ಜರಿ ಗಡ್ಡ ಮೀಸೆಗಳೊಂದಿಗೆ ನಿಕ್ ನೇಮ್ ಜತೆಗೆ ಕಾಮೆಂಟ್ಸ್ ,ಅಡಿ ಟಿಪ್ಪಣಿಗಳ ಸಹಿತವಿದ್ದುವು. ಒಟ್ಟು ಇದ್ದರಲ್ಲ, ಪೂರಾ ಇಪ್ಪತ್ತು ಹುಡುಗಿಯರು-- ಬಿ.ಯೆಸ್ಸೀ ಮ್ಯಾಥ್ಸ್ ಜುವಾಲಜಿ ಎಂದು!" ಗಹ ಗಹಿಸಿ ನಕ್ಕಪಕ್ಕಾ ಕಾಲೇಜ್ ಹುಡುಗನಂತೆ !

'ಅಬ್ಬ!...ಇವನು ಸಾಮಾನ್ಯನಲ್ಲ!' ಎಂದು ಮನಸ್ಸಿನಲ್ಲಿ ಗೊಣಗಿಕೊಂಡದ್ದು ಕೇಳಿಸಿಕೊಂಡವನಂತೆ, " ಅದರಲ್ಲಿ ಮ್ಯಾಥ್ಸ್ ಎಷ್ಟು--ಜುವಾಲಜಿ ಬಾಟನಿ ಎಷ್ಟು ಎಂದು ಹೇಳಬೇಕೇನು?" ನನ್ನನ್ನೇ ಕೇಳಿದ.

"ಸದ್ಯ ಬೇಡಪ್ಪ...ಇನ್ನೂ ಏನೇನು ಕಂಡೆ, ಅದನ್ನು ಹೇಳೀಗ!

"ಲವ್ ಲೆಟರ್.." ಪಕ ಪಕನೆ ಹುಬ್ಬು ಕುಣಿಸಿದ ಸಹಪಾಠಿ ಮಿತ್ರ.

"ಹಾಗೆಂದರೇನೋ? ಯಾರಿಗೋ ಬರೆದ ಪ್ರೇಮ ಪತ್ರವಿತ್ತೇ " ಗಾಬರಿಯಿಂದ ಕೇಳಿದೆ.

"ಪ್ರೇಮ ಪತ್ರದ ನಮೂನೆಯಿತ್ತು...ಎರಡು ಮೂರು ತರದಲ್ಲಿ.....ಇನ್ನೊಬ್ಬರಿಗೆ ಬರೆಯಲು ಹೇಳಿಕೊಡುತಿದ್ದಳು ಎನಿಸುತ್ತದೆ.... ನಿಜ ಹೇಳಬೇಕೆಂದರೆ ಆ ನೋಟ್ ಬುಕ್ ಅವಳದ್ದು ಆಗಿರದೇ ಇರಬಹುದು! ನೋಡಲೆಂದು ಇನ್ನಾರದ್ದೋ ತಂದಿರಲೂ ಬಹುದು! ಅದೇ ಕಾರಣದಿಂದ ಪ್ರತೀ ಕ್ಲಾಸು ಮುಗಿದ ಕೂಡಲೇ ಅವಳು ಕಾಣಿಸುತ್ತಾಳೋ ಎಂದು ಹೋದೆ ಹಾಗೆಲ್ಲ ಬೇರೆಯವರ ಕೈಯಲ್ಲಿ ಕೊಡುವ ಮನಸ್ಸಾಗಲಿಲ್ಲ ಅಷ್ಟಕ್ಕೇ ನನ್ನ ಮೇಲೇ ಸಂಶಯ ಪಟ್ಟು ಪ್ರಿನ್ಸಿಪಾಲ್ ಗೆ ಕಂಪ್ಲೈಂಟ್ ಕೊಟ್ಟು ಬಿಟ್ಟಳು. "

"ಹಾಗಾದ್ರೆ..ಹಾಗಾದ್ರೇ...ನೀನಾ ನೋಟ್ ಬುಕ್ ಪ್ರಿನ್ಸಿಪಾಲ್ ಗೆ ಕೊಟ್ಟು ಬಿಟ್ಟೆಯಾ?"ಈಗ ಉಸಿರು ಕಟ್ಟಿಕೊಂಡದ್ದು ನನಗೆ.

"ಹೌದು...ಅದನ್ನು ಅವಳ ಕೈಗೇ ಕೊಡಬೇಕೆಂದೇ ಹುಡುಕಿ ಹೋದೆ ಎಂಬ ಸತ್ಯ ಸಂಗತಿಯನ್ನು ಪ್ರಮಾಣ ಮಾಡಿ ಹೇಳಿದೆ "

"ಅವಳೇನೆಂದಳು ಆಗ?"

"ನಿಜ ಸಂಗತಿ ಏನೆಂದರೆ ನಾನು ಆ ನೋಟು ಬುಕ್ ಪ್ರಿನ್ಸಿಪಾಲ್ ಎದುರು ಹಿಡಿಯುವ ವರೆಗೂ ಅವಳಿಗೆ ತಾನು ಕಳೆದುಕೊಂಡದ್ದು ತಿಳಿದಿರಲೇ ಇಲ್ಲ. ನೋಡುತ್ತಲೇ ಬಿಳಿಚಿಕೊಂಡು ನಡುಗಲಾರಂಭಿಸಿದಳು" ಎಂದು ನಕ್ಕ.

"ಹಾಗಾದ್ರೆ ನಿನ್ನ ಬಳಿ ಆ ಮೇಲೆ ಕ್ಷಮೆ ಕೇಳಿದಳೇ? ನನಗೆ ಈ ಬಗ್ಗೆ ತಿಳಿಯುವ ಕುತೂಹಲವಿತ್ತು, ಯಾಕೆಂದರೆ ನಾವು ಕ್ಲಾಸ್ ಮೇಟ್ಸ್ ಈ ಘಟನೆಯಿಂದಾಗಿ ಬೇರೆ ವಿದ್ಯಾರ್ಥಿನಿಯರ ಗಾಸಿಪ್ ಗೆ ತುಂಬಾ ದಿನಗಳ ತನಕ ಗುರಿಯಾಗಿದ್ದೆವು.

ಈಗ ಮಾತ್ರ ಅವನು ತುಸು ವ್ಯಗ್ರಗೊಂಡಂತನಿಸಿತು.

"ಎಲ್ಲಿ,? ಅವಳೆಲ್ಲಿ ಕೇಳಿದ್ದಳು?...ನಾಲ್ಕೈದು ದಿನ ಕಾಲೇಜಿಗೇ ಬಂದಿರಲಿಲ್ಲ. ಆ ದಿನ ನೀನು ನೋಡುವಾಗ ನನ್ನ ಫ್ರೆಂಡ್ಸ್ ಕೆಲವರು ಅವಳಿಗೆ ಕಿಂಡಲ್ ಮಾಡುತ್ತಿದ್ದರು.ನಿಜವಾಗಲೂ ಆವತ್ತು ನಾನು ಅವರೊಂದಿಗಿರಲಿಲ್ಲ. ಕೊನೆಗೊಮ್ಮೆ ,ಅವಳ ಅಣ್ಣನೋ, ಯಾರೋ ನನ್ನನ್ನು ಹುಡುಕಿ ಬಂದ. ಕ್ಷಮೆ ಕೇಳಿ, ಹುಡುಗರು ಅವಳಿಗೆ ಕೊಡುತ್ತಿದ್ದ ಉಪಟಳ ನಿಲ್ಲಿಸುವಂತೆ ಬೇಡಿಕೊಂಡ.

ಈ ಮಾತಿಗೆ ಕಿಸಕ್ಕನೆ ನಕ್ಕಿದ್ದು ಅವನ ಹೆಣ್ಣು ಮಕ್ಕಳೇ! ನಾನು ಅವರಿಬ್ಬರ ಕಡೆ ನೋಡಿದೆ. ಇಬ್ಬರೂ ತಮ್ಮ ಅಪ್ಪನನ್ನೇ ಮೆಚ್ಚುಗೆಯ ದೃಷ್ಟಿಯಿಂದ ನೋಡುತ್ತಿದ್ದರು. ಆ ಎರಡು ಜೋಡಿ ಕಣ್ಣುಗಳಲ್ಲಿ ತಮ್ಮ ಅಪ್ಪನ ಬಗ್ಗೆ ಅಪಾರ ಪ್ರೀತಿಯಿತ್ತು;ಉಕ್ಕಿ ಹರಿಯುವ ಅದ್ಭುತ ಅಕ್ಕರೆಯಿತ್ತು; ಅಸದಳ ಅಭಿಮಾನವಿತ್ತು! ಬೃಹದಾದ ಅಚ್ಚರಿಯೋ ಎಂಬಂತೆ ಆ ಎಲ್ಲ ಪ್ರೀತಿ, ಅಕ್ಕರೆ, ಅಭಿಮಾನಗಳೇ ಅವರ ಅಪ್ಪನಿಗೆ ಜೀವ ದ್ರವ್ಯವಾಗಿ ಅಂಥಹ ಅಸಹಾಯಕ ಬದುಕಿನಲ್ಲೂ ಕೈ ಹಿಡಿದು ಕ್ಷಣ ಕ್ಷಣಕ್ಕೂ ಗೌರವಯುತವಾಗಿ ಮುನ್ನಡೆಸುತಿತ್ತು;

.ಅಷ್ಟೇ ಅಲ್ಲ ,ನನಗೆ ಮುಂದಿನೊಂದು ಲೇಖನಕ್ಕೂ ಅದು ನಾಂದಿ ಹಾಡಿತು.

13. ರೇಣುಕಾ ದೇಸಾಯಿ



ಈಗ ನಾನು ಪ್ರಸ್ತುತಿ ಪಡಿಸುತ್ತಿರುವ ಕವನ ಬರೆಯಲು ಕಾರಣವಾದ ಪೀಠಿಕೆ ಇದಾಗಿದೆ , ವಿಶ್ವವಾಣಿ ಕನ್ನಡ ದಿನಪತ್ರಿಕೆಯ ಅಂಕಣಕಾರರಾದ ಶ್ರೀವತ್ಸ ಜೋಶಿಯವರು ಜೂನ್ 11 2023ರ ಸಂಚಿಕೆಯ ಅಂಕಣ ಬರಹದಲ್ಲಿ , ಗುರು ವಿರದ ವಿಷಯದಲ್ಲಿ ಲಘು ಬಗೆಯ ಹರಟೆ ಇದು ಎನ್ನುವುದಾಗಿತ್ತು. ಲಘು ಎನ್ನುವ ಶಬ್ದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನ ಕನ್ನಡ ನಿಘಂಟುವಿನಲ್ಲಿ 26 ಅರ್ಥಗಳನ್ನು ಕೊಟ್ಟಿದ್ದಾರೆ ಎಂದು ಬರೆಯುತ್ತಾ ಕರ್ನಾಟಕದ ನಾನಾ ಭಾಗದಲ್ಲಿ ಲಘು ಎನ್ನುವ ಶಬ್ದ ಹೇಗೆ ಹೇಗೆ ಬಳಸುತ್ತಾರೆ ಎನ್ನುವ ಸ್ವಾರಸ್ಯಕರ ಅಂಕಣ ಬರಹ ಇದಾಗಿತ್ತು ಹಾಗೇನೆ ಸಾಹಿತ್ಯ ಸಂಗೀತ ಮತ್ತು ಧರ್ಮದಲ್ಲಿ ಲಘು ಎನ್ನುವ ಶಬ್ದದ ಅರ್ಥ ವಿವರಣೆ ಕೊಡುತ್ತಾ ಛಂದಸ್ಸಿನ ಲಘು ಮಾತ್ರೆ ಬಗೆಗೆ ಬರೆಯುತ್ತ ಓದುಗರ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಕೆಲವು ಚಟುವಟಿಕೆಗಳನ್ನು ಕೊಟ್ಟಿದ್ದರು, ಕರ್ನಾಟಕದ 31 ಜಿಲ್ಲೆಯಲ್ಲಿ ಲಘು ಅಕ್ಷರದಲ್ಲಿ ಹೆಸರು ಇರುವ ಜಿಲ್ಲೆಗಳನ್ನು ಬರೆದು ಕಳಿಸಿ, ಇಲ್ಲ ಸರ್ವ ಲಘು ಅಕ್ಷರಗಳಲ್ಲಿರುವ ಕನ್ನಡ ಚಲನಚಿತ್ರದ ಹೆಸರುಗಳು ಪಟ್ಟಿಮಾಡಿ ಬರೆದು ಕಳಿಸಿ, ಅಥವಾ ಲಘು ಅಕ್ಷರದಲ್ಲಿ ಕವನ ಇಲ್ಲವೇ ವಾಕ್ಯಗಳನ್ನು ಬರೆದು ಕಳಿಸಿ ಎಂದು ಹೇಳಿದ್ದರು ಅದರಲ್ಲಿ ಭಾಗವಹಿಸುವ ಸಲುವಾಗಿ ಈ ಕವನ ಬರೆದಿದ್ದೆ ಸುಮಾರು 20 ಜನ ಕಾವ್ಯಾಸಕ್ತರು ಕವನ ಮತ್ತು ವಾಕ್ಯಗಳನ್ನು ಬರೆಯುವುದರಲ್ಲಿ ಭಾಗವಹಿಸಿದ್ದರು, ಸುಮಾರು ಜನ ಲಘು ಅಕ್ಷರದ ಜಿಲ್ಲೆಗಳ ಹೆಸರನ್ನು ಬರೆದು ಕಳಿಸಿದ್ದರು, ಒಂದು ನೂರು ಚಲನಚಿತ್ರಗಳ ಹೆಸರನ್ನು ಕಳಿಸಿದ್ದರು ಅದಕ್ಕಿಂತ ಮೇಲಾಗಿ ಅಂಕಣ ಬರಹವನ್ನು ಓದಿದ ಶತಾವಧಾನಿ ಡಾ. ರಾ. ಗಣೇಶ್ ಅವರು ಸರ್ವಲಘುವಿಗೆ ಸಂಬಂಧಿಸಿದಂತೆ ಒಂದು ವಿಶೇಷ ಮಾಹಿತಿಯನ್ನು ಒದಗಿಸಿದ್ದರು ಅದನ್ನು ಈ ವೇದಿಕೆಯಲ್ಲಿರುವವರಿಗೆ ಹಂಚಿಕೊಳ್ಳುವ ಅಭಿಲಾಷೆಯಿಂದ ಈ ವಿವರಣೆ ಬರೆದಿರುವೆ ಅದೇನೆಂದರೆ ಸಂಸ್ಕೃತದಲ್ಲಿ ಭಾಸ್ಕರಾಚಾರ್ಯ ತ್ರಿಪಾಟಿ ಎಂಬುವವರು 'ಲಘು-ರಘು' ಎಂಬ ಹೆಸರಿನ ರಾಮಾಯಣ ಕಾವ್ಯ ಬರೆದಿದ್ದಾರೆ ಅದರಲ್ಲಿ ಲಘು ಗಳನ್ನಷ್ಟೇ ಬಳಸಿದ್ದಾರೆ ಅದರಲ್ಲೂ ಸಂಸ್ಕೃತದಲ್ಲಿ

ಹ್ರಸ್ವ 'ಎ' ಮತ್ತು ಹ್ರಸ್ವ' ಒ' ಇಲ್ಲ ಎಂಬುವದನ್ನು ಗಮನಿಸಿದರೆ ಇದು ನಿಜಕ್ಕೂ ಅತಿ ಶ್ರೇಷ್ಠ ಸಾಧನೆ. ಭಾಸ್ಕರಾಚಾರ್ಯ ತ್ರಿಪಾಠಿ ಅವರು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತರು. 'ಲಘು-ರಘು' ಕಾವ್ಯ ಕನ್ನಡದಲ್ಲಿ ಇದ್ದಿದ್ದರೆ ಓದುವ ಅಭಿಲಾಷೆ, ಕುತೂಹಲ ನನ್ನಲ್ಲೂ ಮೂಡಿತು. ಇನ್ನು ನನ್ನ ಕವನದ ಕಡೆಗೆ ಗಮನಹರಿಸಬೇಕೆಂದು ನಿಮ್ಮಲ್ಲಿ ಕೇಳುತ್ತಾ ನನ್ನ ಕವನದ ತಲೆಬರಹ 'ಲಘುಬಗೆಯ ಬದುಕು' ಲಘು ಅಕ್ಷರಗಳಲಿ ಬರೆದ ೧೮ ಮಾತ್ರೆಗಳಿರುವ ಚೌಪದಿ.

ಲಘುಬಗೆಯ ಬದುಕು

ಅರಸನ ಮನೆಯಿರಲಿ ಮನೆ ಬಡವನದಿರಲಿ
ಸುಖವು ಅಡಗಿರಲು ಅದರಲಿ ಶಿವನಿರುವನು
ಮನೆ ಮನದಿ ಖುಷಿ ಇರಲು ಶಿವನಸುತನಿರುವ
ಇದುವೆ ಪಸರಿಸಲಿ ಮನೆಮನದಲಿ ಅನವರತ

ಸರಸವದು ಸಲಿಲದಲಿ ಮನದಲಿ ಹರಿಯಲಿ
ಭವದ ಹಣೆಬರಹ ಬಿಡಲು ಜಗದೊಡೆಯನಲಿ
ನಗುವು ಭುವನದಲಿ ಮೊಳಕೆಯೊಡೆದು ಬೆಳೆಯಲಿ
ಬಗೆ ಬಗೆಯ ಯಶವ ತರುವ ಕನಸುಗಳಿರಲಿ


ಅರಸುತಲಿರು ಬೆಳಕನು ಅರಿವಿನ ಬನದಲಿ
ಮರಳುಗೊಳಿಸುವ ಜಗವು ಇರುತಿರೆ ಬದುಕಲಿ
ಮರೆಯದೆಲೆ ಅನುಗೊಳಿಸು ಮನವ ಅನುದಿನವು
ವಿಕಸನದ ಹೊಸ ವಿಷಯಗಳ ಮಿಲನವಿರಲಿ

ಸಮಯವದು ಚಲಿಸುವದು ನಿಲದಲೆ ಅನುದಿನ
ಅದ ತಿಳಿಯದಲೆ ಹರಣ ಗೊಳಿಸದಿರು ಸಮಯ
ಹಣದ ತೆರದಲಿ ಬಳಸಲದುವೆ ಹಿರಿ ಸಮಯ
ಜಗದ ಜಗಲಿಯಲಿ ಬಿಗಿ ನಡಿಗೆ ನಡೆಯುತಿರು

ಸಮರಸದಲಿ ಬದುಕು ತರುಲತೆಗಳ ಸೊಬಗು
ಕಳವಳದ ಮನದಲಿ ಸುಖವಿರದು ದಮನಿಸು
ಎದೆಯಲಡದಗಿದನು ನುಡಿಯಲು ಸುಖವಿರದು
ಒಳಿತು ನುಡಿಯಲಿ ಜಗದ ಒಳಿತಿದೆ ಅದರಲಿ

ಮಿತಿಯಿರಲಿ ಬದುಕಲಿ ಮತಿಯಿರಲಿ ಮನದಲಿ
ಸತಿಸುತರ ಅನುನಯಿಸೆ ಮನವ ಸುಖವಿಡಲು
ಸಹನೆಯ ಮನದಲಿ ಹರಹರಿಯನು ನೆನೆಯುತ
ಭುವನದಲಿ ಮನುಜ ತಲುಪುವನು ಸರಿ ಗುರಿಯ

14. ಮಾಲತಿ ಶ್ರೀನಿವಾಸನ್



ನಿಜ ಜೀವನದ ಪಯಣ

ಮನದ ಭಾವಕ್ಕೆ ಕಲ್ಪನೆಯ ರೆಕ್ಕೆ ಹಚ್ಚಿ
ಪಾತ್ರಗಳ ಸನ್ನಿವೇಶಗಳ ಸೃಷ್ಟಿಸಿ,
ಆಗುಹೋಗುಗಳ ಒಳಿತು ಕೆಡುಕುಗಳ
ಮನಕೆ ತೋಚಿದಂತೆ ವಿಶ್ಲೇಷಿಸಿ,
ಪಾತ್ರಗಳನ್ನು ನಿನ್ನ ಇಚ್ಛಾನುಸಾರ ಎಳೆದಾಡಿ,
ನೀ ಕಥೆ ಬರೆದಷ್ಟು ಸುಲಭವಲ್ಲ
ಈ ನಿಜ ಜೀವನದ ಪಯಣ.

ನಾಟಕದ ಬಾಳು ನಿಜ ಜೀವನ,
ಪಾತ್ರಗಳ ಹಿಡಿದಿಹ ಸೂತ್ರಧಾರ
ಅಗೋಚರ ಅಡಗಿಹನು ನಿಗೂಢತೆಯಲಿ
ಕರ್ಮ ಸಂಘಟನೆಯೋ, ಹಣೆಬರಹ ,
ಹಿಡಿತ ನಿಯಂತ್ರಣ ಅವನಲ್ಲಿ,
ಬರಿ ಕುಣಿತ ಪರದಾಟ ನಿನಗಿಲ್ಲಿ.

ಪ್ರತಿಕಂತಿಗೂ ಅವನದೇ ಆಯಾಮ
ಏಳುಬೀಳುಗಳ ನಿಯಮ, ಪ್ರತಿ
ಹಂತದಲಿ ಸಮಯದ ಪರಿಧಿಯುಂಟು,
ನಿನ್ನವಸರಕೆ ಕಥೆಯ ಓಡಿಸಲಾಗದು
ಬಾಳ ಪಯಣದಲಿ.

ಮುಂದಿನ ಹಾದಿಯಲಿ ಸಮತಟ್ಟು

ನೆಲವೋ ಹಳ್ಳಕೊಳ್ಳ ಕೊರಕಲುಗಳ
ಜಾಲವೋ, ಪ್ರತಿ ಹೆಜ್ಜೆಯ ತಿರುವಿನಲು
ಕುತೂಹಲ ,ಹೆಜ್ಜೆ ಹಿಮ್ಮುಖವಾಗುವುದು
ಅಸಾಧ್ಯ, ಮುಂದೆ ಸಾಗುವಿಕೆ
ಅನಿವಾರ್ಯ.

ಸಂತಸದ ಭಾವವೋ ನಿರಾಸೆ ದುಃಖ
ಖಿನ್ನತೆಯ ಕಾರ್ಮೋಡವೋ, ಆಯ್ಕೆ
ನಿನ್ನದು, ನಿನ್ನ ಪಾಲಿನದು ನಿನಗೆ
ಹಂಚುವುದು ಅವನ ಮೋಜಿನಾಟ
ನೀ ಪಾತ್ರಧಾರಿ ಅವಸೂತ್ರಧಾರಿ
ನಿರ್ವಹಣೆ ಅನಿವಾರ್ಯ.

ನೀ ಕಥೆ ಬರೆದಷ್ಟು ಸುಲಭವಲ್ಲ
ಈ ನಿಜ ಜೀವನದ ಪಯಣ.

ಶಿಲೆಯಲ್ಲ ಕಲೆಯ ಬಲೆಯು

ಶಿಲೆಯಲ್ಲವೀ ಶಿಖರಗಳು ಕಲೆಯ ಬಲೆಯೋ,
ಸೃಷ್ಟಿಕರ್ತನ ಕೈಚಳಕದಾ ಜಾಲವೋ
ಆ ದೇವ ನೆಲೆಸಿರುವ ಭವ್ಯ ತಾಣವೋ?



ಭೂಮಿ ಆಕಾಶವನು ಒಂದಾಗಿಸಿಹ
ಪರ್ವತ ಶ್ರೇಣಿ , ಸಹಸ್ರಾರುವರುಷ
ಪ್ರಕೃತಿಯ ಉಳಿಪೆಟ್ಟು ಸಹಿಸಿ ಮಂಜಿನ
ತೀಕ್ಷ್ಣತೆಗೆ ನೀರಿನ ಹರಿವಿಗೆ ಮೈಯೊಡ್ಡಿ
ಬೃಹತ್ ಶಿಲೆಗಳ ಪದರುಗಳಲ್ಲಿ ಅರಳಿ
ನಿಂತ ಅಪೂರ್ವಕಲೆ ವಿನ್ಯಾಸ ,ನೋಡಿದಷ್ಟು
ಮೈ ಮನ ತಣಿಸುವ ಸೊಬಗು,
ವಿವಿಧ ಬಣ್ಣದಾ ಬೆಡಗು.
ಶಿಲೆಗಳು ಸಂಗೀತ ಹಾಡಿವೆ ವೆಂದ
ಒಬ್ಬ ಕವಿ , ಈ ಶಿಲೆಗಳಲಿ ಪ್ರಕೃತಿ
ಭೂತಾಯಿಯ ಮಡಿಲ ಪದರುಗಳ

ಇತಿಹಾಸ ತೆರೆದಿಟ್ಟು, ಇದಾಗಿಹುದು
ಭೂಶಾಸ್ತ್ರಜ್ಞರ ಗುರುಕುಲ
ಜ್ಞಾನಾರ್ಜನೆಯ ಕರ್ಮಭೂಮಿ.

ನೇಸರನ ಪಥ ಬದಲಾದಂತೆ
ಶಿಲೆಗಳ ಕುಸುರಿ ವಿನ್ಯಾಸದ ಬಣ್ಣ ಬದಲಾವಣೆ,
ಕೆಂಪು ಹಳದಿ ಹೊಂಬಣ್ಣದ ರಂಗಿನಾಟ.ನಡುವೆ
ಬಳುಕುತ ಜಲರಾಶಿ ಚಿಮ್ಮಿಸಿದೆ ಬಣ್ಣದಾರತಿಯ ಒಕಳಿಯಾಟ.

ಮುಂಜಾನೆಯ ಚುಮುಚುಮು
ನೇಸರನ ಆಗಮನ ಸರಿಸೆ,
ಸುಡು ಬಿಸಿಲ ಬೇಗೆ,
ತಣ್ಣನೆಯ ಶಿಲೆಗಳ ಸ್ಪರ್ಶ
ಸಾಂತ್ವನ, ಸುತ್ತೆಲ್ಲ ಮರುಭೂಮಿಯಲು
ಹಸಿರ ಹಬ್ಬಿಸುವ ಸಸ್ಯ ರಾಶಿಯ
ಸೋಜಿಗದ ಅನಾವರಣ.
ಮುಸ್ಸಂಜೆ ನೇಸರನ ನಿರ್ಗಮನ
ಚಳಿ ಕೊರತ ಮಂಜಿನಾವರಣ

ಬೃಹತ್ ಶಿಲೆಗಳ ಸಾಲಿನಲಿ ಕೇಶವನ
ವಿಶ್ವರೂಪದ ದರುಶನ,ದಶಾವತಾರದ
ಸೊಬಗು, ಲಿಂಗ ರೂಪಿ ಶಿವನ ನರ್ತನ
ಸಹಸ್ರಾರು ದಸರಾ ಬೊಂಬೆಗಳ
ವಿನೂತನ ಪ್ರದರ್ಶನ. ಕವಿ ಕಲ್ಪನೆಗೆ
ಮನತಣಿಯದಷ್ಟು ಬೇಸರಿಸಿದಷ್ಟು
ವೈವಿಧ್ಯತೆಯ ಹೂರಣ.

ಅದ್ಭುತ ಸೋಜಿಗದ ತಾಣ,
ಸೃಷ್ಟಿಕರ್ತನ ಬೃಹತ್ತಿನ
ಮನುಜನ ಅಲ್ಪತೆಯ
ಅರಿವು ಮೂಡಿತ್ತು ಮನಕೆ .

15. ಪೋಲೇನಹಳ್ಳಿ ರಮೇಶ್



ಕಲ್ಲು-ಕತೆ

(ಎರಡು ಸಣ್ಣ ಜಾನಪದ ಕತೆಗಳು)

ಅಲ್ಲೆರಡು ಸಣ್ಣ ದ್ವೀಪಗಳು. ಅವು ಪರಸ್ಪರ ಸಮೀಪವೇ ಇವೆ. ಈ ದ್ವೀಪದಲ್ಲಿ ನಿಂತು ನೋಡಿದರೆ ಆ ಇನ್ನೊಂದು ದ್ವೀಪ ಕಾಣುತ್ತದೆ. ಜೋರಾಗಿ ಕೂಗಿದರೆ ಅಲ್ಲಿಗೆ ಕೇಳಬಹುದೇನೋ ಎನ್ನುವಷ್ಟು ಹತ್ತಿರ. ನಡುವೆ ಬೇರ್ಪಡಿಸುವ ಕಡಲು. ಕಡಲ ತೀರದಲ್ಲಿ ಕಡಿದಾದ ಗೋಡೆಯಂತೆ ನಿಂತ ಕಲ್ಲುಗಳ ರಾಶಿ. ಎರಡೂ ದ್ವೀಪಗಳ ತುಂಬ ಹಸಿರು, ಮರ-ಗಿಡಗಳು. ಎಲ್ಲೆಡೆ ಬೆಟ್ಟಗುಡ್ಡ, ಸರೋವರಗಳಿಂದ ಆವೃತಗೊಂಡ ಪ್ರದೇಶ. ಎರಡು ದ್ವೀಪಗಳೂ ಪ್ರಕೃತಿ ದೇವಿಯ ತವರೂರಿನಂತಿವೆ.

ಬಹಳ ಹಿಂದೆ, ಈ ದ್ವೀಪದಲ್ಲಿ ಒಬ್ಬ ದೈತ್ಯ ಇದ್ದನಂತೆ. ಆ ಬದಿಯ ದ್ವೀಪದಲ್ಲಿ ಮತ್ತೊಬ್ಬ ದೈತ್ಯ. ಅವರಲ್ಲಿ ಪರಸ್ಪರ ದ್ವೇಷ ಹೊಗೆಯಾಡುತ್ತಿತ್ತು. ಈ ದ್ವೀಪದ ದೈತ್ಯನಿಗೆ ಆ ದ್ವೀಪದ ದೈತ್ಯನ ಬಗ್ಗೆ ತಿಳಿಯಲು ಸದಾ ಕಾತುರ, ಭಯ, ಆತಂಕ. ಅವನನ್ನು ಗೆದ್ದು ಎರಡೂ ದ್ವೀಪಗಳನ್ನು ತನ್ನದಾಗಿಸಿಕೊಳ್ಳುವುದಕ್ಕೆ ತವಕ. ಹೀಗಾಗಿ, ಒಂದು ಸೇತುವೆಯನ್ನು ನಿರ್ಮಿಸಿಕೊಂಡು ಪಕ್ಕದ ದ್ವೀಪಕ್ಕೆ ಮೆಲ್ಲನೆ ಕದ್ದು ಕಾಲಿಟ್ಟು ಅಲ್ಲಿನ ದೈತ್ಯನ ಬಗ್ಗೆ ತಿಳಿಯಬಯಸುತ್ತಾನೆ. ಹಾಗೆ ಅಲ್ಲಿಗೆ ಹೋದಾಗ ಅವನಿಗೆ ಅಲ್ಲಿನ ದೈತ್ಯನ ಎತ್ತರ, ಗಾತ್ರ, ರೂಪ ನೋಡಿ ಇವನ ಜಂಘಾಬಲವೇ ಉಡುಗಿತು. ಕೂಡಲೇ ಅಲ್ಲಿಂದ ಕಾಲುಕಿತ್ತ. ಓಡುತ್ತಾ ಓಡುತ್ತಾ ತನ್ನ ದ್ವೀಪ ಸೇರಿದ. ಮನೆ ಸೇರಿ ಹೆಂಡತಿಗೆ ಎಲ್ಲವನ್ನೂ ಹೇಳಿದ. ಅವನ ಹೆಂಡತಿ ಜಾಣೆ ಇದ್ದಳು. ಧೈರ್ಯಕಳೆದು ಕೊಳ್ಳುವವಳಲ್ಲ. ಗಂಡನಿಗೆ ಮಗುವಿನಂತೆ ಅಲಂಕರಿಸಿ ಒಳಗೆ ಕೋಣೆಯಲ್ಲಿ ಮಲಗಿಸಿಬಿಟ್ಟಳು.

ಆ ವೇಳೆಗೆ ಈ ದೈತ್ಯನ ಸುಳಿವು ಸಿಕ್ಕು ಆ ಬದಿ ದ್ವೀಪದ ಆ ದೈತ್ಯ ಇಲ್ಲಿಗೆ ಬರುತ್ತಾನೆ. "ಎಲ್ಲಿ ಅವನು" ಎನ್ನುತ್ತಾನೆ. ಈ ದೈತ್ಯನ ಹೆಂಡತಿ ಅವನನ್ನು ನೋಡಿ ವಿಚಲಿತಳಾಗುವುದಿಲ್ಲ. ಸಮಾಧಾನದಿಂದ ಹೇಳುತ್ತಾಳೆ. "ಅವನು ದನಗಳನ್ನು ನೋಡಿಕೊಂಡು ಬರಲು ಹೋಗಿದ್ದಾನೆ. ಕುಳಿತುಕೋ " ಎನ್ನುತ್ತಾಳೆ. ಅವನು ಚಡಪಡಿಸುತ್ತಾನೆ.

"ಒಳಗೆ ಬಂದು ಆರಾಮ ಕೂತು ಸ್ವಲ್ಪ ಚಹಾ ಕುಡಿ. ನಮ್ಮ ಮಗ ಮಲಗಿದ್ದಾನೆ ನೋಡು ಮಾತನಾಡಿಸು ಬಾ" ಎನ್ನುತ್ತಾಳೆ. ದೈತ್ಯ ಒಳಬಂದು ನೋಡುತ್ತಾನೆ. ಅವನಿಗೆ ಗಾಬರಿಯಾಗುತ್ತದೆ. ಮಗುವೇ ಇಷ್ಟು ದಷ್ಟ ಪುಷ್ಟವಾಗಿರಬೇಕಾದರೆ ಈ ಮಗುವಿನ ತಂದೆಯ ಬೃಹತ್ ರೂಪ ಎಂತಹದಿರಬಹುದು ಎಂದು ಕಲ್ಪಿಸಿಕೊಂಡು ಅಲ್ಲಿಂದ ಕಾಲು ಕೀಳುತ್ತಾನೆ. ಹೋಗುವಾಗ ಮಧ್ಯೆ ಇದ್ದ ಸೇತುವೆಯನ್ನು ಕೆಡವುತ್ತಾನೆ. ಮತ್ತೆಂದೂ ಅವನು ಹಿಂತಿರುಗಲಿಲ್ಲ. ಇಬ್ಬರೂ ದೈತ್ಯರು ಅನಂತರ ಪರಸ್ಪರ ಕಿತ್ತಾಡದೆ ತಮ್ಮ ತಮ್ಮ ನೆಲೆಗಳಲ್ಲಿ ಉಳಿಯುತ್ತಾರೆ.

ಇದೇ ದ್ವೀಪಗಳ ನಡುವೆ ಮತ್ತೊಂದು ಸ್ವಾರಸ್ಯಕರ ಜಾನಪದ ಕತೆ ಸಹ ಇದೆ. ಬಹುಶಃ ಯಾರೋ ಭಗ್ನ ಪ್ರೇಮಿ ಇದನ್ನು ಬರೆದಿದ್ದಿರಬಹುದು.

ಈ ದ್ವೀಪದಲ್ಲಿ ಇದ್ದವ ರಾಕ್ಷಸ ರೂಪಿ ದೈತ್ಯ ಅಲ್ಲ. ಸುಂದರ ಹಾಗೂ ಅತಿ ಧೈರ್ಯಶಾಲಿ ಯುವಕ. ಅವನ ಪ್ರೇಯಸಿ ಆ ಬದಿಯ ದ್ವೀಪದಲ್ಲಿ ಇದ್ದಾಳೆ. ಅವಳನ್ನು ಸೇರುವ ಕಾತುರ ಇವನಿಗೆ. ಮಧ್ಯೆ ಕಡಲು. ಅವಳನ್ನು ಹೇಗಾದರೂ ಮಾಡಿ ಭೇಟಿಯಾಗಲು ಸೇತುವೆ ಕಟ್ಟಲು ಆರಂಭಿಸುತ್ತಾನೆ. ಈ ಯುವಕನ ಅಜ್ಜಿಗೆ ವಿಷಯ ತಿಳಿದು ಚಿಂತೆಗೊಳಗಾಗುತ್ತಾಳೆ. ಇರುವ ಒಬ್ಬನೇ ಮೊಮ್ಮಗ ಆ ದ್ವೀಪಕ್ಕೆ ಹೋಗಿಬಿಟ್ಟು ಅವನ ಪ್ರೇಯಸಿಯೊಡನೆಯೇ ಉಳಿದುಬಿಡುವ ಭಯ ಅವಳನ್ನು ಕಾಡುತ್ತದೆ. ಅವಳು ಮಂತ್ರಗಾತಿಯೊಬ್ಬಳನ್ನು ಬಳಸಿಕೊಂಡು ತನ್ನ ಮೊಮ್ಮಗ ಪ್ರತಿದಿನ ಕಟ್ಟುವ ಸೇತುವೆಯನ್ನು ರಾತ್ರಿಯ ಹೊತ್ತು ಬಿರುಗಾಳಿ ಎಬ್ಬಿಸಿ ಕೆಡವಿಸುತ್ತಾ ಹೋಗುತ್ತಾಳೆ. ಅವನು ಹಗಲು ಸೇತುವೆ ಕಟ್ಟುತ್ತಾನೆ ಮಂತ್ರಗಾತಿ ಬಿರುಗಾಳಿಯಂತೆ ಬಂದು ರಾತ್ರಿಗೆ ಅದನ್ನು ಕೆಡವುತ್ತಾಳೆ. ಅವನು ಹಗಲು ಕಟ್ಟುತ್ತಾನೆ ರಾತ್ರಿಗೆ ಅದು ಬೀಳುತ್ತದೆ. ಕೊನೆಗೊಂದು ದಿನ ಆ ಯುವಕ ಹಗಲಿಡೀ ಕಷ್ಟಬಿದ್ದು ಸೇತುವೆಯನ್ನು ಏಕದಿನದಲ್ಲಿ ಕಟ್ಟಿ ಮುಗಿಸುತ್ತಾನೆ. ಧಣಿಯುತ್ತಾನೆ. ಆದರೂ ಏದುಸಿರು ಬಿಡುತ್ತಾ ತನ್ನ ಪ್ರೇಯಸಿಯನ್ನು ಸೇರಿ ಕುಸಿಯುತ್ತಾನೆ. ಅವಳ ತೊಡೆಯ ಮೇಲೆ ತಲೆ ಇಟ್ಟು ಅಸುನೀಗುತ್ತಾನೆ. ಆ ವೇಳೆಗೆ ಮಂತ್ರಗಾತಿ ಸೇತುವೆಯನ್ನು ನಾಶಮಾಡಿರುತ್ತಾಳೆ. ಅಜ್ಜಿಗೆ ಆಘಾತವಾಗುತ್ತದೆ. ಎತ್ತರದ ಗುಡ್ಡದ ತುದಿ ಏರಿ ಎಲ್ಲವನ್ನೂ ನೋಡುತ್ತಾಳೆ. ಮೊಮ್ಮಗ ಕೊನೆಗೂ ಕಳೆದುಹೋಗಿದ್ದಾನೆ. ದುಃಖದಲ್ಲಿ ಮುಳುಗುತ್ತಾಳೆ. ಅಲ್ಲಿಯೇ ಕಲ್ಲಾಗಿ ನಿಲ್ಲುತ್ತಾಳೆ.

ಈ ಎರಡೂ ಜಾನಪದ ಕತೆಗಳು ಐರ್ಲೆಂಡ್ ಮತ್ತು ಸ್ಕಾಟ್ ಲ್ಯಾಂಡ್

ಗಳಿಗೆ ಸೇರಿದವು. ಇವುಗಳ ಬಗ್ಗೆ ಅಲ್ಲಿ ಬಹಳಷ್ಟು ಬರೆಯಲಾಗಿದೆ. ಅಂದಿನ ದೈತ್ಯರ ಚಿತ್ರಗಳು ಅಲ್ಲಲ್ಲಿ ಕಾಣಸಿಗುತ್ತವೆ. ಬೆಲ್ಫಾಸ್ಟ್ ಏರ್ಪೋರ್ಟ್ ನಲ್ಲಿ ಇಳಿಯುತ್ತಿದ್ದಂತೆ ಕಾಣುವುದು ಈ ಐರಿಷ್ ದೈತ್ಯನ ಚಿತ್ರವೇ. ಅವನ ಹೆಸರು ಫ್ಲಿನ್ ಮಾಕ್ ಕೂಲ್ . ಸ್ಕಾಟ್ಲೆಂಡಿನ ಕಡೆಯ ದೈತ್ಯನ ಹೆಸರು ಬೆಣಂದೊಣ್ಣೇರ್

ಈ ಎರಡೂ ದ್ವೀಪಗಳ ನಡುವೆ ಅಟ್ಲಾಂಟಿಕ್ ಸಾಗರವಿದೆ. ಎರಡೂ ಕಡೆ ತೀರದ ಉದ್ದಕ್ಕೂ ಕಲ್ಲುಗಳು ಕಡಿದಾದ ಗೋಡೆಯಾಗಿ ನಿಂತಿವೆ. ಕೆಲವೆಡೆ ೩೦ ಅಡಿಗಳಿಗೂ ಎತ್ತರ ನಿಂತಿವೆ. ಈ ಕಲ್ಲುಗಳು ಕಳೆದ ೨೦೦ ವರ್ಷಗಳಿಂದ ಭೂ ವಿಜ್ಞಾನಿಗಳಿಗೂ ಸಹ ವಿಸ್ಮಯವಾಗಿ ಕಂಡಿವೆ. ಸುಮಾರು 50 ರಿಂದ 60 ಮಿಲಿಯನ್ ವರ್ಷಗಳ ಹಿಂದೆ, ಪ್ಯಾಲಿಯೊಸೀನ್ ಯುಗದಲ್ಲಿ, ಈ ಭೂ ಭಾಗದಲ್ಲಿ ತೀವ್ರವಾದ ಜ್ವಾಲಾಮುಖಿ ಚಟುವಟಿಕೆಗಳು ಕಂಡಿದ್ದವು. ದ್ರವ ರೂಪದ ಬಿಸಿ ಬಸಾಲ್ಟ್ ಸೀಮೆಸುಣ್ಣದ ಮಡಿಕೆಗಳ ಮೂಲಕ ನುಗ್ಗಿ ವ್ಯಾಪಕವಾದ ಜ್ವಾಲಾಮುಖಿಗಳು ಸಂಭವಿಸಿ ಪ್ರಸ್ಥಭೂಮಿಯನ್ನು ರೂಪಿಸಿದವು. ಲಾವಾ ಗಸಿಯಾಗಿ ಘನೀಭೂತಗೊಳ್ಳಲು ಶತಮಾನಗಳೇ ಕಳೆದವು. ಲಾವಾ ತಣ್ಣಗಾಗುತ್ತಿದ್ದಂತೆ, ಸಂಕೋಚನ ಸಂಭವಿಸಿದೆ. ದ್ರವ್ಯರಾಶಿಯು ನಿಧಾನವಾಗಿ ತಣ್ಣಗಾದಾಗ ಬಿರುಕುಗಳು ಕಂಡು, ಕಂಬದಂತಹ ರಚನೆಗಳು ಮೂಡಿವೆ, ಇದು ಅಡ್ಡಲಾಗಿ "ಬಿಸ್ಕತ್ತು" ಗಳಾಗಿ ಮುರಿದಿವೆ. ಮುರಿದಾಗ ಕೆಳಭಾಗದ ಮುಖವು ಪೀನವಾಗಿರುತ್ತದೆ, ಆದರೆ ಕೆಳಗಿನ ಭಾಗದ ಮೇಲ್ಭಾಗವು ಬಟ್ಟಲು ರೂಪದಲ್ಲಿದೆ. "ಬಾಲ್ ಮತ್ತು ಸಾಕೆಟ್" ಗಳಂತೆ ಕಾಣುತ್ತವೆ. ಲಂಬಸಾಲುಗಳ ಗಾತ್ರವನ್ನು ಪ್ರಾಥಮಿಕವಾಗಿ ಲಾವಾ ತಂಪಾಗುವ ವೇಗದಿಂದ ನಿರ್ಧರಿಸಲಾಗುತ್ತದೆ. ಹೆಚ್ಚಿನ ಕಂಭಗಳು ಷಡ್ಭುಜಾಕೃತಿಯಾಗಿರುತ್ತವೆ. ಆದರೂ ಕೆಲವು ನಾಲ್ಕು, ಐದು, ಏಳು ಅಥವಾ ಎಂಟು ಬದಿಗಳನ್ನು ಹೊಂದಿರುತ್ತವೆ. ಅತ್ಯಂತ ಎತ್ತರವಾದವು ಸುಮಾರು 12 ಮೀಟರ್ ಎತ್ತರವಿವೆ ಮತ್ತು ಲಾವಾ ಘನೀಕರಿಸಿ ಆದ ಬಂಡೆಗಳು ಕೆಲವು ಕಡೆ 28 ಮೀಟರ್ ಅಷ್ಟು ದಪ್ಪವಾಗಿವೆ. (ಮಂಗಳೂರಿನ ಬಳಿಯ ಸೈಂಟ ಮೇರಿ ದ್ವೀಪದಲ್ಲೂ ಕೂಡ ಇಂತಹ ಕಂಬದ ರೀತಿಯ ಕಲ್ಲುಗಳು ಇವೆ) ಮಳೆಯಿಂದಾಗಿ ಒಮ್ಮೆಲೇ ತಣ್ಣಗಾಗಿ ಘನರೂಪ ಹೊತ್ತ ಬೇರೆ ಕಲ್ಲುಗಳು ಬೇರೆಯೇ ಆಕೃತಿಯಲ್ಲಿವೆ. ಸಮುದ್ರದ ಅಲೆಗಳ ಹೊಡೆತಕ್ಕೆ ತುಸು ತುಸುವೇ ಕರಗುತ್ತ ಹೋದ ದಡ ವಿಶಿಷ್ಟ ರೂಪಗಳನ್ನು ಪಡೆಯುತ್ತ ಹೋಗಿದೆ. ಕಬ್ಬಿಣದ ಅಂಶ ಹೆಚ್ಚು ಇರುವ ಕಲ್ಲುಗಳು ಕಪ್ಪನೆ ಬಣ್ಣ ಹೊಂದಿದ್ದರೆ ಕೆಲವು

ಕಲ್ಲುಗಳು ಬಿಳಿ, ಕಂದು ಬಣ್ಣದ್ದಾಗಿವೆ.

ಪ್ರಕೃತಿ ತನ್ನದೇ ಆದ ವಿಸ್ಮಯಗಳನ್ನು ಹೊರಗೆಡವುತ್ತಾ ಹೋಗುತ್ತದೆ. ಅವು ಕವಿತೆ ಇದ್ದ ಹಾಗೆ. ಜನ ಈ ವಿಸ್ಮಯಗಳನ್ನು ನೋಡುತ್ತಾ ಅದಕ್ಕೂ ಹೆಚ್ಚು ರೋಚಕವಾದ ಕತೆ ಕಟ್ಟುತ್ತಾರೆ. ತಮ್ಮ ಸೃಜನ ಶೀಲತೆ ಮೆರೆಯುತ್ತಾರೆ

ಈ ಪ್ರಕೃತಿ ವೈಚಿತ್ರಗಳು ಜನಸಾಮಾನ್ಯರ ನಾಲಿಗೆಯಲ್ಲಿ ಏನೆಲ್ಲಾ ಕತೆಗಳನ್ನು ಹುಟ್ಟಿಸುತ್ತವೆ ಎಂಬುದು ಅಚ್ಚರಿಯ ವಿಷಯ. ಜನಸಾಮಾನ್ಯರ ಕಲ್ಪನಾ ಶಕ್ತಿಗೆ ಸಾಕ್ಷಿಯಾಗಿ ಕೊಂಬೆ ರೆಂಬೆಗಳು ರಮ್ಯವಾಗಿ ಮೂಡುತ್ತವೆ.

ಮತ್ತೊಂದು ಕಡೆ ವಿಜ್ಞಾನಿ ನಿರ್ಭಾವುಕನಾಗಿ ಸತ್ಯ ಏನೆಂಬುದನ್ನು ಹುಡುಕುತ್ತಾ ಹೋಗುತ್ತಾನೆ.

ಈ ಕಡಲ ತೀರ ಈಗ ಸಂರಕ್ಷಿತ ಪರಿಸರವಾಗಿದೆ. 1986 ರಲ್ಲಿ ಇದು ವರ್ಲ್ಡ್ ಹೆರಿಟೇಜ್ ಸೆಂಟರ್ ಆಗಿ ಘೋಷಿಸಲ್ಪಟ್ಟಿದೆ. ಇಲ್ಲಿ ಚಾರಣ ಮಾಡುವ ಪ್ರವಾಸಿಗಳಿಗೆ ನಯನ ಮನೋಹರ ದೃಶ್ಯ ದೊರೆಯುತ್ತದೆ. ಅಲ್ಲಿನ ಯು.ಕೆ. ಸರ್ಕಾರ ಈ ಪ್ರಕೃತಿ ಸೌಂದರ್ಯವನ್ನು ಹಾಗೆಯೇ ಕಾಪಿಟ್ಟುಕೊಳ್ಳುತ್ತಾ ಬಂದಿದೆ. ಐರ್ ಲೇಂಡಿನ ಉತ್ತರದ ಈ ಜಾಗದ ಹೆಸರು ಆಂಟ್ರಿಮ್. ಈ ಸಮುದ್ರ ತೀರಕ್ಕೆ ಜೈಂಟ್ ಕಾಸವೇ (Giant Causeway) ಎಂದು ಕರೆಯಲಾಗುತ್ತದೆ. ಈ ಕಡೆಯಿಂದ ನೋಡಿದರೆ ಸ್ಕಾಟಲೇಂಡ್ ಕಾಣುತ್ತದೆ. ಎರಡು ದೇಶಗಳು ಯುನೈಟೆಡ್ ಕಿಂಗ್ಡಂಬಿನ ಭಾಗಗಳಾಗಿರುತ್ತವೆ.

ಒಮ್ಮೆ ಹೋಗಿ ನೋಡಿ ಬನ್ನಿ ಈ ದ್ವೀಪಗಳನ್ನು.

–

16. ವೆಂಕಟ್ ಕಾಮತ್



ಅವಳ ಮಗಳು

ಅವಳು ಒಂದು ಮುಗ್ದ ಮುದ್ದು ಮಗುವಾಗಿದ್ದಳು .. ಬೆಳೆಬೆಳೆದಂತೆ ಹುಡುಗಿಯಾದಳು .. ಹೆಣ್ಣಾದಳು .. ಹೆಂಡತಿ ಆದಳೋ ಇಲ್ಲವೋ



ಬಸುರಾದಳು .. ಬೇಕೋ ಬೇಡವೋ ತಾಯಿ ಅವಳಾದಳು ಮಗು ಗಂಡಾಗಲಿ ತಾನು ಪಟ್ಟ ಬವಣೆ ಈ ನನ್ನ ಕೂಸಿಗೆ ಬೇಡಾ .. ಎಂದು ಎಚ್ಚೆತ್ತಾಗ ಅಂದು ಕೊಳ್ಳುತ್ತಾ ಕನಸುಕಂಡರೂ ಸುಪ್ತ ಮನ ಕನಸುಗಳು ಹೆಣ್ಣು ಮಗುವನ್ನು ಬಯಸುತ್ತಿತ್ತು .. ಒಂದು ಪುಟ್ಟ , ಗುಂಗರು ಕೂದಲಿನ, ನಕ್ಕಾಗ ಕೆನ್ನೆಯಲಿ ಗುಳಿಬೀಳುವ ಸದಾ ಮಂದಹಾಸಹೊಂದಿರುವ ಆ ಮಗು ಅವಳ ಬರಡು ಬಾಳಿಗೆ ಜೀವಚಿಲುಮೆ ಯಾಗಿ ಕಾಣುತ್ತಿತ್ತು ... ಅದು ಹೆಣ್ಣೇ ಆಗಲಿ ನನ್ನ ಈಡೇರದ ಆಸೆ ಆಕಾಂಕ್ಷೆ ಕನಸುಗಳ ಅವಳಲ್ಲಿ ಕಾಣುವೆ .. ಅವಳು ನನ್ನ ಸರ್ವಸ್ವ ಅವಳು ನನ್ನ ಮಗಳು ಅವಳು ನನ್ನಲ್ಲಿದ್ದಳು ನಾನು ಅವಳ ಹೃದಯದಲ್ಲಿ ಇರುವೆ ಎಂದೆಂದಿಗೂ ....

ಈ ಒಂದು ಭಾವನೆಗಳು .. ಬಹಳವೇ ಕಥೆಗಳಲ್ಲಿ .. ಚಲನಚಿತ್ರಗಳಲ್ಲಿ ನಿಜಜೀವನದಲ್ಲಿ ಕಥಾವಸ್ತು ಆಗಿದೆ...
ನಾ ಮೆಚ್ಚಿದ ಕೆಲವನ್ನು ಇಲ್ಲಿ ಬರೆಯುತ್ತಿದ್ದೇನೆ ...

1966 ರಲ್ಲಿ ತೆರೆಕಂಡ ಹಿಂದಿ ಚಲನಚಿತ್ರ" ಮಮತಾ " 1963 ರ ಬಂಗಾಳಿ ಚಲನಚಿತ್ರ "ಉತ್ತರ ಫಾಲ್ಗುಣಿ" ಯ ಹಿಂದಿ ಅವತರಣಿಕೆ ಆಗಿದ್ದು ಮೂಲ ಚಿತ್ರದ ಸುಚಿತ್ರ ಸೇನ್ ಹಿಂದಿಯಲ್ಲೂ ದ್ವಿಪಾತ್ರದಲ್ಲಿ ಬಹಳ ಪ್ರಶಸ್ತಿ ಪಡೆದರು ..

ಅಸಹಾಯಕ ದೇವಯಾನಿ ತನ್ನ ಪ್ರಿಯಕರ ವಿದೇಶಕ್ಕೆ ವಿದ್ಯಾಭ್ಯಾಸಕ್ಕೆ ಹೋಗಿರುವಾಗ ದುಷ್ಟ ರಾಕಾಲ ನನ್ನು ಮದುವೆಯಾಗಿ ಕೆಲವೇ ದಿನಗಳಲ್ಲಿ

ಅವನೊಬ್ಬ ತಲೆಹಿಡುಕ ಕುಡುಕ ಲಂಪಟ ವ್ಯಭಿಚಾರಿ ಎಂದು ಕಂಡಾಗ ತಪ್ಪಿಸಿಕೊಂಡು ರೈಲುಹತ್ತಿ ಆತ್ಮಹತ್ಯೆಯೇ ಗತಿ ಎಂದು ರೈಲಿನಿಂದ ಜಿಗಿಯಲು ಪ್ರಯತ್ನಿಸುವಾಗ ಸಹಪ್ರಯಾಣಿಸುತ್ತಿದ್ದ ಹೆಂಗಸೊಬ್ಬಳು ದೇವಯಾನಿ ಯನ್ನು ಉಳಿಸಿ ಮುಜ್ರಾ ಹಾಡು ಹೇಳಿ ರಂಜಿಸುವ ವೃತ್ತಿಗೆ ಕರೆದೊಯ್ಯುತ್ತಾಳೆ ಇಲ್ಲಿ ಗೌರವದಿಂದ ಹಾಡಿ ರಂಜಿಸಬಹುದು ಇದು ವೈಶ್ಯಾವಟಿಕೆ ಅಲ್ಲಾ ಎಂದು ಮರ್ಯಾದಸ್ಥರ ಸ್ಥಳ ವಲ್ಲದಿದ್ದರೂ ಗೌರವ ಹಾಗು ಮರ್ಯಾದೆಯಿಂದ ಬದುಕುತ್ತಾಳೆ ಅವಳಿಗೆ ರಾಕಾಲನಿಂದ ಹುಟ್ಟಿದ ಮಗಳನ್ನು ಕಾನ್ವೆಂಟ್ ಒಂದರಲ್ಲಿ ಅಲ್ಲಿಯ ಮದರ್ ಸುಪೀರಿಯರ್ ಕಾಲು ಹಿಡಿದು ಬೇಡಿ ಸೇರಿಸುತ್ತಾಳೆ ... ಮುಂದೆ ವಿದೇಶದಿಂದ ವಿದ್ಯಾಭ್ಯಾಸ ಮುಗಿಸಿಬಂದ ಅಡ್ವೋಕೇಟ್ ಮೋನಿಶ್ ತನ್ನ ತಪ್ಪಿನಿಂದ ಆದ ಅಚಾತುರ್ಯ ತಾನು ಸರಿಪಡಿಸುತ್ತೇನೆ ನಿನ್ನನ್ನು ನನ್ನವಳಾಗಿ ಸ್ವೀಕರಿಸುತ್ತೇನೆ ಅಂದಾಗ ತಾನು ಕಲುಷಿತಳಾಗಿದ್ದೇನೆ ನೀನು ನಮ್ಮ ಪ್ರೀತಿಗಾಗಿ ನನ್ನ ಮಗಳನ್ನು ನಿನ್ನದೇ ಮಗಳಂತೆ ಸಾಕಿ ಸಲಹಿ ಗೌರವಾನ್ವಿತ ಬದುಕು ಸಿಗುವಂತೆ ನೋಡಿಕೋ ಅನುತ್ತಾಳೆ .. ತನ್ನ ಬಗ್ಗೆ ಮಗಳಲ್ಲಿ ಏನನ್ನೂ ಹೇಳಬಾರದೆಂದು ಭಾಷೆ ತೆಗೆದುಕೊಳ್ಳುತ್ತಾಳೆ ... ದುಷ್ಟ ರಾಕಾಲ ಮತ್ತೆ ದೇವಯಾನಿಯನ್ನು ಹುಡುಕಿ ಮಗಳು ಸುಪರ್ಣಾಳನ್ನು ಹುಡುಕಿ.. ದೇವಯಾನಿ ಗೆ ಬೆದರಿಸಿ ಹಣ ದೋಚಿ ದೋಚಿ ಬೇಸತ್ತ ದೇವಯಾನಿ ರಾಕಾಲನನ್ನು ಗುಂಡಿಕ್ಕಿ ಸಾಯಿಸುತ್ತಾಳೆ ಕೋರ್ಟಿನಲ್ಲಿ ಪ್ರಿಯಕರ ಈಗ ವಯಸ್ಸಾದ ಮೋನಿಶ್ ಮತ್ತು ಅವನ ಸಾಕು ಮಗಳು ಸುಪರ್ಣಾ ಅವಳ ಪ್ರಿಯತಮ ಇಂದ್ರನೀಲ .. ಸುಪರ್ಣಳಿಗೆ ದೋಷಿ ತನ್ನ ಹೆತ್ತ ತಾಯಿ ಎಂದು ಗೊತ್ತಿರದೆ ವಾದಿಸುತ್ತಾರೆ ...

ಇದು ತನ್ನ ಮಗಳು ತನ್ನಂತೆ ಆಗದೆ ಗಣ್ಯ ವ್ಯಕ್ತಿ ಆಗಬೇಕು ಅವಳಿಗೆ ಪ್ರಪಂಚದ ಎಲ್ಲ ಸುಖ ಸಂಪತ್ತು ಸಿಗಬೇಕು ಎಂದು ಹೋರಾಡುವ ದೇವಯಾನಿಯ ಕಥೆ ..

ಮುಂದೆ ..1969 ರಲ್ಲಿ ಕನ್ನಡದಲ್ಲಿ M K ಇಂದಿರಾ ಅವರ ಕಾದಂಬರಿ ಗೆಜ್ಜೆಪೂಜೆ ಪುಟ್ಟಣ್ಣ ಕಣಗಾಲರ ನಿರ್ದೇಶನದಲ್ಲಿ ಅದೇ ಹೆಸರಿನ ಕಪ್ಪು ಬಿಳುಪು ಚಲನ ಚಿತ್ರವಾಗಿ ತೆರೆಕಂಡು ಅದ್ಭುತ ಯಶಸ್ಸು ಗಳಿಸಿತು .. ಇದರಲ್ಲಿ ಲೀಲಾವತಿ ತಾಯಿಯ ಪಾತ್ರದಲ್ಲಿ ಮಗುವಿಗಾಗಿ ಬದುಕುಳಿದು ಮಗೂವೇ ನಿನ್ನ ಹೂ ನಗೆ ಒಡವೆ ಎನ್ನ ಪಾಲಿಗೆ ತುಂಬು ಎನ್ನ ಜೋಳಿಗೆ ... ಈ ಹಾಡಿನ ಎರಡನೇ ಪಾದದಲ್ಲಿ ಮಗುವೇ ನೀನು ಸಮಾಜದ 4 ಗಣ್ಯರಂತೆ ಘನವಾಗಿ ಬದುಕು ಎಂದು ಹಾರೈಸುತ್ತಾಳೆ ..

ಗೆಜ್ಜೆಪೂಜೆ ಎಂಬ ಶಾಪದ ಬದುಕಿನಿಂದ ಒಬ್ಬ ಗಂಡನ ತಾಳಿಕಟ್ಟಿಸಿ ಕೊಂಡ ಹೆಂಡತಿ ಆಗಿ ಬದುಕಬೇಕಂಬ ಆಸೆ ನಾಯಕಿ .. ನಾಯಕನನ್ನು ದಿವ್ಯ ಅದ್ಭುತ ಮಂತ್ರ ಧರ್ಮೇಚ .. ಮೋಕ್ಷೇಚ ... ನಾತಿಚರಾಮಿ ಎಂದು ಕೀವಿ ಕೇಳ್ದೊಡೆ .. ಗಗನವು ಎಲ್ಲೋ ಭೂಮಿಯೂ ಎಲ್ಲೋ ಒಂದು ಅರಿಯೆನಾ .. ಎಂದು ಓಡೋಡಿ ಕುಣಿಕುಣಿದು ಹಾಡುತ್ತಾಳೆ ...

ಇದೊಂದು ದುರಂತ ಕಥೆ ಎಂಬುದನ್ನು ಬಿಟ್ಟರೆ ಜೀವನದ ಹಲವೊಂದು ಸತ್ಯಗಳನ್ನು ನಾವು ಇಲ್ಲಿ ಕಾಣುತ್ತೇವೆ ...

ಇದು ಚಲನ ಚಿತ್ರದ ಮಾತಾದರೆ ನಿಜಜೀವನದಲ್ಲಿ ನಮ್ಮ ನೆರೆಹೊರೆಯಲ್ಲಿ ಕಂಡ "ದುಧಾಮಾಯಿ" ಯ ಕಥೆ ಹೇಳುತ್ತೇನೆ

ಗಂಡ ಸಂಸಾರ ತನಗೆ ಬೇಡ ಎಂದು ಇಬ್ಬರು ಮಕ್ಕಳೊಡನೆ ನಮ್ಮ ದುದ್ದಾ ಮಾಯಿ ... ಹಾಲತ್ತೆ ಯನ್ನು ಬಿಟ್ಟು ಎಲ್ಲೊ ದೇಶಾಂತರ ಹೋದಮೇಲೆ ಆಕೆ ಹಸು ಗಳನ್ನು ಸಾಕಿ ತರಕಾರಿ ಬೆಳೆಸಿ ... ದಿನ ಬೆಳಿಗ್ಗೆ ಮನೆಮನೆಗೆ ಹಾಲು ಸರಬರಾಜು ಮಾಡಿ .. ತನ್ನ ನಿಷ್ಠೂರದ ಮಾತುಗಳಿಂದ ಜಗಳಗಂಟಿ ಎಂದೇ ಹೆಸರುವಾಸಿ ಆಗಿ ಕಷ್ಟದಿಂದ ದಿನಚರಿ ನಡೆಸುತ್ತಿದ್ದರು ... ಅವಳಿಗೆ ಒಂದು ಹೆಣ್ಣು ಒಂದು ಗಂಡು ಮಕ್ಕಳು .. ಇಬ್ಬರು ಮಕ್ಕಳೂ ತಾಯಿಗೆ ಏನೂ ತೊಂದರೆ ಕೊಡದೆ ಎಲ್ಲ ಕೆಲಸಗಳಲ್ಲಿ ಸಹಾಯ ಮಾಡುತ್ತಾ ತಮ್ಮ ಓದನ್ನು ಮುಂದುವರೆಸಿ .. ಮಗ ಸಿಂಡಿಕೇಟ್ ಬ್ಯಾಂಕ್ ನಲ್ಲಿ ಶಿಫಾರಸು ಗಳಿಂದ ಕೆಲಸ ಗಳಿಸಿ ಅಲ್ಲಿಯೇ ಮುಂದೆ ಬಡ್ತಿ ಪಡೆದ

ದುದ್ದ ಮಾಯಿ ಗೆ ಮಗಳು ಸುಖದ ಬಾಳು ಪಡೆಯಬೇಕು ತನ್ನಂತೆ ಕಷ್ಟದಲ್ಲಿ ಇರಬಾರದು ಎಂದು ನಿತ್ಯ ಕಂಡ ಕಂಡ ದೇವರಲ್ಲಿ ಬೇಡುವಳು ... ಅವಳು ಬರಿ ಅಕ್ಷರಾಭ್ಯಾಸ ಬಿಟ್ಟರೆ ಏನು ಹೆಚ್ಚಿಗೆ ಓದಿರಲಿಲ್ಲಾ .. ಅವಳ ಕಷ್ಟದಲ್ಲಿ ಸಹಾಯ ನೀಡದೆ ಮೋಸವಾದ ಅನುಭವಗಳಿಂದ ಆಕೆ ಯಾರನ್ನು ನಂಬುತ್ತಿರಲಿಲ್ಲಾ ...

ಆ ಸಮಯದಲ್ಲಿ ನನ್ನ ತಾಯಿ ಅವರಿಗೆ ದೇವರಂತೆ ಕಂಡಳು .. ಸಂಪೂರ್ಣ ವಿಶ್ವಾಸದಿಂದ ತಮ್ಮ ಸ್ಥಿತಿ ಗತಿಗಳನ್ನು ಹೇಳಿಕೊಂಡು .. ತಂದೆಯನೆರಳಿಂದ ದೂರವಾಗಿ ಒಂಟಿ ತಾಯಿ ನೋಡಿಕೊಂಡ ಬಡವರ ಮನೆಯ ಹೆಣ್ಣುಮಗಳನ್ನು ಯಾರು ಮಾಡುವೆ ಮಾಡಿಕೊಳ್ಳುತ್ತಾರೆ ಎಂದೆಲ್ಲ ಗೊಣಗಿ ಕೊಂಡು ಸ್ವಲ್ಪ ಕಣ್ಣೀರು ಸುರಿಸಿದರು ...

ನನ್ನ ತಾಯಿ ಹೆಚ್ಚು ವಿದ್ಯಾಭ್ಯಾಸ ಅಂದರೆ ಹಿಂದೆ ಶಾಲೆಗೆ 7 ನೇ ತರಗತಿ ಯ ವರೆಗೆ ಮಾತ್ರ ಹೋಗಿದ್ದರೂ ಪ್ರಪಂಚ ಜ್ಞಾನ ಬಹಳವೇ

ಇತ್ತು ... ನಮ್ಮಲ್ಲಿ ಮನೆಗೆಲಸ ಮಾಡಿದ ಬಹಳ ಜನರ ಸಮಸ್ಯೆ ಗಳನ್ನು ಬಗೆಹರಿಸಿದ್ದರು .. ಮುಂದೆ ನನ್ನ ತಾಯಿ ನಮ್ಮ ಬಳಗದ ಕೆಲವರೊಡನೆ ಮಾತುಕತೆ ನಡೆಸಿ ಬೆಂಗಳೂರಿನಲ್ಲಿ ವಾಸಮಾಡುತ್ತಿದ್ದ ಸರಕಾರೀ ನೌಕರಿಯಲ್ಲಿದ್ದ ಹುಡುಗನೊಂದಿಗೆ ನಮ್ಮ ದುಧಾ ಮಾಯಿಯ ಮಗಳ ಮದುವೆಯನ್ನು ಗೊತ್ತು ಮಾಡಿ ಉಡುಪಿಯಲ್ಲಿ ಮದುವೆ ಅದ್ದೂರಿಯಾಗಿಯೇ ನಡೆಯಿತು..

ಮದುವೆಗೆ ಜವಳಿ ಒಡವೆ ಊಟ ಉಪಚಾರ ಯಾವ ಕುಂದು ಕೊರತೆ ಇಲ್ಲದೆ ನಡೆಯಿತು .. ದುದ್ದಾ ಮಾಯಿಯ ಪತಿರಾಯ ಮಗಳ ಮದುವೆಗೆ ಬಂದು ಎರಡು ಮೂರು ದಿನಗಳ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಹೆಂಡತಿಯೊಡನೆ ನಿಂತು ಕನ್ಯಾದಾನ ಮಾಡಿ ಪುಣ್ಯಕಟ್ಟಿ ಕೊಂಡರು ... ಅವರು ಸಾಧು ಸ್ವಭಾವದ ತನಗೆ ಸಂಸಾರದಲ್ಲಿ ಏನೂ ಬೇಡ ಎಂದು ತಲೆಮರೆಸಿಕೊಂಡ ಜನ... ಪ್ರಪಂಚದಲ್ಲಿ ಈ ರೀತಿಯ ದುದ್ದಾ ಮಾಯಿ ಹಾಗು ಮಗಳು ಬಹಳವೇ ಇರುತ್ತಾರೆ ಅವರಿಗೆ ದೇವರು ನನ್ನ ಅಮ್ಮನಂತಹ ಮಾರ್ಗದರ್ಶಿಯರನ್ನು ಎಲ್ಲೆಡೆ ಒದಗಿಸಲಿ ಎಂದು ಆ ಭಗವಂತನಲ್ಲಿ ನಾನು ಬೇಡುತ್ತೇನೆ

17. ಮಹಾಬಲ





ಕವಿ ಮತ್ತು ಹಕ್ಕಿ

ಕವಿ ಒಮ್ಮೆ ಬರೆಯುತ್ತಿದ್ದ ಹಕ್ಕಿಗಳ ರಮ್ಯ ಜೀವನವ ಕುರಿತು
ಅವನ ಕಲ್ಪನೆಯ ಆಗಸದಲಿ ಅವು ಸ್ವಚ್ಛಂದ ವಿಹರಿಸುತ್ತಿತ್ತು!
ಒಂದು ಕ್ಷಣ ನಾನೂ ಹಕ್ಕಿಯಾಗಬಾರದೆ ಎಂದೂ ಚಿಂತಿಸಿದ
ಅಲ್ಲಿ ಮರದ ಮೇಲೆ ಅವುಗಳ ಕಲರವ ತಂದಿತ್ತು ಆನಂದ

ಚೆನ್ನಾಗಿಯೇ ಸಾಗಿತ್ತು ಸುಂದರ ಹಕ್ಕಿಗಳ ಕುರಿತ ಅವನ ಬರವಣಿಗೆ
ಧುತ್ತನೆ ಎಲ್ಲಿಂದಲೋ ಬಂತು ಒಂದು ಪಾರಿವಾಳ ಮನೆಯೊಳಗೆ.
ಬೆದರಿ ವಿಚಲಿತನಾದ ಕವಿ ಪೂರ್ಣವಿರಾಮವಿತ್ತ ತನ್ನ ಲೇಖನಿಗೆ
ಅವನ ಗುರಿ ಈಗ ಹಕ್ಕಿಯ ಓಡಿಸಬೇಕಿತ್ತು ಮನೆಯಿಂದ ಆಚೆಗೆ.

ಹೊರಬಾಗಿಲ ತೆರೆದು ಉಳಿದವುಗಳ ಮುಚ್ಚಿ ಸರಸರ
ಅವನೀಗ ಆ ಸುಂದರ ಹಕ್ಕಿಯ ಹೊರಹಾಕಲು ಸನ್ನದ್ಧ
ಕಲಿತ ಎಲ್ಲ ವಿದ್ಯೆಗಳ ಎಲ್ಲ ಪ್ರಯೋಗಿಸಿ ಹೈರಾಣು ಕವಿ
ಹೋರಾಟದ ಫಲ; ಹಾರಿತೀಗ ಹಕ್ಕಿ ಹೊರಬಾಗಿಲಲಿ

ಕವಿ ಈಗ ನಿಶ್ಚಿಂತ ಮುಂದುವರೆದಿದೆ ಅವನ ಲೇಖನಿ
ದೂರದಲಿ ಎಲ್ಲೋ ಕೇಳುತಿದೆ ಹಕ್ಕಿಯ ಮಧುರ ದನಿ

18. ರಾಧಿಕಾ ವಿ ಗುಜ್ಜರ್



ಕಥೆಯ ಶೀರ್ಷಿಕೆ:

ಸಂಬಂಧಗಳಿಗೂ ಎಕ್ಸ್ಪೈರಿ ಡೇಟ್ ಇರುತ್ತದೆ

ಸಹಪಾಠಿಯಾದ ಶ್ರೀಪಾದನು ನಮ್ಮ ಶಾಲಾ ಸಹಪಾಠಿಗಳ ವಾಟ್ಸಪ್ ಗುಂಪಿಗೆ ಗೃಹಪ್ರವೇಶದ ಆಹ್ವಾನ ಪತ್ರಿಕೆಯನ್ನು ಹಾಕಿ ಎಲ್ಲರನ್ನೂ ಅತ್ಯಂತ ಆತ್ಮೀಯವಾಗಿ ಆಮಂತ್ರಿಸಿದ್ದ. ಸುಮಾರು ಒಂದು ತಿಂಗಳಿನಿಂದಲೂ ಎಲ್ಲಾ ಸ್ನೇಹಿತರು ಬೆಂಗಳೂರಿನಲ್ಲಿ ಗೃಹಪ್ರವೇಶದ ನೆಪದಲ್ಲಿ ಭೇಟಿಯಾಗುವುದು ಎಂದು ಸಂತೋಷದಿಂದ ದಿನಗಳನ್ನು ಎಣಿಸುತ್ತಿದ್ದೆವು. ಪರವೂರಿನ, ಪರದೇಶದ ಮಿತ್ರರೆಲ್ಲರ ಆಗಮನದ ನಿರೀಕ್ಷೆಯಿದ್ದ ಕಾರಣ, ಅಪರೂಪದ ಸಮಾರಂಭವಾಗುವುದಿತ್ತದು. ವಾಟ್ಸಪ್ ಗೋಡೆಯ ಮೇಲೆ ಮಾಹಿತಿ ನೋಡುತ್ತಲೇ, ಸದಾ ಸಂಪರ್ಕದಲ್ಲಿರುತ್ತಿದ್ದ ಆದಿತ್ಯನಿಗೆ ಕರೆಮಾಡಿ ಸಮಾರಂಭಕ್ಕೆ ಹೋಗುವಾಗ ನನ್ನನ್ನು ಕರೆದುಕೊಂಡು ಹೋಗಲು ಅಡ್ವಾನ್ಸ್ ಬುಕಿಂಗ್ ಮಾಡಿಬಿಟ್ಟೆ. ನನ್ನ ಮತ್ತು ಅವನ ಮನೆ ಕೇವಲ ಎರಡೂವರೆ ಕಿ.ಮೀ ಅಂತರದಲ್ಲಿ ಒಂದೇ ಬಡಾವಣೆಯಲ್ಲಿದ್ದವು. "ಮಾರಾಯ್ತಿ, ನಿನ್ನ ಬಿಟ್ಟು ಹೋದ್ರೆ ಶ್ರೀಪಾದ ನನ್ನನ್ನ ಒಳಗೆ ಬಿಡ್ತಾನಾ ಹೇಳು!!? ನೀನು ಮನೆಯಿಂದಲೇ ಕಾರು ತಗೊಂಡು ಹೊರಡ್ತೀಯೊ, ಇಲ್ಲಿ ಬಂದು ನನ್ನ ಕಾರಲ್ಲಿ ಹೊರಡೋದು ಕನ್ಫರ್ಮ್ ಮಾಡು. ಖಂಡಿತ ಜೊತೆಯಾಗಿ ಹೋಗೋಣ ಆಯ್ತಾ. ನನ್ನ ಹೆಂಡ್ತಿಗೂ ಜೊತೆ ಇರುತ್ತೆ. ಅಂದ ಹಾಗೆ ಆಸ್ಟ್ರೇಲಿಯಾದಿಂದ ಪಂಕಜ್ ಬಂದಿದ್ದಾನೆ. ಗೊತ್ತಾ?" ಅಂದ. "ಗೊತ್ತಿಲ್ಲ ಕಣೋ. ಬಂದ್ರು ಏನಂತೆ, ನೀನು, ಪ್ರಶಾ ಇರ್ತೀರಲ್ಲ ಜೊತೆಯಲ್ಲಿ. ಹಲೋ ಹೇಳಿ ಸರೀತೀನಿ ಅಷ್ಟೇ. ಅವನು ನನ್ನ ಮನಸಿನ ಯಾವ ಮೂಲೆಯಲ್ಲೂ ಇಲ್ಲ ಕಣೋ. ನೋ ಫೀಲಿಂಗ್ಸ್, ಯು ನೋ ನಾ?" ಅಂದೆ ಅಷ್ಟೇ. ಆದಿತ್ಯ ತಕ್ಷಣ ಸಮಾಧಾನದಿಂದ "ಅಷ್ಟು ಸಾಕು ಬಿಡೆ. ಏನೇ ಆದ್ರೂ, ನಮಗೆಲ್ಲರಿಗೂ ಗೊತ್ತಿರೋದೇ. ಹಿ ಲಾಸ್ಟ್ ಹಿಸ್ ಗೋಲ್ಡನ್ ಅಪಾರ್ಚುನಿಟಿ. ಸರಿದಿದ್ದು ಕೇವಲ ಕಾಲ. ಜೀವನ ಅಲ್ವಲ್ಲ", ಎಂದು ಕರೆಯನ್ನು ಮುಗಿಸಿದ.

ooooooooooooooooooooooooooooooooooooooooooooo

ನನ್ನ ಸೆಕೆಂಡ್ ಇಯರ್ ಫೀ ಕಟ್ಟಲು ಸರದಿಯಲ್ಲಿ ನಿಂತಿದ್ದೆ. ಪ್ರಾಕ್ಟಿಕಲ್ಸ್ ತರಗತಿಗೆ ಹೊರಟ ಪ್ರಶಾಂತ ಜೊತೆಯಲ್ಲೇ ಕಾಯುತ್ತಾ ನಿಂತ. ಪರ್ವಾಗಿಲ್ಲ ಹೋಗೋ ಅಂದ್ರೆ ಕೇಳ್ತಾನ!! ಹತ್ತು ನಿಮಿಷ ಕಾದು, ಫೀ ಕಟ್ಟಿ ಇಬ್ಬರೂ ಜೊತೆಯಲ್ಲಿ ತರಗತಿಯ ಕಡೆಗೆ ಓಡಿ ಹೊರಟಿದ್ದೆವು. ನಮಗಿಂತ ಎರಡು ವರ್ಷ ಹಿರಿಯನಾದರೂ ನಮ್ಮ ಸಹಪಾಠಿಯಿದ್ದ ಪಂಕಜ್ ಹೊರಗೆ ನಿಂತಿದ್ದ. ಇಂದು ತರಗತಿಗೆ ಸರ್ ಬಂದಿಲ್ವೇನೋ ಎಂದುಕೊಳ್ಳುತ್ತಾ ಅವನನ್ನು ಸಮೀಪಿಸುತ್ತಿದ್ದಂತೆಯೇ, ಆತ ಪ್ರಶಾಂತನನ್ನು ಕುರಿತು, "ನೀನು ಕ್ಲಾಸಿಗೆ ಹೋಗು. ನಾನು ಇವಳ ಜೊತೆ ಮಾತಾಡಬೇಕು" ಅಂದ. "ಅದೇನು ಅಂತ ಕೇಳಿ ಬರ್ತೀನಿ, ನೀನು ಹೋಗಿರೋ ಪ್ರಶಾ" ಎಂದು ನಾನು ನಿಂತೆ. ಆದರೂ ತಿರುವಿನ ಗೋಡೆಗೆ ನನಗೆ ಕಾಣಿಸುವಂತೆ ಪ್ರಶಾಂತ ನಿಂತೇ ಇದ್ದ. ಧೈರ್ಯ ಬಂತು.

"ಫಸ್ಟ್ ಇಯರ್ನಿಂದಲೂ ನಿನ್ನ ಇಷ್ಟ ಪಡ್ತಿದೀನಿ. ಒಮ್ಮೆ ಎಂಜಿನಿಯರಿಂಗ್ ಮುಗಿದರೆ ನಾನು ದೊಡ್ಡಪ್ಪನ ಹತ್ರ ಆಸ್ಟ್ರೇಲಿಯಾಗೆ ಹೋಗ್ತಾ ಇದೀನಿ. ನೀನು ನನಗಾಗಿ ಕಾಯ್ತೀಯಾ? ಒಂದು ವರ್ಷದಲ್ಲಿ ನಿನ್ನ ಕರೆಸಿಕೊಳ್ತೀನಿ. ಹೂಂ ಅನ್ನು. ಬಾಕಿ ನಾನೆಲ್ಲ ನೋಡ್ಕೋತೀನಿ. ಸಮಯ ತಗೋ, ಏನೇ ಅನುಮಾನಗಳಿದ್ದರೂ ಕೇಳು" ಅಂದಿದ್ದೇ ಏದುಸಿರು ಬಿಡುತ್ತಾ ಸರಸರನೆ ಓಡು ನಡಿಗೆಯಲ್ಲಿ ಹೊರಟೇಹೋದ. ಇದಾದ ಒಂದೇ ತಿಂಗಳಿನಲ್ಲಿ ಅವನ ತಂದೆ ನನ್ನನ್ನು ಮನೆಗೆ ಕರೆಸಿಕೊಂಡು ಮಾತನಾಡಿದರು. ತಂದೆ-ತಾಯಿಯಿಲ್ಲದ ನಾನು, ಅಜ್ಜಿ-ತಾತನ ಜೊತೆಯಲ್ಲಿದ್ದು ಓದಿಕೊಂಡಿರುವುದನ್ನು ಶ್ಲಾಘಿಸಿದರು. ಮಗನ ಆಯ್ಕೆಯನ್ನು ಬಹಳ ಸಂತೋಷದಿಂದ ಸ್ವೀಕರಿಸಿದ್ದರು. ಪಂಕಜ್ ಸಹಾ ತಾಯಿಯಿಲ್ಲದವನೇ. ಈಗಿದ್ದ ಮಲತಾಯಿಗೂ ಅವನಿಗೂ ಅಷ್ಟಾಗಿ ಹೊಂದಾಣಿಕೆಯಿಲ್ಲದ ಕಾರಣ ಓದು ಮುಗಿಸಿ ಆಸ್ಟ್ರೇಲಿಯಾಗೆ ಹೊರಟಿದ್ದ. ಬಹಳ ಸರಳ, ಸಹಜ, ಯಾವುದೇ ಗದ್ದಲಗಳಿಲ್ಲದ ಪ್ರೀತಿ ನಮ್ಮದಾಗಿತ್ತು. ಪಂಕಜ್-ಮೀರಾ ಎಲ್ಲರಿಗೂ ಇಷ್ಟವಾಗುವ ಅನುರೂಪದ ಜೋಡಿ ಎಂಬಂತೆ ಇದ್ದೆವು. ನನಗೂ ಸಹಾ ಮನೆಯಲ್ಲಿ ಗಂಡು ಹುಡುಕಿ ಮದುವೆ ಮಾಡುವವರು ಯಾರೂ ಇರಲಿಲ್ಲ. ಅಪ್ಪನ ಸ್ವಂತ ಬಂಗಲೆ, ಅಮ್ಮನ ಲಾಕರ್ ತುಂಬಾ ಇದ್ದ ಚಿನ್ನ, ಅಜ್ಜಿಯ ಪ್ರೀತಿ ಮತ್ತು ತಾತನ ಪೆನ್ಶನ್ ನನಗಿದ್ದ ಆಸ್ತಿಯಾಗಿತ್ತು. ಹಾಗಾಗಿ ಒಳ್ಳೆಯ ಕುಟುಂಬದ ಸಂಬಂಧ ಬಾಗಿಲಿಗೆ ಬಂದಿದ್ದ ಕಾರಣ ಮದುವೆಯ ವಿಷಯವಾಗಿ ತಾತನದ್ದು ಯಾವುದೇ ವಿರೋಧವಿರಲಿಲ್ಲ.

ಓದು ಮುಗಿಸಿ ಆಸ್ಟ್ರೇಲಿಯಾಗೆ ತೆರಳಿದ ಪಂಕಜ್ ಬದಲಾಗಿದ್ದ. ಅವನ ತಂದೆ ಮನೆಗೆ ಬಂದು ತಾತನ ಜೊತೆ ಬಹಳ ನೋವಿನಲ್ಲಿ ಮಾತನಾಡಿ ತೆರಳಿದ್ದರು. ನನಗೆ ಮನೆಯ ಹತ್ತಿರವಿದ್ದ ಆದಿತ್ಯ, ಜೀವದ ಗೆಳತಿ ವಿದ್ಯಾ, ದೋಸ್ತಾನ ಟ್ಯಾಗ್ ನ ಪ್ರಶಾಂತ ಇವರೆಲ್ಲರೂ ಆಧಾರ, ಸಾಂತ್ವನ, ಸಮಾಧಾನ ನೀಡುತ್ತಿದ್ದರು. ಪಂಕಜ್ ಅಲ್ಲಿ ಬೇರೆ ಹುಡುಗನ ಜೊತೆ ಲಿವ್ ಇನ್ ಜೀವನ ನಡೆಸುತ್ತಿದ್ದ. ಹತಾಶೆಯ ಕತ್ತರಿ ಕತ್ತರಿಸುತ್ತಿದ್ದರೂ, ಅವನ ಪ್ರಾಮಾಣಿಕತೆಯ ಬಗ್ಗೆ ಗೌರವವಿತ್ತು. ಬದುಕು ಸುಳ್ಳಿನ ಸಿಹಿಯೊಡನೆ ಆರಂಭವಾಗಲಿಲ್ಲವಲ್ಲ ಸದ್ಯ. ಸತ್ಯದ ಕಹಿಯೊಡನೆ ಮುಂದುವರೆಯಿತು ಅಷ್ಟೇ.

ನಂತರ ನಾನು ಮಾಸ್ಟರ್ಸ್ ಮುಗಿಸಿ ದೊಡ್ಡ ಹುದ್ದೆ ಹಿಡಿದೆ. ಮದುವೆಯ ಬಗ್ಗೆ ಆಸಕ್ತಿ ಇಲ್ಲದ ಕಾರಣ, ಒಂದು ಹತ್ತು ವರ್ಷಗಳು ದೇಶ-ವಿದೇಶ ಸುತ್ತಿ, ಅಜ್ಜಿ-ತಾತರನ್ನು ಕೊನೆಗಾಲದಲ್ಲಿ ನೋಡಿಕೊಳ್ಳಲು ಮತ್ತೆ ಇಲ್ಲೇ ನೆಲೆಸಿದೆ. ಅವರಿಬ್ಬರೂ ತೀರಿಕೊಂಡ ನಂತರ ಹೆಣ್ಣುಮಗುವೊಂದನ್ನು ದತ್ತು ಪಡೆದು, ಮಗು, ಮನೆಯತ್ತ ಪೂರ್ಣ ಗಮನ ಹರಿಸಿದೆ. ಅದೆಷ್ಟೋ ವರ್ಷಗಳು ಒಬ್ಬ ಸಂಗಾತಿಗಾಗಿ ದೇಹ ದಹಿಸಿದರೂ, ಬೇರೊಬ್ಬರನ್ನು ಒಪ್ಪಿಕೊಳ್ಳಲಾಗದ ಮನಸ್ಸು ತಣ್ಣಗೆ ಹೆಪ್ಪುಗಟ್ಟಿತ್ತು. ಈಗಂತೂ ಮಗಳು ಸಹಾ ಪದವಿಯ ಓದಿನಲ್ಲಿದ್ದಳು. ಅವಳೊಡನೆ ಬದುಕು ಮತ್ತೆ ಹೊಸ ಯಾತ್ರೆಗೆ ಚಾಲನೆ ಪಡೆದಿತ್ತು.

ooooooooooooooooooooooooooooooooooooooooooooo

ಮೂವತ್ತು ವರ್ಷಗಳ ನಂತರ ಶ್ರೀಪಾದನ ಗೃಹಪ್ರವೇಶದಲ್ಲಿ ಎಲ್ಲರೂ ಸೇರಿದ್ದೆವು. ನಗು, ಹರಟೆ, ದೈಹಿಕ ಬದಲಾವಣೆಗಳು, ಮನೆ, ಕೆಲಸ, ಜೀವನ ಸಂಗಾತಿಗಳ ಪರಿಚಯ, ಮಕ್ಕಳು, ಹವ್ಯಾಸಗಳು, ನಮ್ಮ ನಮ್ಮ ಓದಿನ ದಿನಗಳ ಕಥೆಗಳು, ಪೇಚಿನ ಪ್ರಸಂಗಗಳು, ಟೂರ್, ಪಿಕ್ನಿಕ್, ಶಾಲಾ ವಾರ್ಷಿಕೋತ್ಸವಗಳು, ಪಿ ಟಿ ತರಲೆಗಳು.... ಅಯ್ಯೋ ಒಂದಾ ಎರಡಾ...
ಗಲ್ಲಗಳು ನೋಯುತ್ತಿದ್ದವು ನಗುವಿಗೆ ಹಿಗ್ಗಿ ಹಿಗ್ಗಿ.

ತಾರಸಿಯ ಮೇಲೆ ನಾವೆಲ್ಲ ನಾರಿಯರು ಊಟದ ಟೇಬಲ್ಲಿನ ಕುರ್ಚಿಗಳನ್ನು ತಿರುಗಿಸಿ ಹರಟೆ ಹೊಡೆಯುತ್ತಿದ್ದೆವು. ನರರ ಗುಂಪು ಸಂಜೆಯ ಗುಂಡು ಮೇಜಿನ ಸಭೆಯ ಚರ್ಚೆಯಲ್ಲಿದ್ದರು. ಪಂಕಜ್ ನನ್ನ ಹಿಂದಿದ್ದನ್ನು ಗಮನಿಸಿದ ಮಾಧವಿ ಸನ್ನೆ ಮಾಡಿದಳು. ನಾನು ತಿರುಗಿ ನೋಡಲು, ಆತ "ಕೊಂಚ ಮಾತನಾಡಬೇಕು, ಈಚೆ ಬಾ" ಎಂದು ಸಣ್ಣ

ದನಿಯಲ್ಲಿ ಕೇಳಿದ. ಬಹಳವಾಗಿ ಆತನನ್ನು ಗಮನಿಸಿ, ಆಸಕ್ತಿಯಿಂದ ನೋಡಬೇಕು ಅನ್ನಿಸಲೇ ಇಲ್ಲ. ನನ್ನ ನಿರ್ಭಾವುಕತನ ನನಗೇ ಹೊಸದಾಗಿ ಪರಿಚಯವಾಯಿತು.

ತಾರಸಿಯ ಮೂಲೆಗೆ ಹೋದೆ. ನನ್ನನ್ನು ಅತ್ಯಂತ ಆಸಕ್ತಿಯಿಂದ ಅವಲೋಕಿಸುತ್ತ, ಆತ ಹೇಳಲು ಶುರು ಮಾಡಿದ. "ಇಲ್ಲಿಂದ ಆಸ್ಟ್ರೇಲಿಯಾಗೆ ಹೋದ ನಂತರ ನಾನು ಮತ್ತು ರಿಕ್ಕಿ ಬಹಳ ಪ್ರೀತಿಸಿ ಜೊತೆಯಲ್ಲಿ ವಾಸ ಮಾಡುತ್ತಿದ್ದೆವು. ಹದಿನೈದು ವರ್ಷಗಳ ನಂತರ ಆತ ವಯಸ್ಸಾದ ತಾಯಿಯನ್ನು ನೋಡಿಕೊಳ್ಳಲು ಲಂಡನ್ನಿಗೆ ವಾಪಸ್ಸು ಹೋಗಿಬಿಟ್ಟ. ನಂತರ ಮತ್ತೆ ಎರಡು ಲಿವ್ ಇನ್ ರಿಲೇಶನ್ ಆಯ್ತು. ಯಾಕೋ ಪ್ರೀತಿ ಒಲಿದು ಬರಲೇ ಇಲ್ಲ. ಅಂದ ಹಾಗೆ ನೀನಿನ್ನೂ ಮದುವೆಯಾಗಿಲ್ಲ ಅಂದ್ರು. ಇಬ್ಬರೂ ಸೇರಿ ನಿನ್ನ ಮಗಳನ್ನು ಆಸ್ಟ್ರೇಲಿಯಾದಲ್ಲಿಯೇ ಓದಿಸೋಣ. ಏನಂತೀಯಾ? ನಾನು ಇನ್ನೂ 3 ವಾರಗಳು ಇಂಡಿಯಾದಲ್ಲೇ ಇರ್ತೀನಿ. ಯೋಚಿಸಿ ಹೇಳು" ಎಂದ. ಒಂದು ಸುದೀರ್ಘ ಉಸಿರೆಳೆದವಳೆ,

"ನೀನು ಸ್ವಲ್ಪವೂ ಬದಲಾಗಿಲ್ಲ ಕಣೋ. ಹಿಂದೆಯೂ ಯೋಜನೆ ಮಾಡ್ತಿದ್ದೆ, ಈಗಲೂ ಮಾಡ್ತಿದಿಯಾ. ಆದರೆ ನಾನು ಯಾರ ನೆರವೂ ಇಲ್ಲದೆ ಅದನ್ನು ಕಾರ್ಯಗತ ಮಾಡುವುದನ್ನು ಕಲ್ತಿದೀನಿ." ಎನ್ನುತ್ತಾ ಗೆಳತಿಯರೆಡೆಗೆ ನಡೆದೆ.

19. ಸೀತಾರಮ್ ಕಟ್ಟಿ



ಮುಕ್ತಳಾಕೆ

ಕಂದ,
ಹೂ ಎಸಳ ಮೆದುತನವ ಹೊದ್ದು ಏಳ್ಗೆಯ ಹೊಂದಿ
ಹಾಲ್ಬಾನಿನುದ್ದಕ್ಕೂ ಗರಿಬಿಚ್ಚಿ ಹಾರಾಡಿ
ದಿಟ ಸುಳ್ಳುಗಳ ಗೊಡವೆ ವೇದಾಂತಿಗಳ ಸೊತ್ತು
ಎಂದು ನಂಬಿದ ಮುಗ್ಧ ಜೀವಳಾಕೆ
ಮುಕ್ತ ಛಂದದ ತೆರನೆ ಮುಕ್ತಳಾಕೆ...

ಪರಿಣಯದ ಗಡಿದಾಂಟಿ ಪ್ರಣಯ ದೇವತೆಯಾಗಿ
ಎನ್ನ ಜೀವನ ಪಯಣ ಜೋಡಿಯಾಗಿ
"ಬರೀ ಪ್ರೀತಿ ಅದೇ ನೀತಿ" ಪ್ರೇಮ ಯೋಗದ ತತ್ವ
ಸಾರಿ ತೋರಿದ ಶುದ್ಧ ಜೀವಳಾಕೆ
ಮುಕ್ತ ಛಂದದ ತೆರನೆ ಮುಕ್ತಳಾಕೆ...

ನೀನು ಗರ್ಭದಿ ಮೂಡಿ ಜನನಿ ಸಹಜದ ಕಳೆಯು
ಅವಳ ಹೂ ಮೊಗದಲ್ಲಿ ಹೊಳೆಯುತಿರಲು
ತನ್ನ ಕರುಳಿನ ಕುಡಿಯು ತನ್ನ ವಂಶಕೆ ದೀಪ
ಎಂದೆಲ್ಲ ಸವಿಗನಸ ಕಂಡಳಾಕೆ
ಮುಕ್ತ ಛಂದದ ತೆರನೆ ಮುಕ್ತಳಾಕೆ..

ತನ್ನ ಸ್ತ್ರೀತನದರಿವ ಆ ನವ ನವೀನ ಮಾಸದಲಿ
ತನ್ನ ಮೈಮಾಟದ ಶ್ರದ್ಧೆ ಬಿಟ್ಟಳಾಕೆ
ಕ್ಷಣ ಕ್ಷಣದಿ ನರಳುತ್ತ ,ಅತ್ತಿತ್ತ ಹೊರಳುತ್ತ
ನೆಮ್ಮದಿಯ ನಿದ್ದೆಯ ಮರೆತಳಾಕೆ
ಮುಕ್ತ ಛಂದದ ತೆರನೆ ಮುಕ್ತಳಾಕೆ...

ವರ್ಣನೆಯ ಭರದಲ್ಲಿ ನಾ "ಹೂ" ಎನಬಹುದು
ನಿಜದಲ್ಲಿ ಆ ಭಾರ ಸುಮಭಾರವಲ್ಲ
ನಿನ್ನ ಮಾತಿನ ಮುದ್ದು ,ಶಿಶು ಸಹಜ ತುಂಟಾಟ
ಕಣ್ಣಲ್ಲೆ ನೆನೆಯುತ್ತ ಹೊತ್ತಳಾಕೆ..
ಮುಕ್ತ ಛಂದದ ತೆರನೆ ಮುಕ್ತಳಾಕೆ...

ಪ್ರಸವ ವೇದನೆಯನ್ನು ಹೆಣ್ಣೇಕೆ ಪಡಬೇಕು?
ತಾಯ್ತನದ ಸಿಹಿಸೌಖ್ಯ ಮುನ್ನೋಟ ಅಹುದೇ?
ಮೈಯ ಸೀಳುವ ನೋವ, ರಕ್ತ ಲೇಪಿತ ಮಗುವ
ಅಳುವನ್ನು ಕೇಳುತ್ತ ಮರೆತಳಾಕೆ
ಮುಕ್ತ ಛಂದದ ತೆರನೆ ಮುಕ್ತಳಾಕೆ...

ಕಂದ,
ಉಪಕಾರವೆಂದಲ್ಲ, ಸಾಧನೆ ಇದೆಂದಲ್ಲ
ಪ್ರೀತಿ ಹಂಚುವ-ಮರಳಿ ಪಡೆಯುವ ರೀತಿ
ನನಗೆ ಹಂಚಿದ ಶೇಷ ದಶಾಂಗುಲ ಒಲವನ್ನು
ನಿನ್ನ ಮನದೋಟದಿ ಸೋನೆ ಸುರಿದಳಾಕೆ
ಮುಕ್ತ ಛಂದದ ತೆರನೆ ಮುಕ್ತಳಾಕೆ...

ಮನುರಾಜನುಲಿದಿರುವ ಉಕ್ತಿ ಹೇಳುವೆ ಕೇಳು
ಬಾಲ್ಯದಲಿ ಹೆಣ್ಣಿಗೋ ತಂದೆ ಶ್ರೀರಕ್ಷೆ
ತಾರುಣ್ಯದಲಿ ಪತಿಯು, ವಾರ್ಧಕ್ಯದಲಿ ಮಗನು
ಹೀಗಿರಲು ಅವಳಿಗೂ ಸ್ವಾತಂತ್ರ ಬೇಕೇ ?

ತಂದೆಯಲ್ಲಿನ ಅವಳ ಸ್ಥಿತಿಯೇನೊ ನಾ ಕಾಣೆ
ನನ್ನ ಜೊತೆಯಲಿ ಮುಕ್ತ ಸರಿತೆ ಆಕೆ
ಗಗನದಲಿ ಗರಿಬಿಚ್ಚಿ ಹಾರಾಡಿ ನಲಿವ ಖಗ
ಕವಿ ಮನದ ಸ್ವಚ್ಛಂದ ಕವಿತೆ ಆಕೆ
ಮುಕ್ತ ಛಂದದ ತೆರನೆ ಮುಕ್ತಳಾಕೆ...

ನಾನಿಲ್ಲದಿರುವಾಗ ಅವಳ ಬಂಧಿಸಬೇಡ
ಅವಳ ನಿಂದಿಸಬೇಡ, ಸುಖಕೆ ಸ್ವಂತಿಕೆ ಇರಲಿ
ಸ್ವಾತಂತ್ರವಿರಲಿ
ಮನುವ ಹೇಳಿಕೆಯನ್ನು ಕೊಲ್ಲುವಂತಿರಲಿ ಮಗು
ಕೊನೆತನಕ ಅವಳಲ್ಲಿ ಪ್ರೀತಿಯಿರಲಿ

ನಿನಗಾಗಿ ಮಾಡಿರುವ ತ್ಯಾಗಕೆಂದಲ್ಲವೋ
ನಿನ್ನ ಸಿಹಿ ಮುದ್ದಿನಲಿ ಹೆತ್ತುದಕ್ಕಲ್ಲ
ನಿನಗೆ ನೋವಾದಾಗ ತಾನು ಮನದಲಿ ನೊಂದು
ಕ್ಷಣಕ್ಷಣಕು ಮನದಲ್ಲಿ ಸತ್ತುದಕ್ಕಲ್ಲ
ತಾಯ ಪ್ರೀತಿಗೆ ಬೇಡ ಅಭಿನಂದನೆಯ ಗರಿ
ಧನ್ಯವಾದದ ಬಿರುದು ತಲೆಯಬಾಗಿ
ಪ್ರೀತಿಯನೆ ಬೇಡುವಳು ಪ್ರೀತಿಯನೆ ನಂಬುವಳು
ಪ್ರೀತಿಯನೇ ಕಲಿಸಿರುವ ನೀತಿಗಾಗಿ

– ಜಾನಕಿರಾಮು

ಶ್ರೀಮತಿ ಸುವರ್ಣಲಕ್ಷ್ಮಿ ಎಮ್.ಎಚ್.



ಅಧ್ಯಕ್ಷೀಯ ನುಡಿಗಳು-

ನೋಡಿಯೋ ಸಾಹಿತ್ಯ ದಾಸೋಹ ಗುಂಪಿಗೆ ಧನ್ಯವಾದಗಳು ಅಧ್ಯಕ್ಷ ಸ್ಥಾನ ಕೊಟ್ಟು ತಮ್ಮೆಲ್ಲರ ಬರಹಗಳನ್ನು ಆಲಿಸುವ ಅವಕಾಶ ಕೊಟ್ಟಿದ್ದೀರಿ.

ಮೊದಲನೆಯದಾಗಿ **ಸುಜಾತ ರವೀಶ್** ಅವರ ಬದುಕು ಪಗಡೆ ಯಲ್ಲಿ ಬದುಕನ್ನು ಪಗಡೆಗೆ ಹೋಲಿಸಿಲಾಗಿದೆ ಹಾಗೂ ಮೋಜಿಗಾಗಿ ಇರಲಿ ಪಗಡೆ ಜೂಜಿಗಾಗಿ ಬೇಡ ಎನ್ನುವ ಎಚ್ಚರಿಕೆಯೂ ಇದೆ.

ಶಾಂತಿವಾಸು – ಪ್ರೀತಿ ತುಂಬಿದ ಕವನದಲ್ಲಿ "ಸಾವಿರದ ಪ್ರೀತಿಯೆರೆದು ಸಾವಿರ ಆಸೆ ತಂದವ ನೀನೇ" ಎಂಬ ವಾಕ್ಯ ಸೊಗಸಾಗಿದೆ. ಪ್ರಿಯಕರನು ದೈಹಿಕ ಆಕರ್ಷಣೆಗಾಗಿ ಪ್ರೀತಿಸಿದ್ದಲ್ಲ ಅದಕ್ಕೇ ನನ್ನೊಡೆಯನಾದ ಅನ್ನುವ ಭಾವ ಸೊಗಸಾಗಿದೆ.

ಎನ್ ವಿ ರಘುರಾಂ – ಸಚಿನ್ ತೀರ್ಥಹಳ್ಳಿ ಅವರ c/O ಚಾರ್ಮಾಡಿ ಪುಸ್ತಕದ ಪರಿಚಯ ಸೊಗಸಾಗಿತ್ತು. ಇದರಲ್ಲಿ ಚಾರ್ಮಾಡಿಯ ಸೌಂದರ್ಯದ ವರ್ಣನೆ ಇದೆ. ಹೇರ್ ಪಿನ್ ಕರ್ವ್ ಗಳಿವೆ, ಡ್ರೈವರ್ ಗಳ ಚಾಲನೆಗೆ ಸಿದ್ಧ ಸೂತ್ರಗಳಿಲ್ಲದಂತೆ ಜೀವನಕ್ಕೂ ಸಿದ್ಧ ಸೂತ್ರಗಳಿಲ್ಲ ಅವರವರ ಜೀವನವನ್ನು ಅವರೇ ರೂಪಿಸಿಕೊಂಡು ಗುರಿ ತಲುಪಬೇಕು ಅನ್ನುವ ಭಾವ ಇದೆ. "ಕತೆಯೆಂದರೆ ಮಿಂಚೊಂದು ಆಗಸದಲ್ಲಿ ಮೂಡಿ ಮರೆಯಾದವರು " ಎಂಬ ಸಚಿನ್ ರ ಮಾತು ಸೊಗಸಾಗಿದೆ.

ಭಗವಾನ್ – ಆಲೂ ಎನ್ನುವ ಹಾಲಿನ ಹುಡುಗನ ಜೊತೆ ಸಂವಾದ ಸರಸವಾಗಿದೆ. ಹರಿಯು ಅರಿಯಾಗಿ, ಹರನು ಅರನಾಗಿ, ಹಾದರವು ಆದರವಾಗಿ ಹಾಸನವು ಆಸನವಾಗಿ , ಹಲಸೂರು ಅಲಸೂರಾಗಿ ಮತ್ತೆ ಕನ್ನಡದ ಉಟ್ಟು ಹೋರಾಟಗಾರರಿಂದ ಹಲಸೂರಾದ ಅಲ್ಪ, ಮಹಾಪ್ರಾಣಗಳ ಚರ್ಚೆ ಸೊಗಸಾಗಿದೆ. ದೂದ್ ಕಾ ದೂದ್ ಪಾನೀ ಕಾ ಪಾನೀ ಕಥೆ

ಚೆನ್ನಾಗಿತ್ತು.

ಗಣಪತಿ ಹೆಗಡೆ – ಕಾವ್ಯ ಹಾಗೂ ರಸೋತ್ಪತ್ತಿ ಲೇಖನ ಪ್ರಭುದ್ಧತೆ ಹಾಗೂ ಪ್ರೌಢಿಮೆಯಿಂದ ಕಂಡಿತ್ತು. ಇದರಲ್ಲಿ ಸಾಹಿತ್ಯದ ಪ್ರಕಾರಗಳ ಚರ್ಚೆ ಇದೆ. ನೀರಸ ಸಾಹಿತ್ಯ, ಅಕಾಡೆಮಿಕ್ ಸಾಹಿತ್ಯ ಎಂಬ ಹೊಸ ಪ್ರಕಾರಗಳ ಪ್ರಸ್ತಾಪ ಇದೆ. ರಸಾನುಭವದ ವ್ಯಾಖ್ಯೆ ಸೊಗಸಾಗಿವೆ. ವೇದ, ಶಾಸ್ತ್ರ, ಕಾಯಿದೆ, ಸಂವಿಧಾನ, ವ್ಯಕ್ತಿ ಚಿತ್ರಣ, ವಿಮರ್ಷೆ ಇವೆಲ್ಲಾ ಕಾವ್ಯಗಳಲ್ಲ ಕೇವಲ ಬರಹಗಳು ಅನ್ನುವ ಭಾವ ಚೆನ್ನಾಗಿದೆ.

ವಿಠ್ಠಲ ಇಜೇರಿ – ಇವರ ಲೇಖನದಲ್ಲಿ ನಯಸೇನರ ಪರಿಚಯ ಹಾಗೂ ಅವರ ಸಾಹಿತ್ಯದಲ್ಲಿ ಅಡಕವಾಗಿರುವ ಸಾಹಿತ್ಯಕ ಅಂಶಗಳ ಪರಿಚಯ ಚೆನ್ನಾಗಿದೆ. ಅನಾಸಕ್ತ ಅನಂತಮತಿ ಕಥೆ ಸೊಗಸಾಗಿದೆ. ಜಿನನಿಗೆ ಶರಣಾದವನಿಗೆ ಕಾಡು ಪ್ರಾಣಿಗಳು ತೊಂದರೆ ಕೊಡುವುದಿಲ್ಲ ಎಂಬ ಸಂದೇಶ ಚೆನ್ನಾಗಿದೆ.

ಅನ್ನಪೂರ್ಣ – ಇವರ ಸ್ವಾನುಭವ ಲೇಖನದಲ್ಲಿ ಹಿರಿಯರಿಗೆ ತಮ್ಮ ಮನೆ ಮಕ್ಕಳ ಬಗೆಗಿನ ಕಾಳಜಿಯ ಬಗೆಗಿನ ಪ್ರಸ್ತಾಪವಿದೆ ಹಿರಿಯರು ಮನೆಯಲ್ಲಿ ಇಲ್ಲದಿದ್ದಾಗ ಅವರ ಬೆಲೆ ನಮಗೆ ತಿಳಿಯುತ್ತದೆ.

ಗಿರಿಜಾರಾಜ್ – ಜೀವನದಲ್ಲಿ ನಡೆಯುವ ಘಟನೆಗಳು ಘಟಿಸಿದಾಗ ಹಾಸ್ಯವೆನಿಸದಿದ್ದರೂ ಅದನ್ನು ಮೆಲುಕು ಹಾಕುವಾಗ ನಗೆ ಬುಗ್ಗೆ ಉಕ್ಕಿಸುತ್ತವೆ ಎಂಬ ಗಿರಿಜಾ ರವರ ಮಾತು ಸತ್ಯ ಇತ್ತೀಚೆಗೆ ಸಮಾಜ ಶಾಸ್ತ್ರ ವೇ ಅಲ್ಲ ಈಗಿನ ಶಿಕ್ಷಣ ವ್ಯವಸ್ಥೆಯಲ್ಲಿ ಎಲ್ಲವೂ ಸಮಾಜ ಶಾಸ್ತ್ರವೇ ಪ್ರಸ್ತುತ ಶಿಕ್ಷಣ ವ್ಯವಸ್ಥೆಗೆ ಹಿಡಿದ ಕನ್ನಡಿ ಈ ಲೇಖನ.

ಶೀಲಾ ಅರಕಲಗೂಡು – ಆಟೋದವರ ಪ್ರಾಮಾಣಿಕತೆಯ ಕಥೆ ಸೊಗಸಾಗಿದೆ ಕಳೆದ ವಸ್ತುವನ್ನು ಹುಡುಕುವ ನಾಯಕನ ಪ್ರಾಮಾಣಿಕ ಪ್ರಯತ್ನ ವೂ ಸಹ ಶ್ಲಾಘನೀಯ.

ಕಮಲಾಕ್ಷಿ ಸಿ ಆರ್ – ಮೊಗ್ಗಿನ ಅರಳುವ ಪ್ರಕ್ರಿಯೆಯು ಜಾತಿ ನೀತಿಯ

ಬಿಟ್ಟು, ಸ್ವಚ್ಛ ಬಾಲ್ಯ ಅನುಭವಿಸಿ, ಶತಶತಮಾನದ ಕೊಳೆಯ ಒರೆಸಿ, ಜ್ಞಾನ ಹರಿಸಿ, ನಡೆಯುವ ಪ್ರಕ್ರಿಯೆ ಚೆನ್ನಾಗಿ ಮೂಡಿಬಂದಿದೆ

ನಾಗರತ್ನ ಚಂದ್ರಶೇಖರ – ಉಚಿತ ಖಚಿತವಾಗುವ ವಿಡಂಬನೆಯು ಸೊಗಸಾಗಿದೆ. ಗೃಹಲಕ್ಷ್ಮೀ ಗೃಹೋಪಯೋಗಿ ಬಂದು ವಾಕಿಂಗ್ ಮಿಷನ್ ಗೀಸರ್ ವ್ಯಾಪಾರ ಜೋರಾಗಿ ಫ್ರೀ ಬಸ್ ಬಂದು ದೇವಾಲಯಗಳ ಆದಾಯ ಹೆಚ್ಚಾಯಿತು ನಿರುದ್ಯೋಗ ಭತ್ಯೆ ಕೊಟ್ಟು ಯುವಜನತೆ ತಿರುಗಾಟ ಹೆಚ್ಚಾಯ್ತು ಅನ್ನುವ ವಾಸ್ತವದ ವರ್ಣನೆ ಚೆನ್ನಾಗಿದೆ.

ಮಾಧುರಿ ಕೃಷ್ಣ – ಕಾಲೇಜಿನ ಸವಿನೆನಪುಗಳ ಸರಮಾಲೆಯೇ ಈ ಲೇಖನ ಕಾಲೇಜಿನ ಮೆಟ್ಟಿಲು ಹತ್ತಿರುವವರಿಗೆ ಈಲೇಖನ ತಮ್ಮ ಕಾಲೇಜಿನ ನೆನಪುಗಳನ್ನು ಸವಿಯುವಂತೆ ಮಾಡುತ್ತದೆ. ತಮ್ಮ ಸಹಪಾಠಿಯ ನಿಜಸ್ವರೂಪ ತಿಳಿಯಲು ಇಷ್ಟು ಸಮಯ ಹಿಡಿದಿದ್ದು ಅಚ್ಚರಿಯೇ ಸರಿ.

ರೇಣುಕಾದೇಸಾಯಿ – ಶ್ರೀವತ್ಸ ಜೋಷಿ ಅವರ ಪ್ರೇರಣೆಯಿಂದ ಬರೆದ ಕವನ ಛಂದ

"ಸುಖ ಇರುವ ಕಡೆ ಶಿವನಿರುವ,
ಖ"ುಷಿಯಿರುವ ಕಡೆ ಶಿವಸುತನಿರುವ"
"ಎದಲಡಗಿದನೆಲ್ಲ ಹೇಳಬಾರದು ಒಳಿತನ್ನೇ ಹೇಳಬೇಕು"
"ಮಿತಿಯಲ್ಲಿ ಮತಿಯಲ್ಲಿ ತಾಳ್ಮೆಯಿಂದ ನಡೆದರೆ
ಮನುಜ ಸರಿ ಗುರಿಯನ್ನು ತಲುಪುವನು"

ಚಂದಕ್ಕಿಂತ ಛಂದದ ವಾಕ್ಯಗಳು

ಮಾಲತಿ ಶ್ರೀನಿವಾಸನ್ - ಅರಿಝೋನ ಬೆಟ್ಟಗಳಲ್ಲಿನ ಮಾಲತಿಯವರು ಲಿಂಗರೂಪಿ ಶಿವ , ಕೇಶವ , ದಸರಾಬೊಂಬೆಗಳನ್ನು ಕಂಡು ನಮಗೂ ವಿವರಿಸಿದರು. ದೃಷ್ಟಿಯಂತೆ ಸೃಷ್ಟಿ "ಶಿಲೆಗಳು ಸಂಗೀತವಾ ಹಾಡಿವೆ ಅಂದ ಕವಿ,ಪದರಗಳು ಅನ್ನುತ್ತಾರೆ ವಿಜ್ಞಾನಿಗಳು. ಶಿಲೆಯಲ್ಲವೀ ಕಲೆಯ ಬಲೆ ಅನ್ನುತ್ತಾರೆ ಕಲಾವಿದರು.

ಪೋರ - ಪೋರರು ಎರಡು ಜಾನಪದ ಕಥೆಗಳನ್ನು ಪ್ರಸ್ತುತ ಪಡಿಸಿದರು. ಐರ್ಲೆಂಡ್ ನ ಪ್ರಕೃತಿಯ ವಿಸ್ಮಯಗಳನ್ನು ಕಂಡು ಜನರು ಕಟ್ಟಿದ ಕಥೆಗಳವು . ಒಂದು ಕಥೆಯಲ್ಲಿ ಹೆಂಡತಿಯ ಜಾಣ್ಮೆಯಿದೆ. ಮತ್ತೊಂದರಲ್ಲಿ ಪ್ರೇಮಿಗಳನ್ನು ಬೇರೆ ಮಾಡುವ ಅಜ್ಜಿಯ ಕಥೆಯಿದೆ.

ಆಂಟ್ರಿವಲ್ ಹಾಗೂ ಜೈಂಟ್ ಕಾಸ್ ವೇ ಉಂಟಾದ ಬಗೆ ಚೆನ್ನಾಗಿ ವಿವರಿಸಿದ್ದಾರೆ.

ವೆಂಕಟಕಾಮತ್– ಮಮತಾ ಹಾಗೂ ಗೆಜ್ಜೆಪೂಜೆ ಚಿತ್ರಗಳ ಸಂಕ್ಷಿಪ್ತ ಪರಿಚಯ ಸೊಗಸಾಗಿದೆ. ಇಂತಹ ಹೆಣ್ಣುಮಕ್ಕಳಿಗೆ ಸಹಾಯ ಮಾಡಿದ ಎಲ್ಲರೂ ಪ್ರಾತಃಸ್ಮರಣೀಯರೇ ಇದನ್ನು ಕೇಳಿದಾಗ ಗೆಜ್ಜೆಪೂಜೆಯ ಕಲ್ಪನಾ ನಮ್ಮ ಕಣ್ಣ ಮುಂದೆ ಹಾಗೇ ಹಾದು ಹೋಗುತ್ತಾರೆ. ದುದ್ದಕ್ಕೂ ಸಹಾಯ ಮಾಡಿದ ಕಾಮತರ ತಾಯಿ ಆದರ್ಶನೀಯರು

ಕೆ ಎನ್ ಮಹಾಬಲ - ಹಕ್ಕಿಗಳ ಬಗ್ಗೆ ಬರೆಯುತ್ತಿದ್ದ ಕವಿ ಹಕ್ಕಿ ಮನೆಯೊಳಗೆ ಬಂದಾಗ ಕಲಿತ ಎಲ್ಲ ವಿದ್ಯೆಗಳ ಪ್ರಯೋಗಿಸಿ ಹೋರಾಟ ನಡೆಸಿ ತನ್ನ ಕವಿತೆಗೆ ಸ್ಪೂರ್ತಿಯಾದ ಸುಂದರ , ಸುಮಧುರ ಧ್ವನಿಯನ್ನು ಮಾಡುವ ಹಕ್ಕಿಯಲ್ಲ ಓಡಿಸಿ ಮತ್ತೆ ನಿಶ್ಚಿತವಾಗಿ ಹಕ್ಕಿಯ ಬಗ್ಗೆ ಕವನ ಬರೆಯಲು ಕುಳಿತ ಕವಿಯೇ ಭೇಷ್

ರಾಧಿಕಾ ವಿ ಗುಜ್ಜರ್ –

"ಬದುಕು ಸುಳ್ಳಿನ ಸಿಹಿಯೊಡನೆ ಪ್ರಾರಂಭವಾಗಲಿಲ್ಲ
ಸದ್ಯ ಸತ್ಯದ ಕಹಿಯೊಡನೆ ಮುಂದುವರೆಯಿತು"
"ಸರಿಯಾದದ್ದು ಕೇವಲ ಕಾಲ ಜೀವನ ಅಲ್ವಲ್ಲಾ"

ಬದುಕು ಅಂದರೆ ಪ್ರೀತಿಸಿದವರನ್ನು ಮದುವೆ ಆಗುವುದಷ್ಟೇ ಅಲ್ಲ ಅನಾಥ ಮಗುವಿಗೆ ಬಾಬು ಕೊಡುವುದೂ ಬದುಕೇ

ಸೀತಾರಾಮ ಕಟ್ಟೀ - ಹೆಣ್ಣಿಗೆ ದೇವತೆಯ ಪಟ್ಟ ಕೊಟ್ಟು ತನ್ನ ನಂತರ ತನ್ನ ಪತ್ನಿಗೆ ಸ್ವಾತಂತ್ರ್ಯ ಕೊಡಲು ತನ್ನ ಮಗನಿಗೆ ಹೇಳುವ ತಂದೆ ಭೇಷ್

ಪ್ರೀತಿಯೆ ಬೇಡುವಳು,
ಪ್ರೀತಿಯೆ ನಂಬುವಳು
ಪ್ರೀತಿಯನೇ ಕಲಿಸಿದಳು
ಪ್ರೀತಿ ನೀಡು ಅಷ್ಟೇ

ವಾಹ್ ಎಂತಹಾ ಕಲ್ಪನೆ